ಸಂಪುಟ: 04 ಸಂಚಿಕೆ: 38 ಪುಟಗಳು: 08 ಸೋಮವಾರ 22 ಏಪ್ರಿಲ್ 2024 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**
ಎಲ್ಲರ ಬದುಕೂ ಒಂದು ಪುಸ್ತಕವೇ. ಅದರಲ್ಲಿ ತಪ್ಪುಗಳು ಇರುವುದು ನಿರೀಕ್ಷಿತ. ಆದರೆ ದೋಷಗಳಾಗದಂತೆ ನಿಗಾವಹಿಸಿ ಬದುಕೆಂಬ ಪುಸ್ತಕದ ಮೌಲ್ಯ ಹೆಚ್ಚಿಸೋಣ...

## ಮೋದಿ ಬಿಟ್ಟರೆ ಪ್ರಧಾನಿಯಾಗಲು ಯಾರಿಗೂ ಯೋಗ್ಯತೆ ಇಲ್ಲ

• ಉದಯವಾಹಿನಿ, ಹಾಸನ

ಗ್ಯಾರೆಂಟಿ ಹೆಸರಿನಲ್ಲಿ ಜನರಿಗೆ ಮೋಸ ಮಾಡೋದು ಬೇಡಾ. ಮೋದಿ ಬಿಟ್ಟರೆ ಪ್ರಧಾನಿ ಆಗಲು ಬೇರೆ ಯಾರಿಗೂ ಯೋಗ್ಯತೆ ಇಲ್ಲ ಎಂದು ಮಾಜಿ ಪ್ರಧಾನಿ ಹೆಚ್.ಡಿ ದೇವೇಗೌಡ ಹೇಳಿದ್ದಾರೆ.

ಹೊಳೆನರಸೀಪುರದಲ್ಲಿ ಪ್ರಚಾರದ ವೇಳೆ ಮಾತನಾಡಿದ ಅವರು, ಮೋದಿಯವರಿಗೆ ನೀರಿನ ಸಮಸ್ಯೆ ಅರ್ಥ ಆಗಿದೆ.

ಕಾವೇರಿ ನೀರು ಹರಿಸಬೇಕು ಇದು ನಾನು ಬದುಕಿರೊವಾಗಲೇ ಆಗಬೇಕು ಎಂದು ಮನವಿ ಮಾಡಿದ್ದೇನೆ. ಅದಕ್ಕೆ ಮೋದಿ ನಾನೇ ಏನಾದ್ರೂ ಮಾಡುತ್ತೀನಿ ಎಂದಿದ್ದಾರೆ. ಮೋದಿಯವರು ಮಹಿಳೆಯರಿಗೆ ಶಕ್ತಿ ತುಂಬುವ ಕೆಲಸ ಮಾಡುತ್ತಿದ್ದಾರೆ. ಹಾಗೂ 85 ಕೋಟಿ ಜನಕ್ಕೆ ಮೋದಿ ಅಕ್ಕಿ ಕೊಡ್ತಾ ಇದಾರೆ.. ಅವರಿಗಾಗಿ ನಾವು ಕರ್ನಾಟಕದಲ್ಲಿ 28 ಕ್ಕೆ 28. ಸ್ಥಾನ ಗೆಲ್ಲಬೇಕು ಎಂದರು.

## ಮಾಜಿ ಸಿಎಂ ಎಸ್.ಎಂ. ಕೃಷ್ಣ ಆಸ್ಪತ್ರೆಗೆ ದಾಖಲು

• ಉದಯವಾಹಿನಿ, ಬೆಂಗಳೂರು

ಮಾಜಿ ಸಿಎಂ ಎಸ್‌ಎಂ ಕೃಷ್ಣ ಅವರ ಆರೋಗ್ಯದಲ್ಲಿ ಏರುಪೇರು ಉಂಟಾಗಿದ್ದು, ನಗರದ ಖಾಸಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ತೀವ್ರ ಜ್ವರದ ಹಿನ್ನೆಲೆ ಎಸ್‌ಎಂ ಕೃಷ್ಣ ಆಸ್ಪತ್ರೆಗೆ ದಾಖಲಾಗಿದ್ದಾರೆ. ಕಳೆದ 4 ದಿನಗಳಿಂದ ಅವರು ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇತ್ತೀಚೆಗೆ ತೀವ್ರ ಜ್ವರದಿಂದ ಬಳಲುತ್ತಿದ್ದ ಅವರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಇದೀಗ ಮತ್ತೆ ಶೀತ-ಜ್ವರದ ಹಿನ್ನೆಲೆ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ. ಭಾನುವಾರ ಬೆಳಗ್ಗೆ ಡಿಸಿಎಂ ಡಿಕೆ ಶಿವಕುಮಾರ್ ಅವರು ಮಾಜಿ ಸಿಎಂ ಅವರ ಆರೋಗ್ಯ ವಿಚಾರಿಸಿದ್ದಾರೆ. ಎಸ್‌ಎಂ ಕೃಷ್ಣ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ ಎಂದು ವೈದ್ಯರು ಮಾಹಿತಿ ನೀಡಿದ್ದಾರೆ.

## ರಮೇಶ್ ಕುಮಾರ್ ನಾಲಿಗೆಯನ್ನ ಗೋಮೂತ್ರದಲ್ಲಿ ತೊಳಿಬೇಕು

• ಉದಯವಾಹಿನಿ, ಬೆಂಗಳೂರು

ಪ್ರಧಾನಮಂತ್ರಿ ನರೇಂದ್ರ ಮೋದಿಯವರನ್ನು ಶನಿ ಎಂದು ಮಾಜಿ ಸ್ಪೀಕರ್ ರಮೇಶ್ ಕುಮಾರ್ ಅವರ ಹೇಳಿಕೆಗೆ ಇದೀಗ ತೀವ್ರ ವಿರೋಧ ವ್ಯಕ್ತವಾಗುತ್ತಿದ್ದು, ಬೆಂಗಳೂರಿನಲ್ಲಿ ಚಲವಾದಿ ನಾರಾಯಣ ಸ್ವಾಮಿ ಅವರು ರಮೇಶ್ ಕುಮಾರ್ ಅವರ ನಾಲಿಗೆಯನ್ನು ಗೋಮೂತ್ರದಲ್ಲಿ ತೊಳೆಯಬೇಕು ಎಂದು ಆಕ್ರೋಶ ಹೊರಹಾಕಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಮಾಜಿ ಸ್ಪೀಕರ್ ರಮೇಶ್ ಕುಮಾರ್ ಜನ್ಮಕ್ಕೆ ನಾಚಿಕೆ ಆಗಬೇಕು.ರಮೇಶ್ ಕುಮಾರ್ ನಾಲಿಗೆಯನ್ನು ಯಾವುದರಲ್ಲಿ ತೊಳಿಬೇಕು ಹೇಳಿ ಗೋಮೂತ್ರ ಹಾಕಿ ರಮೇಶ್ ಕುಮಾರ್ ನಾಲಿಗೆ ತೊಳೆಯಬೇಕಾ ರಮೇಶ್ ಕುಮಾರ್ ವಯಸ್ಸಿಗೆ ತಕ್ಕ ಹಾಗೆ ಮಾತನಾಡಿದ್ದಾರಾ ಎಂದು ತಿಳಿಸಿದರು.

ಕೋಲಾರದಲ್ಲಿ ರಮೇಶ್ ಕುಮಾರ್‌ಗೆ ಸ್ವಾಮಿ ಸ್ವಾಮಿ ಅಂತ ಕರೆಯುತ್ತಾರೆ. ಅದೇ ರೀತಿಯಾಗಿ ಅವರು ವರ್ತಿಸಿದ್ದಾರೆ. ರಮೇಶ್ ಕುಮಾರ್ ಬಹುಶಹ ಕಾಂಗ್ರೆಸ್ಸಿಗೆ ಸಿದ್ದರಾಮಯ್ಯ ಶನಿ ಅಂತಿರಬೇಕು. ನಾವು ಕಟ್ಟಿದ ಮನೆಯಲ್ಲಿ ಬಂದು ಒಕ್ಕರಿಸಿಕೊಂಡಿದ್ದಾನೆಂದು ಹೇಳಿರಬೇಕು. ನರೇಂದ್ರ ಮೋದಿ ಕಾಂಗ್ರೆಸ್‌ಗೆ ಶನಿ ಥರಾನೇ ಕಾಣಿಸಿದ್ದರೆ ಸ್ವಾಗತಿಸುತ್ತೇನೆ. ಮೋದಿ ಕಾಂಗ್ರೆಸ್ ಪಾಲಿಗೆ ಶನಿನೇ ಎಂದು ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

## ಪೊಲೀಸ್ ಅಧಿಕಾರಿಗಳ ಮೂಲಕ ಫೋಟೊ ಹಂಚಿಕೆ: ಶಾಸಕ


• ಉದಯವಾಹಿನಿ, ಹುಬ್ಬಳ್ಳಿ


ವಿದ್ಯಾರ್ಥಿನಿ ನೇಹಾ ಕೊಲೆ ಮಾಡಿದ ಆರೋಪಿ ಫಯಾಜ್ ಮೊಬೈಲ್'ನಲ್ಲಿದ್ದ ಫೋಟೊಗಳನ್ನು ರಾಜ್ಯ ಸರ್ಕಾರ ಪೊಲೀಸ್ ಅಧಿಕಾರಿಗಳ ಮೂಲಕವೇ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆ ಮಾಡಿಸುತ್ತಿದೆ' ಎಂದು ಬಿಜೆಪಿ ಶಾಸಕ ಮಹೇಶ ಟೆಂಗಿನಕಾಯಿ ಆರೋಪಿಸಿದ್ದಾರೆ. ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ನೇಹಾಳನ್ನು ಕೊಲೆ ಮಾಡಿದ ನಂತರ ಆರೋಪಿಯ ಮೊಬೈಲ್ ಪೊಲೀಸರ ಬಳಿಯಿತ್ತು.ಈಗ ಆ ಮೊಬೈಲ್‌ನಲ್ಲಿದ್ದ ಫೋಟೊಗಳನ್ನು ಹಂಚಿಕೆ ಮಾಡುವ ಮೂಲಕ, ಅವಳ ಕುಟುಂಬಕ್ಕೆ ಕೆಟ್ಟ ಹೆಸರು ತರುವ ಯತ್ನ ನಡೆದಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಕರಣದ ಕುರಿತು ರಾಜ್ಯ ಸರ್ಕಾರ ಈವರೆಗೂ ಯಾವುದೇ ಸ್ಪಷ್ಟತೆ ನೀಡಿಲ್ಲ. ಒಂದು ಕಡೆ ಗೃಹ ಸಚಿವರು ಆಕಸ್ಮಿಕ ಎನ್ನುತ್ತಾರೆ, ಇನ್ನೊಂದೆಡೆ ಮುಖ್ಯಮಂತ್ರಿ ವೈಯಕ್ತಿಕ ಎಂದು ಹೇಳಿಕೆ ನೀಡುತ್ತಾರೆ. ಅವಳ ಕುಟುಂಬಕ್ಕೆ ಸಾಂತ್ವನ ಹೇಳುವುದನ್ನು ಬಿಟ್ಟು, ಇನ್ನಷ್ಟು ತೊಂದರೆ ಕೊಡುವ ಕೆಲಸ ಮಾಡುತ್ತಿದ್ದಾರೆ' ಎಂದು ಕಿಡಿಕಾರಿದರು. ಸೌಜನ್ಯಕ್ಕಾದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ನೇಹಾ ಮನೆಗೆ ಬಂದು ಕುಟುಂಬದವರಿಗೆ ಸಾಂತ್ವನ ಹೇಳಬಹುದಿತ್ತು. ಅದೇ ಮುಸ್ಲಿಂ ಸಮುದಾಯದವರಿಗೆ ಹೀಗೆ ಆಗಿದ್ದರೆ ಮೊದಲು ಬರುತ್ತಿದ್ದರು' ಎಂದು ಅಸಮಾಧಾನ ವ್ಯಕ್ತಪಡಿಸಿದರು.

## ಯದುವೀರ್ ಒಡೆಯರ್ ಗೆ ಪತ್ರ ಬರೆದ ಪ್ರಧಾನಿ

• ಉದಯವಾಹಿನಿ, ಮೈಸೂರು





ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಒಡೆಯರ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಪತ್ರ ಬರೆದಿದ್ದಾರೆ. ಇತ್ತೀಚೆಗಷ್ಟೇ ಪ್ರಧಾನಿ ನರೇಂದ್ರ ಮೋದಿ ಯದುವೀರ್ ಒಡೆಯರ್ ಪರ ಚುನಾವಣಾ ಪ್ರಚಾರ ನಡೆಸಿದ್ದರು. ಇದೀಗ ಯದುವೀರ್ ಒಡೆಯರ್‌ಗೆ ಪತ್ರ ಬರೆದಿದ್ದು, ಚುನಾವಣಾ ವಿಚಾರಗಳ ಬಗ್ಗೆ ಮಾಹಿತಿಯನ್ನೊಳಗೊಂಡಿರುವ ಹಾಗೂ ಮುಂದೆ ಯಾವ ರೀತಿ ಕೆಲಸ ಮಾಡಬೇಕು ಎಂಬ ಬಗ್ಗೆ ಸಂದೇಶ ನೀಡಿದ್ದಾರೆ.

ನನ್ನ ಸಹೋದ್ಯೋಗಿ ಯದುವೀರ್ ಜಿ ಎಂದು ಪತ್ರ ಆರಂಭಿಸಿರುವ ಪ್ರಧಾನಿ ಮೋದಿ, ಈ ಪತ್ರ ನಿಮಗೆ ಉತ್ತಮ ಆರೋಗ್ಯವನ್ನು ನೀಡುತ್ತದೆ ಎಂದು ಭಾವಿಸುತ್ತೇನೆ. ನೀವು ನೇರವಾಗಿ ಜನರ ಸೇವೆ ಮಾಡುವ ಮೂಲಕ ಮೈಸೂರಿನ ಒಡೆಯರ್ ಪರಂಪರೆಯನ್ನು ಮುನ್ನಡೆಸುತ್ತಿರುವುದು ಶ್ಲಾಘನೀಯ. ಸುಸ್ಥಿರ ಅಭಿವೃದ್ಧಿ, ಶಿಕ್ಷಣಕ್ಕಾಗಿ ನಿಮ್ಮ ಸಮರ್ಪಣೆ ಸ್ಪಷ್ಟವಾಗಿದೆ. ಜನರ ಆಶೀರ್ವಾದದಿಂದ ನೀವು ಸಂಸತ್ತಿಗೆ ಬರುತ್ತೀರಿ ಎಂಬ ವಿಶ್ವಾಸವಿದೆ. ನಿಮ್ಮಂತಹ ತಂಡದ ಸದಸ್ಯರು ನಮಗೆ ದೊಡ್ಡ ಶಕ್ತಿ. ಜನತೆಗೆ ಇದು ಮಾಮೂಲಿ ಚುನಾವಣೆಯಲ್ಲ ಎಂದು ಹೇಳಬಯಸುತ್ತೇನೆ. ಪ್ರತಿಯೊಬ್ಬರಿಗೂ ಉತ್ತಮ ಜೀವನವನ್ನು ಖಚಿತಪಡಿಸಿಕೊಳ್ಳಲು ಈ ಚುನಾವಣೆಯು ನಮ್ಮ ಧ್ಯೇಯದಲ್ಲಿ ನಿರ್ಣಾಯಕವಾಗಿರುತ್ತದೆ. ಬಿಜೆಪಿ ಪಡೆಯುವ ಪ್ರತಿ ಮತವು ಸ್ಥಿರ ಸರ್ಕಾರ ರಚಿಸುವತ್ತ ಸಾಗುತ್ತದೆ. 2047ರ ಅಭಿವೃದ್ಧಿ ಹೊಂದಿದ ರಾಷ್ಟ್ರದ ಪಯಣಕ್ಕೆ ವೇಗ ನೀಡುತ್ತದೆ ಚುನಾವಣೆ ನಮ್ಮ ದೇಶದ ಭವಿಷ್ಯಕ್ಕೆ ಅತ್ಯಂತ ಮಹತ್ವದ್ದಾಗಿದೆ. ಬಿಸಿಲ ತಾಪಕ್ಕೂ ಮುನ್ನವೇ ಮತದಾರರು ಮತದಾನ ಮಾಡುವಂತೆ ಮನವಿ ಮಾಡಿದ್ದಾರೆ.

**ಗೆಲುವಿಗಾಗಿ ಶುಭಾಷಯ**

ನನ್ನ ಸಹನಾಗರಿಕ ಕಲ್ಯಾಣಕ್ಕಾಗಿ ನನ್ನ ಪ್ರತಿ ಕ್ಷಣವನ್ನು ಮೀಸಲಿಡುತ್ತೇನೆ ಎಂಬ ಭರವಸೆಯನ್ನು ಪ್ರತಿಯೊಬ್ಬರಿಗೂ ತಿಳಿಸಲು ನಿಮ್ಮನ್ನು ಒತ್ತಾಯಿಸುವೆ. ಚುನಾವಣೆಯಲ್ಲಿ ನಿಮ್ಮ ಗೆಲುವಿಗಾಗಿ ನನ್ನ ಶುಭಾಷಯ ಕಳುಹಿಸಿದ್ದೇನೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

# ಚುನಾವಣೆ ಸಿದ್ಧತೆ ಚುರುಕು

■ ಮತಗಟ್ಟೆಗಳ ಸಿದ್ಧತೆ ಚುರುಕು ■ ಚುನಾವಣೆ ಸಮೀಪಿಸುತ್ತಿದ್ದಂತೆ ಮತ್ತಷ್ಟು ಹೆಚ್ಚಾದ ನಾಯಕರ ಪ್ರಚಾರದ ಅಬ್ಬರ

• ಉದಯವಾಹಿನಿ, ಬೆಂಗಳೂರು

ಲೋಕಸಭಾ ಮಹಾಸಮರದಲ್ಲಿ ರಾಜ್ಯದ ಮೊದಲ ಅಧ್ಯಾಯಕ್ಕೆ ಬಹಿರಂಗ ಪ್ರಚಾರ ಇನ್ನು ಮೂರು ದಿನ ಬಾಕಿ ಇರುವ ಹಿನ್ನೆಲೆ ಎಲ್ಲಾ ಪಕ್ಷಗಳೂ ರಣಕಣದಲ್ಲಿ ಆರ್ಭಟಿಸುತ್ತಿದ್ದು, ಮತದಾರರ ಮನಸ್ಸು ಗೆಲ್ಲಲು ಬೆವರಿಳಿಸುತ್ತಿದ್ದಾರೆ. ಕಳೆದೆರಡು ದಿನಗಳಿಂದ ಕಲವು ಕಡೆ ಸಣ್ಣಪುಟ್ಟ ಮಳೆಯಾಗಿದ್ದರೂ ಬಿಸಿಲಿನ ಝಳ ತಗ್ಗಿಲ್ಲ. ಬೇಸಿಗೆಯ ಉಷ್ಣಾಂಶಕ್ಕಿಂತಲೂ ರಾಜಕೀಯದ ಕಾವು ದಿನೇದಿನೇ ಏರುತ್ತಿದೆ. ಏ.24ರ ಸಂಜೆ 6 ಗಂಟೆಗೆ ಬಹಿರಂಗ ಪ್ರಚಾರ ಅಂತ್ಯಗೊಳ್ಳುವುದರಿಂದಾಗಿ ಪ್ರತಿಯೊಬ್ಬ ನಾಯಕರೂ ತಮಗೆ ನಿಯೋಜಿಸಿದ ಕ್ಷೇತ್ರಗಳಲ್ಲಿ ಬಿರುಸಿನ ಪ್ರಚಾರದಲ್ಲಿ ತೊಡಗಿದ್ದಾರೆ. ಮೋದಿ ರಾಜ್ಯಕ್ಕೆ ಭೇಟಿ ನೀಡಿ ಚಿಕ್ಕಬಳ್ಳಾಪುರ ಮತ್ತು ಬೆಂಗಳೂರಿನಲ್ಲಿ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಮತಯಾಚನೆ ಮಾಡಿ ತೆರಳಿದ್ದಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹುಬ್ಬಳ್ಳಿಗೆ ಭೇಟಿ ನೀಡುತ್ತಿದ್ದು, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಪರವಾಗಿ ಮತಯಾಚಿಸಲಿದ್ದಾರೆ. ಜೊತೆಗೆ ಇತ್ತೀಚೆಗಷ್ಟೇ ಕೊಲೆಯಾದ ನೇಹಾ ಹಿರೇಮಠ್ ಅವರ ಕುಟುಂಬದ ಸದಸ್ಯರನ್ನು ಭೇಟಿ ಮಾಡಿ ಸಾಂತ್ವನ ಹೇಳಲಿದ್ದಾರೆ. ಕಾಂಗ್ರೆಸ್ ಸರ್ಕಾರ ಚೊಂಬು ಜಾಹೀರಾತಿನ ಮೂಲಕ ಬಿಜೆಪಿಗೆ ಮುಜುಗರ ಉಂಟು ಮಾಡಿದ್ದು, ಇದಕ್ಕೆ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಡಿ.ವಿ.ಸದಾನಂದ ಗೌಡ ಪತ್ರಿಕಾಗೋಷ್ಠಿ ನಡೆಸಿ ಠಕ್ಕರ್ ನೀಡಿದ್ದಾರೆ. ಯಡಿಯೂರಪ್ಪ ಅವರು ಪತ್ರಿಕಾಗೋಷ್ಠಿಯ ಬಳಿಕ ವಿಶ್ರಾಂತಿ ಪಡೆಯದೆ ಚಾಮರಾಜನಗರ ಲೋಕ ಸಭಾ ಕ್ಷೇತ್ರಕ್ಕೆ ತೆರಳಲಿದ್ದು, ಹೆಲಿಕಾಪ್ಟರ್ ಮೂಲಕ ಚಿತ್ರದುರ್ಗಕ್ಕೆ ಪ್ರವಾಸ ಬೆಳೆಸಲಿದ್ದಾರೆ. ಎರಡೂ ಕಡೆ ಬಿಜೆಪಿ ಅಭ್ಯರ್ಥಿಯ ಪರವಾಗಿ ಮತಯಾಚನೆ ನಡೆಸಲಿದ್ದಾರೆ. ವಿರೋಧಪಕ್ಷದ ನಾಯಕ ಆರ್.ಅಶೋಕ್ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್.ಮಂಜುನಾಥ್ ಪರವಾಗಿ ಮತ್ತು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ಪರವಾಗಿ ಮತಪ್ರಚಾರ ನಡೆಸಲಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಮೈಸೂರು ನಗರ, ಎಚ್.ಡಿ.ಕೋಟೆ, ನಂಜನಗೂಡು ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಭಾನುವಾರ ಪ್ರಚಾರ ನಡೆಸಿದ್ದಾರೆ. ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾದ ಎಚ್.ಡಿ.ದೇವೇಗೌಡ ಅವರು ಹಾಸನ ಲೋಕಸಭಾ ಕ್ಷೇತ್ರದಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಮಾಜಿ ಮುಖ್ಯ ಮಂತ್ರಿ ಎಚ್. ಡಿ. ಕುಮಾರಸ್ವಾಮಿಯವರು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ವಿಜಯನಗರ, ಗೋವಿಂದರಾಜನಗರದಲ್ಲಿ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಪರವಾಗಿ ಪ್ರಚಾರ ನಡೆಸಿದರು.

ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಅವರು ಜಂಟಿ ಪ್ರವಾಸ ಕೈಗೊಂಡಿದ್ದಾರೆ. ಬೆಳಿಗ್ಗೆ ಕೋಲಾರ ಲೋಕಸಭಾ ಕ್ಷೇತ್ರದ ಬಂಗಾರಪೇಟೆ, ಶಿಡ್ಲಘಟ್ಟದಲ್ಲಿ ರೋಡ್ ಶೋ ನಡೆಸಿ ಸಂಜೆ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಆನೇಕಲ್, ಬೆಂಗಳೂರು ದಕ್ಷಿಣ, ಆರ್.ಆರ್.ನಗರ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಜಾಧ್ವನಿ-2 ಅನ್ನು ಮುಂದುವರೆಸಲಿದ್ದಾರೆ. ಮೊದಲ ಹಂತದಲ್ಲಿ ದಕ್ಷಿಣ ಕರ್ನಾಟಕ ಹಾಗೂ ಕರಾವಳಿ ಭಾಗದ 14 ಲೋಕಸಭಾ ಕ್ಷೇತ್ರಗಳಿಗೆ ಏ.26 ರಂದು ಚುನಾವಣೆ ನಡೆಯಲಿದೆ.

ಈ ಕ್ಷೇತ್ರಗಳಲ್ಲಿ ಹೆಚ್ಚಿನ ಮತ ಸೆಳೆಯಲು 3 ಪಕ್ಷಗಳು ಆಕ್ರಮಣಕಾರಿ ಪ್ರಚಾರ ತಂತ್ರಗಳನ್ನು ಅನುಸರಿಸುತ್ತಿವೆ. ರಾಜ್ಯದಲ್ಲಿ ಆಡಳಿತದಲ್ಲಿರುವ ಕಾಂಗ್ರೆಸ್ ಕೇಂದ್ರದ ವಿರುದ್ಧ ತಾರತಮ್ಯದ ಅಸ್ತ್ರ ಪ್ರಯೋಗಿಸಿದರೆ, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ರಾಜ್ಯಸರ್ಕಾರ ಕಾನೂನು ಸುವ್ಯವಸ್ಥೆ ನಿರ್ವಹಣೆ, ಬರ ನಿರ್ವಹಣೆ ಸೇರಿದಂತೆ ಹಲವಾರು ವಿಚಾರಗಳಲ್ಲಿ ವೈಫಲ್ಯ ಕಂಡಿದೆ ಎಂದು ವಾಗ್ದಾಳಿ ನಡೆಸುತ್ತಿವೆ. ಕೇಂದ್ರ ಚುನಾವಣಾ ಆಯೋಗದ ಕಟ್ಟುನಿಟ್ಟಿನ ಕ್ರಮದ ನಡುವೆಯೂ ಅಲ್ಲಲ್ಲಿ ಅಪಾರ ಪ್ರಮಾಣದ ನಗದು, ಉಡುಗೊರೆಗಳು, ಇತರ ವಸ್ತುಗಳು ಕೋಟ್ಯಂತರ ರೂ. ಲೆಕ್ಕ ದಲ್ಲಿ ಪತ್ತೆಯಾಗುತ್ತಲೇ ಇವೆ. ಉತ್ತರ ಕರ್ನಾಟಕ ಭಾಗ, ಮಲೆನಾಡು ಪ್ರದೇಶದ 14 ಕ್ಷೇತ್ರಗಳಿಗೆ ಎರಡನೇ ಹಂತದಲ್ಲಿ ಮೇ 7 ರಂದು ಚುನಾವಣೆ ನಡೆಯಲಿದ್ದು, ಮೊದಲ ಹಂತದ ಬಳಿಕ ಸ್ವಲ್ಪ ಸಮಯ ವಿಶ್ರಾಂತಿ ಪಡೆದು ಸ್ಟಾರ್ ಪ್ರಚಾರಕರು ಮತ್ತೆ ಎರಡನೇ ಹಂತದ ಕ್ಷೇತ್ರಗಳತ್ತ ದಾಂಗುಡಿ ಇಡಬೇಕಾದ ಅನಿವಾರ್ಯತೆ ಎದುರಾಗಿದೆ.

- ನಾಲ್ಕೇ ನಾಲ್ಕು ದಿನ ಬಹಿರಂಗ ಪ್ರಚಾರಕ್ಕೆ ಅವಕಾಶ; ಬಹಿರಂಗ ಪ್ರಚಾರದ ತೆರೆಗೆ ತುಮಕೂರಿಗೆ ಅಮಿತ್ ಶಾ, ಸಿದ್ದರಾಮಯ್ಯ
- ಏ.23 ಕ್ಕೆ ಕಾಂಗ್ರೆಸ್ ಅಭ್ಯರ್ಥಿ ಪರ ಸಿಎಂ ಸಿದ್ದರಾಮಯ್ಯ ಪ್ರಚಾರ
- ಏ.24 ಕ್ಕೆ ಬಿಜೆಪಿ ಅಭ್ಯರ್ಥಿ ಪರ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತಯಾಚನೆ
- ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಮತದಾನಕ್ಕೆ ದಿನಗಣನೆ
- ಸಾಮಾಜಿಕ ಜಾಲತಾಣದಲ್ಲೂ ಚುನಾವಣೆಯದ್ದೇ ಚರ್ಚೆ
- ಬಿರುಸುಗೊಂಡ ಪ್ರಚಾರ, ಮತಗಟ್ಟೆಗಳ ಸಿದ್ಧತೆ ಚುರುಕು

**ತುಮಕೂರು ಲೋಕಸಭಾ ಕ್ಷೇತ್ರ**

| | |
|---|---|
| ಮತದಾರರು | 16,51,403 |
| ಪುರುಷರು | 8,14,555 |
| ಮಹಿಳೆಯರು | 8,36,775 |
| ತೃತೀಯ ಲಿಂಗಿಗಳು | 73 |
| ಯುವ ಮತದಾರರು | 31,829 |





**ಮತ್ತೆ ಸಿದ್ದರಾಮಯ್ಯ ಪ್ರಚಾರ**

ಕಾಂಗ್ರೆಸ್ ಅಭ್ಯರ್ಥಿ ಎಸ್.ಪಿ.ಮುದ್ದಹನುಮೇಗೌಡರ ಪರ ಮುಖ್ಯಮಂತ್ರಿ ಸಿದ್ದರಾಮಯ್ಯ ಏ.23 ರಂದು ತುಮಕೂರಲ್ಲಿ ಪ್ರಚಾರ ನಡೆಸಲಿದ್ದಾರೆ. ಇತ್ತೀಚೆಗೆ ತಿಪಟೂರು ತಾಲ್ಲೂಕಿನ ಕೆ.ಬಿ.ಕ್ರಾಸ್‌ನಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಪ್ರಚಾರ ಸಭೆ ನಡೆಸಿದ್ದರು. ಬಹಿರಂಗ ಪ್ರಚಾರಕ್ಕೆ ತೆರೆ ಬೀಳುವ ಒಂದು ದಿನ ಮುಂಚಿತವಾಗಿ ಮತ್ತೊಮ್ಮೆ ಸಿದ್ದರಾಮಯ್ಯ ತುಮಕೂರಲ್ಲಿ ಎಸ್‌ಪಿಎಂ ಪರ ಸದ್ದು ಮಾಡಲಿದ್ದಾರೆ.

**ಲೋಕ ಗೆಲ್ಲಲ್ಲೇ ಬೇಕು**

**ಮತಗಟ್ಟೆಗಳು** ಕ್ಷೇತ್ರದಲ್ಲಿ 1846 ಒಟ್ಟು ಮತಗಟ್ಟೆಗಳಿವೆ. 259 ಸೂಕ್ಷ್ಮ, 40 ಮಹಿಳಾ, 8 ವಿಶೇಷ ಚೇತನ, 16 ಯುವ ಅಧಿಕಾರಿಗಳ ಮತಗಟ್ಟೆಗಳಿವೆ. ಏ.24 ರಂದು ಸಂಜೆ ಬಹಿರಂಗ ಪ್ರಚಾರಕ್ಕೆ ತೆರೆ ಬೀಳಲಿದೆ. ಏ.26 ರಂದು ಮತದಾನ ನಡೆಯಲಿದೆ. ಜನತಾ ತೀರ್ಪು ಏನಿದೆ ಎಂಬುದನ್ನು ತಿಳಿಯಲು ಜೂ.4 ರವರೆಗೆ ಕಾಯಬೇಕು

**ಏ.24ಕ್ಕೆ ಅಮಿತ್ ಶಾ**

ಏ.24 ರಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಪರ ಪ್ರಚಾರ ನಡೆಸಲಿದ್ದಾರೆ. ಆ ದಿನ ಮಧ್ಯಾಹ್ನ 1 ಗಂಟೆಗೆ ತಿಪಟೂರು ತಾಲ್ಲೂಕಿನ ಕೆ.ಬಿ.ಕ್ರಾಸ್‌ನಲ್ಲಿ ಹಿಂದುಳಿದ ವರ್ಗಗಳ ಸಭೆ ನಡೆಯಲಿದೆ. ಅಮಿತ್ ಶಾ ಜತೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಅಮಿತ್ ಶಾ ಭಾಷಣದ ಮೂಲಕ ಬಿಜೆಪಿ ಬಹಿರಂಗ ಪ್ರಚಾರಕ್ಕೆ ತೆರೆ ಎಳೆಯಲಿದೆ.

## ನನಗೆ ರಾಜ್ಯ ರಾಜಕಾರಣದಲ್ಲಿ ದೊಡ್ಡ ಮಟ್ಟದ ಶಕ್ತಿ ತುಂಬಿದವರು ಮಂಡ್ಯ ಜನತೆ: ಹೆಚ್‌ಡಿಕೆ

• ಉದಯವಾಹಿನಿ, ಮಂಡ್ಯ



ನಾನು ದೊಡ್ಡ ದೊಡ್ಡ ಶಿಕ್ಷಣ ಸಂಸ್ಥೆ ಕೊಟ್ಟಿಲ್ಲ, ದೊಡ್ಡ ದೊಡ್ಡ ಕಟ್ಟಡ ಕಟ್ಟಿಲ್ಲ. ನನಗೆ ಇರುವ ಸಂಪಾದನೆ ಜಮೀನು ಆಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ ಕುಮಾರಸ್ವಾಮಿ ಟಾಂಗ್ ನೀಡಿದರು.

ಮಂಡ್ಯ ಲೋಕಸಭೆ ಕ್ಷೇತ್ರದ ಶ್ರೀರಂಗಪಟ್ಟಣದಲ್ಲಿ ನಡೆದ ಬೃಹತ್ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಏಕವಚನದಲ್ಲಿ ರಾಮನಗರ ಜಿಲ್ಲೆಯ ಪಕ್ಕದ ಕ್ಷೇತ್ರದ ಸಹೋದರರು ಮಾತನಾಡಿದ್ದಾರೆ. ಕೆಟ್ಟ ಪದಗಳನ್ನು ಬಳಕೆ ಮಾಡಿದ್ದಾರೆ. ಅದಕ್ಕೆಲ್ಲ ನೋವಿಲ್ಲ. ನಾನು ರಾಜಕಾರಣಕ್ಕೆ ಬಂದ ಬಳಿಕ ನನ್ನ ಆಸ್ತಿ ನೀವು ಎಂದು ತಿಳಿದುಕೊಂಡಿದ್ದೇನೆ ಎಂದರು.

ನಾನು ಚುನಾವಣೆಗೆ ನಿಂತಿದ್ದು, ಮಂಡ್ಯ ಜಿಲ್ಲೆಯೊಂದಕ್ಕಲ್ಲ, ರಾಜ್ಯದ ರೈತರಿಗಾಗಿ. ನನಗೆ ಜನ್ಮ ಕೊಟ್ಟ ಭೂಮಿ ಹಾಸನವಾದರೂ, ರಾಜಕೀಯವಾಗಿ ಜನ್ಮ ನೀಡಿದವರೂ ರಾಮನಗರದವರಾದರೂ, ರಾಜ್ಯ ರಾಜಕಾರಣದಲ್ಲಿ ದೊಡ್ಡ ಮಟ್ಟದ ಶಕ್ತಿ ತುಂಬಿದವರು ಮಂಡ್ಯ ಜಿಲ್ಲೆಯಾಗಿದೆ. ರಾಜ್ಯದ ಯಾವುದೇ ಭಾಗಕ್ಕೂ ಹೋದರೂ ನಾನು ಈ 3 ಜಿಲ್ಲೆಯನ್ನು ನೆನಪಿಸಿಕೊಳ್ಳುತ್ತೇನೆ ಎಂದು ಹೇಳಿದರು.


## ಸಿದ್ದುರನ್ನು ಕೆಳಗಿಳಿಸಲು ಅಜೆಂಡಾ ರೆಡಿ

• ಉದಯವಾಹಿನಿ, ಧಾರವಡ

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳ ನಾಯಕರು ಅಬ್ಬರದ ಪ್ರಚಾರ ನಡೆಸುತ್ತಿದ್ದು, ಮತದಾರರ ಓಲೈಕೆಗಾಗಿ ನಾನಾ ಕಸರತ್ತು ನಡೆಸಿದ್ದಾರೆ. ಈ ನಡುವೆ ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯಾಗಲಿದ್ದಾರೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನೀಡಿರುವ ಹೇಳಿಕೆ ಭಾರಿ ಚರ್ಚೆಗೆ ಕಾರಣವಾಗಿದೆ. ಸಿಎಂ ಸಿದ್ದರಾಮಯ್ಯರನ್ನು ಕೆಳಗಿಳಿಸಲು ಅಜೆಂಡಾ ರೆಡಿಯಾಗಿದೆ. ಕಾಂಗ್ರೆಸ್ ನಾಯಕರೇ ಅಜೆಂಡಾ ಸಿದ್ಧ ಮಾಡಿದ್ದಾರೆ. ಡಿಸಿಎಂ, ಶಿವಾನಂದ ಪಾಟೀಲ್ ಈ ಬಗ್ಗೆ ಕಾನ್ಫರೆನ್ಸ್ ಕಾಲ್‌ನಲ್ಲಿ ಮಾತನಾಡಿದ್ದಾರೆ ಎಂದು ಹೇಳಿದ್ದಾರೆ. ಒಬ್ಬರು ಸ್ವಾಮೀಜಿ ಜೊತೆ ಡಿ.ಕೆ.ಶಿವಕುಮಾರ್, ಶಿವಾನಂದ ಪಾಟೀಲ್ ಕಾನ್ಫರೆನ್ಸ್ ಕಾಲ್‌ನಲ್ಲಿ ಮಾತನಾಡಿದ್ದಾರೆ. ಡಿಕೆಶಿ ಅವರೇ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ವ್ಯವಸ್ಥಿತವಾಗಿ ತಂತ್ರ ರೂಪಿಸುತ್ತಿದ್ದಾರೆ ಎಂದು ಸ್ಫೋಟಕ ಹೇಳಿಕೆ ನೀಡಿದ್ದಾರೆ.

## ಕೇಂದ್ರದ ವಿರುದ್ಧ ಕಾಂಗ್ರೆಸ್ 'ಚೊಂಬು' ಜಾಹೀರಾತು; ಸರ್ಕಾರದ ವಿರುದ್ಧ ಬಿ.ವೈ.ವಿಜಯೇಂದ್ರ ಆಕ್ರೋಶ

• ಉದಯವಾಹಿನಿ, ಮೈಸೂರು



ಕೇಂದ್ರ ಸರ್ಕಾರ ರಾಜ್ಯಕ್ಕೆ 'ಚೊಂಬು' ನೀಡಿದೆ ಎಂಬ ಕಾಂಗ್ರೆಸ್ ಜಾಹೀರಾತು ವಿಚಾರವಾಗಿ ಪ್ರತಿಕ್ರಿಯಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕಾಂಗ್ರೆಸ್‌ನವರು ಏನಾದರೂ ಜಾಹೀರಾತು ನೀಡಲಿ, ಈ ಬಾರಿ ಮತ್ತೆ ಮೋದಿ ಅವರೇ ಪ್ರಧಾನಿ ಆಗಲಿದ್ದಾರೆ ಎಂದು ಹೇಳಿದ್ದಾರೆ.


ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಬಿ.ವೈ.ವಿಜಯೇಂದ್ರ, ಕಾಂಗ್ರೆಸ್ ನವರು ಯಾವ ಜಾಹೀರಾತನ್ನಾದರೂ ನೀಡಲಿ ಆದರೆ ಜನರು ಈ ಬಾರಿ ಮತ್ತೆ ಮೋದಿಯವರನ್ನೇ ಗೆಲ್ಲಿಸುತ್ತಾರೆ ಎಂದು ಟಾಂಗ್ ನೀಡಿದರು. ರೈತರ ಸಾಲ ಮನ್ನಾ, ಕಾಂಗ್ರೆಸ್ ನ ಹೊಸ ಗ್ಯಾರಂಟಿಗಳ ಬಗ್ಗೆ ಮಾತನಾಡಿದ ವಿಜಯೇಂದ್ರ, ದೇಶದಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರಲ್ಲ, ಯಾವ ಭರವಸೆಗಳನ್ನೂ ಪೂರೈಸಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ತಾನೆ ಏನಾದರೂ ಮಾಡುವುದು. ದೇಶದಲ್ಲಿ ಕಾಂಗ್ರೆಸ್ 50 ಸೀಟುಗಳನ್ನು ಗೆಲ್ಲಲ್ಲ ಎಂದರು. ಕಾಂಗ್ರೆಸ್ ಒಂದು ಸಮುದಾಯದ ಓಲೈಕೆಗಾಗಿ ಕೆಲಸ ಮಾಡುತ್ತಿದೆ. ನೇಹಾ ಹತ್ಯೆ ಪ್ರಕರಣದ ಬಗ್ಗೆ ಸೂಕ್ತ ತನಿಖೆಯಾಗಬೇಕು. ಆರೋಪಿಗೆ ಕಠಿಣ ಶಿಕ್ಷೆ ನೀಡಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ ಬಿಜೆಪಿ ಪ್ರತಿಭಟನೆ ನಡೆಸಲಿದೆ ಎಂದು ಎಚ್ಚರಿಸಿದರು.

## ಸಿದ್ದರಾಮಯ್ಯರಿಂದ ಕನ್ನಡಿಗರು ಬದುಕನ್ನು ಕಳೆದುಕೊಂಡಿದ್ದಾರೆ: ಬಿಎಸ್ ವೈ

### ಪೊಳ್ಳು ಜಾಹೀರಾತಿನ ಬಗ್ಗೆ ಜನ ನಂಬಲ್ಲ, ಕಾಂಗ್ರೆಸ್ ಈ ಬಾರಿ 50 ಸೀಟಿಗಿಂತ ಹೆಚ್ಚಿಗೆ ಬರುವುದಿಲ್ಲ, ಕೈ ಒಂದು ಕ್ಷೇತ್ರವನ್ನೂ ಗೆಲ್ಲಲಾಗುವುದಿಲ್ಲ

• ಉದಯವಾಹಿನಿ, ಬೆಂಗಳೂರು

**ಪೊಳ್ಳು ಜಾಹೀರಾತಿನ ಬಗ್ಗೆ ಜನ ನಂಬಲ್ಲ**



ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯ ರಾಜಕೀಯದಲ್ಲಿ ಆರೋಪ - ಪ್ರತ್ಯಾರೋಪಗಳು ಹೆಚ್ಚಾವೆ. ಈಗ ಬಿಜೆಪಿ, ಕಾಂಗ್ರೆಸ್ ಮಧ್ಯೆ ಚೆಂಬು ಗಲಾಟೆ ಪ್ರಾರಂಭವಾಗಿದೆ. ಈ ಬಗ್ಗೆ ಮಾಜಿ ಸಿಎಂ ಯಡಿಯೂರಪ್ಪ ಕಾಂಗ್ರೆಸ್ ಸರ್ಕಾರಕ್ಕೆ ಚಳಿ ಬಿಡಿಸಿದ್ದಾರೆ. ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅವರಿಂದ ಕನ್ನಡಿಗರು ಬದುಕಿನ ಗ್ಯಾರಂಟಿಯನ್ನೇ ಕಳೆದುಕೊಂಡಿದ್ದಾರೆ. ಅವರ ಪೊಳ್ಳು ಜಾಹೀರಾತಿನ ಬಗ್ಗೆ ಜನ ನಂಬಲ್ಲ. ಕಾಂಗ್ರೆಸ್ ಈ ಬಾರಿ 50 ಸೀಟಿಗಿಂತ ಹೆಚ್ಚಿಗೆ ಬರುವುದಿಲ್ಲ. ರಾಜ್ಯದಲ್ಲಿ ಒಂದು ಕ್ಷೇತ್ರವನ್ನೂ ಗೆಲ್ಲಲಾಗುವುದಿಲ್ಲ. ನಿಮಗೆ ಆತ್ಮವಿಶ್ವಾಸ ಇದ್ದರೆ, ನೀವು ಗೆಲ್ಲುವ 5 ಲೋಕಸಭಾ ಕ್ಷೇತ್ರಗಳ ಹೆಸರನ್ನು ಹೇಳಿ ಎಂದು ಸವಾಲು ಹಾಕಿದರು. ಕಾಂಗ್ರೆಸ್ ಜಾಹೀರಾತಿನ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಜನ ಅವರು ಹೋದ ಕಡೆ ಸೇರುತ್ತಿಲ್ಲ. ಅದಕ್ಕೆ ಜಾಹೀರಾತು ನೀಡುತ್ತಿದ್ದಾರೆ. ಪೊಳ್ಳು ಭರವಸೆ ನೀಡುವ ಜಾಹೀರಾತುಗಳನ್ನು ಯಾರೂ ನಂಬಲ್ಲ ಎಂದರು. ಜನ ಮೋದಿ ಮೋದಿ ಎಂದು ಹೇಳುತ್ತಿದ್ದಾರೆ. ದೇಶದಲ್ಲಿ ಬಿಜೆಪಿ, ಪ್ರಧಾನಿ ನರೇಂದ್ರ ಮೋದಿ ಅವರ ಅಲೆ ಇದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನವರು ಹತಾಶರಾಗಿದ್ದಾರೆ. ಕಳೆದ ಬಾರಿ ಅವರು 54 ಸೀಟು ಗೆದ್ದಿದ್ದರು. ಈ ಬಾರಿ 50 ಸೀಟುಗಳು ಸಹ ಬರುವುದಿಲ್ಲ ಎಂದು ಹೇಳಿದರು.

**ಕರ್ನಾಟಕ ಮತಾಂದರ ಯುದ್ಧಭೂಮಿಯಾಗಿದೆ:** ಹುಬ್ಬಳ್ಳಿಯ ನೇಹಾ ಹಿರೇಮಠ ಹತ್ಯೆ ಪ್ರಕರಣವನ್ನು ಪ್ರಸ್ತಾಪಿಸಿ ಬಿಎಸ್‌ವೈ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ರಾಜ್ಯದಲ್ಲಿ ಹೆಣ್ಣುಮಕ್ಕಳು ಭಯದ ವಾತಾವರಣದಲ್ಲಿ ಬದುಕುತ್ತಿದ್ದಾರೆ. ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಕೂಗಿದವರ ವಿರುದ್ಧ ಯಾವುದೇ ಕ್ರಮಕೈಗೊಂಡಿಲ್ಲ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದೆ ಎಂದು ಬಿಎಸ್‌ವೈ ಕಿಡಿಕಾರಿದ್ದಾರೆ. ಈ ಸರ್ಕಾರದಲ್ಲಿ ಗಲಭೆ ಕೋರರಿಗೆ, ಭಯೋತ್ಪಾದಕರಿಗೆ ರಕ್ಷಣೆಯ ಗ್ಯಾರಂಟಿ ನೀಡಲಾಗುತ್ತಿದೆ. ಜನರು ಬದುಕಿನ ಬಗ್ಗೆ ಗ್ಯಾರಂಟಿ ಕಳೆದುಕೊಂಡಿದ್ದು, ಈ ಸರ್ಕಾರದಲ್ಲಿ ಶಾಂತಿಯಿಲ್ಲ ಗ್ಯಾರಂಟಿ. ಮಹಿಳೆಯರ ಮಾನ, ಪ್ರಾಣಗಳಿಗೆ ಗ್ಯಾರಂಟಿ ಇಲ್ಲ ಎಂದು ಯಡಿಯೂರಪ್ಪ ಆರೋಪಿಸಿದ್ದಾರೆ.

ಕಳೆದ 2-3 ದಿನಗಳಲ್ಲಿ ನಡೆದ ಪ್ರಕರಣಗಳನ್ನು ನೋಡಿದರೆ, ಸಿದ್ದರಾಮಯ್ಯ ಸರ್ಕಾರ ಮತಾಂದ ಶಕ್ತಿಯನ್ನು ಬೆಳೆಸು ತ್ತಿದೆ. ಒಂದೇ ವರ್ಷದಲ್ಲಿ ಈ ಸರ್ಕಾರ ರಾಜ್ಯವನ್ನು ಮತಾಂದರ ಯುದ್ಧಭೂಮಿಯಾಗಿ ಪರಿವರ್ತಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ಸಂಪೂರ್ಣ ದಿವಾಳಿಯಾಗಿದ್ದು, ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಹಣ ನೀಡುತ್ತಿಲ್ಲ. ರಾಜ್ಯದಲ್ಲಿ ಒಂದು ಕಿಲೋ ಮೀಟರ್ ರಸ್ತೆ ಅಭಿವೃದ್ಧಿಯಾಗಿಲ್ಲ. ನಾನು 28ಕ್ಕೆ 28 ಲೋಕಸಭಾ ಕ್ಷೇತ್ರಗಳನ್ನು ಗೆಲ್ಲುವ ವಿಶ್ವಾಸವಿದೆ. ಕಾಂಗ್ರೆಸ್‌ನವರು ತಾವು ಗೆಲ್ಲುವ 3-4 ಕ್ಷೇತ್ರದ ಹೆಸರನ್ನು ಹೇಳಲಿ ಎಂದು ಯಡಿಯೂರಪ್ಪ ಸವಾಲ್ ಹಾಕಿದರು.

**ಮೋದಿ ಸರ್ಕಾರ ಬರುವುದು ಸೂರ್ಯ ಚಂದ್ರ ಇರುವುದಷ್ಟೇ ಸತ್ಯ**

ಮತ್ತೊಮ್ಮೆ ಮೋದಿ ಸರ್ಕಾರವನ್ನು ತರಲು ಜನ ನಿರ್ಧರಿಸಿದ್ದಾರೆ. ಮೋದಿ ಸರ್ಕಾರ ಬರುವುದು ಸೂರ್ಯ ಚಂದ್ರ ಇರುವುದಷ್ಟೇ ಸತ್ಯ. ಪ್ರಧಾನಿ ನರೇಂದ್ರ ಮೋದಿ ಗ್ಯಾರಂಟಿ ಕಾಂಗ್ರೆಸ್ ಗ್ಯಾರಂಟಿ ರೀತಿ ಅಲ್ಲ. ಬಡವರ ಶೋಷಿತರ ಜನಜೀವನ ಸುಧಾರಿಸುವ ಗ್ಯಾರಂಟಿಯಾಗಿದೆ ಎಂದು ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ಗ್ರಾಮದಲ್ಲಿ ಬಿಎಸ್ ಯಡಿಯೂರಪ್ಪ ಹೇಳಿದರು.. ಮೋದಿ ದೇಶಕ್ಕೆ ಅಂಟಿದ ಶನಿ ಎಂದು ರಮೇಶ್ ಕುಮಾರ್ ಹೇಳಿಕೆಗೆ ಬಿಎಸ್ ಯಡಿಯೂರಪ್ಪ ಪ್ರತಿಕ್ರಿಯೆ ನೀಡಿದ್ದು, ರಮೇಶ್ ಕುಮಾರ್ ಅವರಿಗೆಲ್ಲ ಉತ್ತರ ಕೊಡುವ ಅಗತ್ಯವಿಲ್ಲ ಎಂದು ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ಗ್ರಾಮದಲ್ಲಿ ಬಿಎಸ್ ಯಡಿಯೂರಪ್ಪ ಹೇಳಿದರು. ಲೋಕಸಭಾ ಚುನಾವಣೆಯ ಫಲಿತಾಂಶವೇ ಅವರಿಗೆ ಉತ್ತರ ಕೊಡುತ್ತದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಈಗಾಗಲೇ ಗೋವಿಂದ ಕಾರಜೋಳ ಗೆದ್ದಾಗಿದೆ. ರಾಜ್ಯದಲ್ಲಿ 28ಕ್ಕೆ 28 ಕ್ಷೇತ್ರ ಗೆಲ್ಲುವ ಭರವಸೆ ಇದೆ ಎಂದು ತಿಳಿಸಿದರು.

**ಈ ದಿನದ ದರ** ಪೆಟ್ರೋಲ್: 99.84 ₹/L ಡೀಸೆಲ್ : 85.93 ₹/L ಬಂಗಾರ: ₹7,424 /Gram(24ct) ₹6,805/Gram(22ct) ಬೆಳ್ಳಿ: ₹86.00 /Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಅದು ನಿನ್ನ ಭ್ರಮೆಯಿಂದ

ನಿಜಗುಣರ ಪರಮಾನುಭವ ಬೋಧೆಯ ಮಾತು. ಈ ಶರೀರಾಂತರ್ಗತವಾದ ಅಹಂಕಾರದಿಂದ ಶಬ್ದ ಸ್ಪರ್ಶ ರೂಪ ರಸ ಗಂಧ ಎಂಬ ಐದು ವಿಷಯಗಳು ತೋರುತ್ತವೆ. ಇವು ಹೀಗೆ ತೋರಲು ಕಾರಣವೇನೆಂಬುದನ್ನು ಹೇಳಲಾಗದು. ಇದೆಲ್ಲ ನಿನ್ನ ಭ್ರಮೆಯಿಂದ ತೋರಿದೆ. ಇದಾವುದೂ ವಾಸ್ತವವಲ್ಲ. ಮೊಬೈಲ್ನಲ್ಲಿ ಏನೇನೋ ಕಾಣುತ್ತೇವೆ. ವಾಸ್ತವದಂತೆ ತೋರುತ್ತದೆ. ಶೃಂಗಾರಾದಿ ನವ ಭಾವಗಳೂ ಉಕ್ಕುತ್ತವೆ. ಆದರೆ ವಾಸ್ತವದಲ್ಲಿ ಮೊಬೈಲ್ನಲ್ಲಿ ಏನೂ ಇಲ್ಲ! ಎಲ್ಲ ಕೈಚಳಕ! ದೊಡ್ಡ ಗಾತ್ರ ಅದ್ಭುತ ತೋರುವ ಮೊಬೈಲ್ ಅಂಗೈಯೊಳಗಿನ ಚಿಕ್ಕ ವಸ್ತು! ಅಸತ್ಯಕ್ಕೆ ಸತ್ಯದಂತೆ ತೋರುವ ಶಕ್ತಿಯಿದೆ. ಇದೇ ಮಾಯೆಯ ಕೈಚಳಕ!!

## ಭರತನಾಟ್ಯ ಹಾಗೂ ಜನಪದ ನೃತ್ಯ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಧರ್ಮರಾಯ ದೇವಸ್ಥಾನದ ವತಿಯಿಂದ ಇತಿಹಾಸ ಪ್ರಸಿದ್ಧ ಕರಗ ಶಕ್ತಿ ಮಹೋತ್ಸವದ ಪ್ರಯುಕ್ತ ಏಪ್ರಿಲ್ 23, ಮಂಗಳವಾರ ಸಂಜೆ 6-00 ಗಂಟೆಗೆ ನೃತ್ಯ ದಿಶಾ ಟ್ರಸ್ಟ್ ನ ವಿದ್ಯಾರ್ಥಿಗಳಿಂದ ಭರತನಾಟ್ಯ ಮತ್ತು ಜನಪದ ನೃತ್ಯ ಪ್ರದರ್ಶನ ಏರ್ಪಡಿಸಲಾಗಿದೆ. ನಿರ್ದೇಶನ : ಗುರು ಶ್ರೀಮತಿ ದರ್ಶಿನಿ ಮಂಜುನಾಥ್. ಸ್ಥಳ : ಶ್ರೀ ಧರ್ಮರಾಯ ದೇವಸ್ಥಾನ, ತಿಗಳರಪೇಟೆ, ಬೆಂಗಳೂರು ಸರ್ವರಿಗೂ ಆದರದ ಸುಸ್ವಾಗತ

## ಬೆಂಗಳೂರಿನಲ್ಲಿ ಪತ್ತೆಯಾಗಿದ್ದ 2 ಕೋಟಿ ಹಣ ನಮ್ಮದೇ ಎಂದ ಬಿಜೆಪಿ

• ಉದಯವಾಹಿನಿ, ಬೆಂಗಳೂರು



ಕೆಲ ದಿನಗಳ ಹಿಂದೆ ಬೆಂಗಳೂರಿನಲ್ಲಿ ಕಾರಿನಲ್ಲಿ ಬರೋಬ್ಬರಿ 2 ಕೋಟಿ ರೂಪಾಯಿ ಹಣ ಪತ್ತೆ ಪ್ರಕರಣ ಭಾರಿ ಸುದ್ದಿಯಾಗಿತ್ತು. ಇದೀಗ ರಾಜ್ಯ ಬಿಜೆಪಿ ಈ ಹಣ ನಮ್ಮದೇ ಎಂದು ಹೇಳಿಕೊಂಡಿದೆ. ಬೆಂಗಳೂರಿನಲ್ಲಿ ಪತ್ತೆಯಾಗಿರುವ 2 ಕೋಟಿ ಹಣ ನಮ್ಮದು ಎಂದು ಬಿಜೆಪಿ ಹಣದ ಬಗ್ಗೆ ಸೂಕ್ತ ದಾಖಲೆಗಳನ್ನು ನೀಡಿದೆ. ವಿವಿಧ ಕ್ಷೇತ್ರಗಳ ಚುನಾವಣೆ ಖರ್ಚಿಗೆಂದು ಮಾರ್ಚ್ 27ರಂದು ಮಲ್ಲೇಶ್ವರಂ ನ ಕೋದಂಡರಾಮಪುರದ ಕೆನರಾ ಬ್ಯಾಂಕ್ ನಿಂದ್ ಒಟ್ಟು 5 ಕೋಟಿ ಹಣ ಡ್ರಾ ಮಾಡಲಾಗಿತ್ತು. ಹಣವನ್ನು ಬಿಜೆಪಿ ಕಚೇರಿಯಲ್ಲಿ ಇಡಲಾಗಿತ್ತು ಎಂದು ತಿಳಿಸಿದೆ.ಅಲ್ಲದೇ ಹಣ ವಿಥ್ ಡ್ರಾ ಮಾಡಿರುವ ಬಗ್ಗೆ ಹಾಗೂ ಕಾರಿನಲ್ಲಿ ಹಣ ತರಲಾಗುತ್ತಿದ್ದ ಬಗ್ಗೆಯೂ ದಾಖಲೆಗಳನ್ನು ಒದಗಿಸಿದೆ. ಸದ್ಯ ಕಾರು ಹಾಗೂ ಹಣ ಕಾಟನ್ ಪೇಟೆ ಪೊಲೀಸರ ವಶದಲ್ಲಿದೆ.

## ವಾಟ್ಸಾಪ್‌ಗೆ ಲಿಂಕ್ ಕಳುಹಿಸಿ ಷೇರು ಹೂಡಿಕೆ ಹೆಸರಲ್ಲಿ ಕೋಟಿ ಕೋಟಿ ವಂಚನೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಸೈಬರ್ ಕ್ರೈಂ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ವಾಟ್ಸಾಪ್ ಗೆ ಒಮ್ಮೆ ಲಿಂಕ್ ಕಳುಹಿಸಿ ಆ ಲಿಂಕ್ ನನ್ನು ಕ್ಲಿಕ್ ಮಾಡುವಂತೆ ಹೇಳಿ ಷೇರು ಹೂಡಿಕೆ ಹೆಸರಲ್ಲಿ ಕೋಟಿ ಕೋಟಿ ವಂಚಿಸಿರುವ ಘಟನೆ ಬೆಂಗಳೂರಿನಲ್ಲಿ ಬೆಳಕಿಗೆ ಬಂದಿದೆ.ಅಶೋಕ್ ತಿರುಮಲ ಎಂಬುವವರು ಬರೋಬ್ಬರಿ 5.17 ಕೋಟಿ ರೂಪಾಯಿ ಕಳೆದುಕೊಂಡಿದ್ದು, ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಅಶೋಕ್ ತಿರುಮಲ ವಾಟ್ಸಾಪ್‌ಗೆ Www.byc-app.com ಎಂಬ ಲಿಂಕ್ ಕಳುಹಿಸಿದ ವಚಕರು ಅದನ್ನು ಕ್ಲಿಕ್ ಮಾಡಲು ಹೇಳಿದ್ದಾರೆ. ಬಳಿಕ ಷೇರು ಖರೀದಿಸಿ ಇದರಿಂದ ಅತ್ಯಧಿಕ ಲಾಭವಾಗುತ್ತದೆ ಎಂದು ನಂಬಿಸಿದ್ದಾರೆ. ವಂಚಕರ ಮಾತು ನಂಬಿದ ಅಶೋಕ್, ಲಿಂಕ್ ಓಪನ್ ಮಾಡಿ ಡೌನ್ ಮಾಡಿಕೊಂಡಿದ್ದಾರೆ. ಈ ಲಿಂಕ್ ಮೂಲಕ ಅಶೋಕ್ ತಿರುಮಲ ಅವರ ಅಕೌಂಟ್ ನಿಂದ ಹಂತ ಹಂತವಾಗಿ ವಂಚಕರು ಹಣ ದೋಚಿದ್ದಾರೆ. ಬರೋಬ್ಬರಿ 5.18 ಕೋಟಿ ಭಾರಿ ಹಣ ಡ್ರಾ ಮಾಡಿಕೊಂಡಿದ್ದಾರೆ. ಹಣ ಕಳೆದುಕೊಂಡ ಅಶೋಕ್ ತಿರುಮಲ ಸೈಬರ್ ಕ್ರೈಂ ಗೆ ದೂರು ನೀಡಿದ್ದು, ಎಫ್ ಐ ಆರ್ ದಾಖಲಾಗಿದೆ.

## ಬೆಂಗಳೂರಿನಲ್ಲಿ ಸಾಲು ಸಾಲು ಅಗ್ನಿ ಅವಘಡ; ಥಿನ್ನರ್ ತಯಾರಿಕ ಘಟಕದಲ್ಲಿ ಬೆಂಕಿ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಇಂದು ಸಾಲು ಸಾಲು ಅಗ್ನಿ ಅವಘಡಗಳು ಸಂಭವಿಸಿವೆ. ಥಿನ್ನರ್ ತಯಾರಿಕಾ ಘಟಕದಲ್ಲಿ ಬೆಂಕಿ ಅವಘಡ ಸಂಭವಿಸಿ ಇಡೀ ಕಾರ್ಖಾನೆ ಹೊತ್ತಿ ಉರಿದಿದೆ. ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಜಿಗಣಿ ಕೈಗಾರಿಕಾ ಪ್ರದೇಶದ ಅಂಬೇಡ್ಕರ್ ಎಸ್ಟೇಟ್ ನಲ್ಲಿ ಈ ಘಟನೆ ನಡೆದಿದೆ. ಮಾ ಟ್ರೇಡರ್ಸ್ ಹೆಸರಿನ ಥಿನ್ನರ್ ತಯಾರಿಕಾ ಘಟಕದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದಾಗಿ ಬೆಂಕಿ ಸಂಭವಿಸಿದೆ. ಬೆಂಕಿಯ ತೀವ್ರತೆಗೆ ಥಿನ್ನರ್ ಕ್ಯಾನ್ ಗಳು ಸ್ಫೋಟಗೊಳ್ಳುತ್ತಿವೆ. ಅಕ್ಕಪಕ್ಕದ ಕಾರ್ಖಾನೆಗಳಿಗೂ ಬೆಂಕಿ ವ್ಯಾಪಿಸುವ ಆತಂಕ ಎದುರಾಗಿದೆ. ಸ್ಥಳಕ್ಕಾಗಮಿಸಿರುವ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಿಯಂತ್ರಿಸಲು ಹರಸಾಹಸ ಪಡುತ್ತಿದ್ದಾರೆ. ಇಂದು ಭಾನುವಾರವಾದ್ದರಿಂದ ಕಾರ್ಖಾನೆಯಲ್ಲಿ ಕಾರ್ಮಿಕರು ಇರಲಿಲ್ಲ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ತಿಳಿದುಬಂದಿದೆ.

## ಎಕ್ಸಿಬಿಷನ್ ನಲ್ಲಿ ಸ್ಮೋಕ್ ಬಿಸ್ಕೆಟ್ ತಿಂದು ಬಾಲಕನ ಆರೋಗ್ಯದಲ್ಲಿ ಏರುಪೇರು

• ಉದಯವಾಹಿನಿ, ಬೆಂಗಳೂರು

ಸ್ಮೋಕ್ ಬಿಸ್ಕೆಟ್ ತಿಂದು ಬಾಲಕ ಅಸ್ವಸ್ಥಗೊಂಡ ಘಟನೆ ದಾವಣಗೆರೆ ನಗರದ ಪಿಬಿ ರಸ್ತೆ ಬಳಿ ನಡೆದಿದೆ. ಬರ್ಡ್ಸ್ ಎಕ್ಸಿಬಿಷನ್‌ನಲ್ಲಿ ಬಾಲಕ ಸ್ಮೋಕ್ ಬಿಸ್ಕೆಟ್ ತಿಂದಿದ್ದಾನೆ ಎನ್ನಲಾಗಿದೆ.ಘಟನೆ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಕೂಡಲೇ ಬಾಲಕನನ್ನು ಪೋಷಕರು ಆಸ್ಪತ್ರೆ ಕರೆದುಕೊಂಡು ಹೋಗಿ ಅಲ್ಲಿ ಚಿಕಿತ್ಸೆ ಕೊಡಿಸಿದ್ದಾರೆ. ಚಿಕಿತ್ಸೆ ನಂತರ ಬಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾನೆ ಎನ್ನಲಾಗಿದೆ. ಇನ್ನೂ ಘಟನೆ ಸಂಬಂಧ ಪಾಲಿಕೆ ಅಧಿಕಾರಿಗಳಿಗೆ ದೂರು ನೀಡಲಾಗಿದ್ದು, ದೂರಿನ ಬಳಿಕ ಅಧಿಕಾರಿಗಳುಸ್ಮೋಕ್ ಬಿಸ್ಕೆಟ್ ಮಾರಾಟ ಬಂದ್ ಮಾಡಿ ಅವುಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ ಎನ್ನಲಾಗಿದೆ.. ಈ ಪಾನೀಯಗಳು -196 ಡಿಗ್ರಿ ಸೆಲ್ಸಿಯಸ್ನಲ್ಲಿ ತಣ್ಣಗಾಗಿರುವ ದ್ರವ ಸಾರಜನಕವನ್ನು ಹೊಂದಿರುತ್ತವೆ, ಇದರಿಂದಾಗಿ ಹೊಟ್ಟೆಯಲ್ಲಿ ಸ್ಫೋಟ ಉಂಟಾಗುತ್ತದೆ, ಇದರಿಂದಾಗಿ ಉಸಿರಾಟದ ತೊಂದರೆ ಉಂಟಾಗುತ್ತದೆ ಎಂದು ಒಬ್ಬ ಬಳಕೆದಾರರು ಬರೆದಿದ್ದಾರೆ.

# ಡಿಕೆ ಶಿ, ಹೆಚ್ ಡಿಕೆ, ಬಿವೈವಿ ವಿರುದ್ಧ ಎಫ್ಐಆರ್

■ ಲೋಕಸಭಾ ಚುನಾವಣೆ ಪ್ರಚಾರದ ವೇಳೆ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದ ಮೇಲೆ ಎಫ್ಐಆರ್ ದಾಖಲು

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಲೋಕಸಭಾ ಚುನಾವಣೆ ಪ್ರಚಾರದ ವೇಳೆ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದ ಮೇಲೆ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಎಫ್ಐಆರ್ ದಾಖಲಾಗಿದೆ. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ತಮ್ಮ ಸಹೋದರ ಡಿ.ಕೆ ಸುರೇಶ್ ಅವರಿಗೆ ಮತ ಹಾಕಿದರೆ ಕಾವೇರಿ ನದಿಯಿಂದ ನೀರು ಪೂರೈಸುವುದಾಗಿ ಮತದಾರರಿಗೆ ಹೇಳಿದ್ದಾರೆ ಎನ್ನಲಾದ ವಿಡಿಯೊವನ್ನು ಆಧರಿಸಿ ಪ್ರಕರಣ ದಾಖಲಿಸಲಾಗಿದೆ.

ಆರ್‌ಆರ್ ನಗರದ ಅಪಾರ್ಟ್‌ಮೆಂಟ್ ಮಾಲೀಕರನ್ನುದ್ದೇಶಿಸಿ ಮಾತನಾಡುವಾಗ ಎಂಸಿಸಿ ಉಲ್ಲಂಘಿಸಿದ ಆರೋಪದ ಮೇಲೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಬೆಂಗಳೂರಿನ ಎಫ್‌ಎಸ್‌ಟಿ ಎಫ್ಐಆರ್ ದಾಖಲಿಸಿದೆ. ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ಸಂಖ್ಯೆ 78/2024 ಅನ್ನು ಐಪಿಸಿಯ ಸೆಕ್ಷನ್ 171 (ಬಿ) (ಸಿ) (ಇ) (ಎಫ್) ಅಡಿಯಲ್ಲಿ ಲಂಚ ಮತ್ತು ಚುನಾವಣೆಯಲ್ಲಿ ಅನಗತ್ಯ ಪ್ರಭಾವ ಬೀರುವ ಆರೋಪದಲ್ಲಿ ಕೇಸ್ ದಾಖಲಾಗಿದೆ. ಡಿಕೆ ಶಿವಕುಮಾರ್ ಅವರು ಮಾಡಿರುವಂತ ಭಾಷಣ ಮಾದರಿ ನೀತಿ ಸಂಹಿತೆಯನ್ನು ಉಲ್ಲಂಘಿಸುತ್ತದೆ ಮತ್ತು ಲಂಚ ಮತ್ತು ಚುನಾವಣೆಯಲ್ಲಿ ಅನಗತ್ಯವಾಗಿ ಪ್ರಭಾವ ಬೀರಿದ್ದಕ್ಕಾಗಿ ಪೊಲೀಸರು ಪ್ರಕರಣ

> ಇದನ್ನು ಆಡಳಿತ ಪಕ್ಷ ಕಾಂಗ್ರೆಸ್ ಕೂಡ ತನ್ನದೇ ಧಾಟಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವನ್ನು ತಿವಿಯುತ್ತಿದೆ. 10 ವರ್ಷಗಳಿಂದ ಕರ್ನಾಟಕದ ಜನತೆಗೆ ಮೋದಿ ಸರ್ಕಾರ ಚೊಂಬು ನೀಡಿದೆ ಎಂದು ಜಾಹೀರಾತುಗಳನ್ನು ನೀಡಿದೆ. ಮೋದಿ ಸರ್ಕಾರಕ್ಕೆ ಕರ್ನಾಟಕ 100 ರೂಪಾಯಿ ಕಟ್ಟಿದರೆ ಮತ್ತೆ ನಮಗೆ ವಾಪಸ್ 13 ರೂಪಾಯಿ ಮಾತ್ರ ಸಿಗುತ್ತದೆ ಎಂದು ವಾಗ್ದಾಳಿ ನಡೆಸುತ್ತಿದೆ.

ಮೋದಿ ಸರ್ಕಾರದ ವಿರುದ್ಧ ವಾಗ್ದಾಳಿ

> ಚುನಾವಣೆಗೆ ಸಂಬಂಧಿಸಿದಂತೆ ಸುಳ್ಳು ಹೇಳಿಕೆ ನೀಡಿದ ಆರೋಪದ ಮೇಲೆ ಜೆಡಿಎಸ್ ನಾಯಕ ಎಚ್.ಡಿ ಕುಮಾರಸ್ವಾಮಿ ವಿರುದ್ಧ ಮತ್ತೊಂದು ಎಫ್ಐಆರ್ ದಾಖಲಿಸಲಾಗಿದೆ. ಎಫ್ಐಆರ್ ಸಂಖ್ಯೆ 149/2024 ಅನ್ನು ಗುಬ್ಬಿ ಪೊಲೀಸ್ ಠಾಣೆಯಲ್ಲಿ ಜನಪ್ರತಿನಿಧಿ ಕಾಯ್ದೆಯ ಸೆಕ್ಷನ್ 123 (4) ಮತ್ತು ಐಪಿಸಿಯ 171 (ಜಿ) ಅಡಿಯಲ್ಲಿ ದಾಖಲಿಸಲಾಗಿದೆ ಎಂದು ಕರ್ನಾಟಕ ಚುನಾವಣಾ ಆಯೋಗ ಎಕ್ಸ್ ಖಾತೆಯನ್ನು ಪೋಸ್ಟ್ ಮಾಡಿದೆ.

ದಾಖಲಿಸಿಕೊಂಡಿದ್ದಾರೆ ಎಂದು ರಾಜ್ಯ ಚುನಾವಣಾ ಆಯುಕ್ತರು ತಿಳಿಸಿದ್ದಾರೆ. ಕರ್ನಾಟಕ ಬಿಜೆಪಿಯ ಸಾಮಾಜಿಕ ಜಾಲತಾಣದ ಅಧಿಕೃತ ಎಕ್ಸ್ ಖಾತೆಯಲ್ಲಿ ಅವಹೇಳನಕಾರಿ ಪೋಸ್ಟ್ ಹಾಕಿದ್ದಕ್ಕಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ವಿರುದ್ಧವೂ ಎಫ್ಐಆರ್ ದಾಖಲಿಸಲಾಗಿದೆ. ಏಪ್ರಿಲ್ 19 ರಂದು ಬಿಜೆಪಿ ಕರ್ನಾಟಕ ಅಧಿಕೃತ ಎಕ್ಸ್ ಖಾತೆಯಲ್ಲಿ ಅವಹೇಳನಕಾರಿ ಪೋಸ್ಟ್

> ಕರ್ನಾಟಕದಲ್ಲಿ ಏಪ್ರಿಲ್ 26 ಮತ್ತು ಮೇ 7 ರಂದು ಎರಡು ಹಂತಗಳಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ. ಚುನಾವಣಾ ಸಂಬಂಧ ರಾಜಕೀಯ ಪಕ್ಷಗಳ ನಡುವೆ ಆರೋಪ, ಪ್ರತ್ಯಾರೋಪಗಳು ಭರ್ಜರಿಯಾಗಿ ನಡೆಯುತ್ತಿವೆ. ಏಪ್ರಿಲ್ 20ರ ಶನಿವಾರ ಬೆಂಗಳೂರಿನಲ್ಲಿ ಬಿಜೆಪಿ ಚುನಾವಣಾ ಸಭೆಯನ್ನು ಉದ್ದೇಶಿ ಮಾತನಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ಕಾಂಗ್ರೆಸ್ ಸರ್ಕಾರ ಟೆಕ್ ಸಿಟಿ ಬೆಂಗಳೂರನ್ನು ಟ್ಯಾಂಕರ್ ಸಿಟಿಯನ್ನಾಗಿ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದರು.

ಮಾಡಿದ್ದಕ್ಕಾಗಿ ವಿಜಯೇಂದ್ರ ವಿರುದ್ಧ ಬೆಂಗಳೂರಿನ ಎಫ್ ಎಸ್‌ಟಿ ಎಫ್ಐಆರ್ ದಾಖಲಿಸಿದೆ. ಮಲ್ಲೇಶ್ವರಂ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ಸಂಖ್ಯೆ 60/2024 ಅನ್ನು ಜನಪ್ರತಿನಿಧಿ ಕಾಯ್ದೆಯ ಸೆಕ್ಷನ್ 125 ಮತ್ತು ಐಪಿಸಿಯ 505, 153 (ಎ) ಅಡಿಯಲ್ಲಿ ದಾಖಲಿಸಲಾಗಿದೆ ಚುನಾವಣಾ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

## ರಾಜ್ಯ ದಿವಾಳಿ ಮಾಡಿ ಕೇಂದ್ರದತ್ತ ಬೊಟ್ಟು : ಬೊಮ್ಮಾಯಿ ಕಿಡಿ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಸರಿಯಾದ ಸಿದ್ದತೆಯಿಲ್ಲದೆ ಘೋಷಣೆ ಮಾಡಿದ ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸಂಪೂರ್ಣ ಕಾಂಗ್ರೆಸ್ ಸರ್ಕಾರದ ಹದಗೆಡಿಸಿದೆ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಆಕ್ರೋಶ ಹೊರಹಾಕಿದರು.ಭಾನುವಾರ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ನಿಮ್ಮ ರಾಜಕೀಯ ಲಾಭಕ್ಕಾಗಿ ಗ್ಯಾರಂಟಿ ಘೋಷಣೆ ಮಾಡಿದಿರಿ.

ಗ್ಯಾರಂಟಿ ಯೋಜನೆಗಳಿಗೆ ನಮ್ಮ ವಿರೋಧ ಇಲ್ಲ. ಆದರೆ, ಜನರ ತೆರಿಗೆ ಹಣವನ್ನು ಅದಕ್ಕೆ ವಿನಿಯೋಗ ಮಾಡಲಾಗುತ್ತಿದೆ. ಈ ಯೋಜನೆಗಳಿಗೆ ಪ್ರತ್ಯೇಕ ಆದಾಯ ಹುಡುಕಿಕೊಳ್ಳುವುದನ್ನು ಬಿಟ್ಟು, ಜನರು ನೀಡಿದ ತೆರಿಗೆ ಹಣವನ್ನೇ ಗ್ಯಾರಂಟಿ ಯೋಜನೆಗಳಿಗೆ ಹಾಕುತ್ತಿದೆ. ಇದರಿಂದ ಆರ್ಥಿಕ ಪರಿಸ್ಥಿತಿ ಸಂಪೂರ್ಣ ಹಳಿ ತಪ್ಪಿದೆ.

> ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದಿಂದ ಆರ್ಥಿಕ ಸ್ಥಿತಿ ಅಧೋಗತಿ ತಲುಪಿದೆ. ಈಗ ಕೇಂದ್ರದತ್ತ ಬೊಟ್ಟು ಮಾಡುವ ನೈತಿಕತೆ ರಾಜ್ಯ ಸರ್ಕಾರಕ್ಕೆ ಇಲ್ಲ ಎಂದು ಬೊಮ್ಮಾಯಿ ಆಕ್ರೋಶ ವ್ಯಕ್ತಪಡಿಸಿದರು. -ಬೊಮ್ಮಾಯಿ

ಕೇಂದ್ರ ಸರ್ಕಾರದ ಅವಧಿಯಲ್ಲಿ ರಾಜ್ಯಕ್ಕೆ ಬಿಡುಗಡೆಯಾದ ಅನುದಾನ ಅಂಕಿಅಂಶಗಳ ಸಮ್ಮೇಮ ಬಿಚ್ಚಿಟ್ಟ ಬೊಮ್ಮಾಯಿ, ನಿಮ್ಮ ಯುಪಿಎ ಸರ್ಕಾರದ ಅವಧಿಯಲ್ಲಿ

> ಕಳೆದ ನಾಲ್ಕು ವರ್ಷದಲ್ಲಿ 54 ಸಾವಿರ ರೈತರಿಗೆ 14 ಸಾವಿರ ಕೋಟಿ ರೂ. ಹಣವನ್ನು ಕಿಸಾನ್ ಸಮ್ಮಾನ್ ಯೋಜನೆಯಡಿ ಕೇಂದ್ರ ಸರ್ಕಾರ ನೀಡಿದೆ. 6 ಲಕ್ಷ ಬೀದಿ ಬದಿ ವ್ಯಾಪಾರಸ್ಥರಿಗೆ ವಿಶೇಷ ಅನುದಾನ ನೀಡಿದೆ.9 ಲಕ್ಷ ಹೆಣ್ಣು ಮಕ್ಕಳಿಗೆ ಉಜ್ವಲ ಗ್ಯಾಸ್ ನೀಡಲಾಗಿದೆ. ಇದು ಬಿಜೆಪಿಯ ಅಕ್ಷಯ ಪಾತ್ರೆ ಎಂದು ಬೊಮ್ಮಾಯಿ ತಿರುಗೇಟು ನೀಡಿದರು.

ರಾಜ್ಯಕ್ಕೆ ಎಷ್ಟು ಹಣ ಬಿಡುಗಡೆಯಾಗಿದೆ ಎಂದು ಕಿಡಿ ಕಾರಿದರು.ನೀವು ಕರ್ನಾಟಕದ ಜನರಿಗೆ ಚೊಂಬು ಕೊಟ್ಟಿದ್ದೀರಿ. ಭೀಕರ ಬರಗಾಲದಲ್ಲೂ ಹೊಸದಾಗಿ ಒಂದು ಕೊಳವೆ ಬಾವಿ ಕೊರೆಯಿಸಿಲ್ಲ.

## ಪ್ರಜಾಪ್ರಭುತ್ವದ ಮೇಲಿನ ಸರ್ಜಿಕಲ್ ಸ್ಟ್ರೈಕ್ : ಕೃಷ್ಣಭೈರೇಗೌಡ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಐಟಿ ಅಧಿಕಾರಿಗಳ ವಿರುದ್ಧ ವಾಗ್ದಾಳಿ

ಕಾಟನ್ ಪೇಟೆ ಚೆಕ್‌ಪೋಸ್ಟ್‌ನಲ್ಲಿ ಬಿಜೆಪಿಗೆ ಸೇರಿದ 2 ಕೋಟಿ ರೂ. ಹಣ ಸಿಕ್ಕರೂ ಕ್ಲೀನ್ ಚಿಟ್ ಕೊಡುತ್ತಾರೆ. ಇದು ಪ್ರಜಾಪ್ರಭುತ್ವದ ಮೇಲಿನ ಸರ್ಜಿಕಲ್ ಸ್ಟ್ರೈಕ್ ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ಬಿಜೆಪಿ ಹಾಗೂ ಐಟಿ ಅಧಿಕಾರಿಗಳ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ನಿನ್ನೆ ತಪಾಸಣೆ ವೇಳೆ ಬಿಜೆಪಿಗೆ ಸೇರಿದ ಹಣ ದೊರೆತಿರುವ ಹಿನ್ನೆಲೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೃಷ್ಣಭೈರೇಗೌಡ, ನಿನ್ನೆ ತಪಾಸಣೆ ವೇಳೆ ಬಿಜೆಪಿಗೆ ಸೇರಿದ ಹಣ ದೊರೆತಿದೆ. 2 ಕೋಟಿ ರೂ. ಹಣಕ್ಕೆ ದಾಖಲೆ ಇಲ್ಲದಿದ್ದರೂ ಕ್ಲೀನ್ ಚಿಟ್ ಕೊಡ್ತಾರೆ. ಅಕೌಂಟ್ ಮೂಲಕ ಚುನಾವಣೆಗೆ ಹಣ ಖರ್ಚು ಮಾಡಬೇಕು. 50 ಸಾವಿರ ರೂ. ಮೇಲೆ ಕ್ಯಾಶ್ ವ್ಯವಹಾರ ಮಾಡಬಾರದು. ಹಾಗಿದ್ದರೂ ಚುನಾವಣೆಗೆ 2 ಕೋಟಿ ರೂ. ಕ್ಯಾಶ್ ಕೊಟ್ಟಿದ್ದು ಹೇಗೆ? ಹಾಗಿದ್ರೂ, ಐಟಿ ಅಧಿಕಾರಿಗಳು ಹೇಗೆ ಹಣ ಬಿಟ್ಟರು? ಖರ್ಚುವೆಚ್ಚ ಪರಿಶೀಲಿಸದೆ ಹೇಗೆ ಬಿಟ್ಟು ಕಳುಹಿಸಿದ್ರು? ಎಂದು ಪ್ರಶ್ನಿಸಿದರು. ಇದು ಪ್ರಜಾಪ್ರಭುತ್ವದ ಮೇಲಿನ ಸರ್ಜಿಕಲ್ ಸ್ಟ್ರೈಕ್. ಚುನಾವಣೆಗೆ ಹವಾಲಾ ಹಣ ವರ್ಗಾವಣೆ ಆಗುತ್ತಿದೆ. ನಾವು ಇದೇ ರೀತಿ ವ್ಯವಹಾರ ಮಾಡಿದ್ರೆ, ಆಗುತ್ತಾ? ಚುನಾವಣಾ ಆಯೋಗ ಈ ಬಗ್ಗೆ ತನಿಖೆ ಮಾಡಬೇಕು.

ಇಲ್ಲಿಯವರೆಗೆ ಸೀಜ್ ಆಗಿರುವ ಹಣ ವಾಪಸ್ ಕೊಡ್ತೀರಾ? ನಿತ್ಯ ನೂರಾರು ಕೋಟಿ ರೂ. ವರ್ಗಾವಣೆ ಮಾಡಿ ಸುಳ್ಳು ದಾಖಲೆ ನೀಡುತ್ತಾರೆ. ಕಾನೂನಿಗೆ ತಿಲಾಂಜಲಿ ಇಡ್ತೀರಾ? ಎಂದು ಕೃಷ್ಣಭೈರೇಗೌಡ ವಾಗ್ದಾಳಿ ನಡೆಸಿದರು.

## ಮತದಾನ ಜಾಗೃತಿ ಮೂಡಿಸಲು ಕಾಲ್ನಡಿಗೆ ಜಾಥ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಕಬ್ಬನ್ ಪಾರ್ಕ್,ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸಾರ್ವಜನಿಕರಿಗೆ ಮತದಾನ ಜಾಗೃತಿ ಮೂಡಿಸಲು ಕಾಲ್ನಡಿಗೆ ಜಾಥ ಕಾರ್ಯಕ್ರಮ.


ಮತದಾನ ಜಾಗೃತಿ ಜಾಥವನ್ನು ನಗರ ಪೊಲೀಸ್ ಆಯುಕ್ತರಾದ ಬಿ.ದಯಾನಂದ್, ಮತ್ತು ಅಪರ ಜಿಲ್ಲಾ ಚುನಾವಣಾಧಿಕಾರಿ, ಉತ್ತರ ಲೋಕಸಭಾ ಕ್ಷೇತ್ರ ಶ್ರೀಮತಿ ಸ್ನೇಹಾಲ್, ಬೆಂಗಳೂರು ಕೇಂದ್ರ ಚುನಾವಣಾಧಿಕಾರಿ ಡಾ||ಹರೀಶ್ ಕೆ. ಮತ್ತು ಅಧ್ಯಕ್ಷರಾದ ಎ.ಅಮೃತ್ ರಾಜ್ ರವರು ಅಧಿಕಾರಿ ವರ್ಗದವರು ಮತದಾನ ಜಾಗೃತಿ ಜಾಥಗೆ ಚಾಲನೆ ನೀಡಿದರು. ಶ್ರೀಮತಿ ಸ್ನೇಹಾಲ್ ಎಲ್ಲರ ಜೀವನ ಮುಟ್ಟುವಂತಹ ಕೆಲಸ ಬಿಬಿಎಂಪಿ ಮಾಡುತ್ತಿದೆ. ಏಪ್ರಿಲ್ 26ರ ಮಹತ್ವವಾದ ದಿನ. ಪ್ರಜಾಪ್ರಭುತ್ವದ ದೊಡ್ಡ ಹಬ್ಬ

> ಸಾರ್ವಜನಕರಿಗೆ ಮತದಾನದ ಹಕ್ಕನ್ನು ಕುರಿತು ಅರಿವು ಮೂಡಿಸಲು ಮತದಾನ ಜಾಗೃತಿ ಜಾಥ ಸಹಕಾರಯಾಗಿದೆ. ಬೆಂಗಳೂರು ನಗರದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಡಿಮೆ ಮತದಾನವಾಗಿದೆ, ಕಾರಣ ಹಲವಾರು ಇದೆ. ಮತದಾನ ಮಾಡಲು ಏನೇ ಕಾರಣವಿದ್ದರು, ಮತಗಟ್ಟೆಗೆ ಬಂದು ಕಡ್ಡಾಯವಾಗಿ ಮತದಾನವನ್ನು ಚಲಾಯಿಸಿ. ಈ ಬಾರಿ ಇತಿಹಾಸ ನಿರ್ಮಾಣ ದತ್ತ ಮತದಾನವಾಗ ಬೇಕ. ಬೆಂಗಳೂರು ನಗರದಲ್ಲಿ ಮತದಾರರು ಮತಗಟ್ಟೆಯಲ್ಲಿ ಮತದಾನ ಮಾಡಲು ಸೂಕ್ತ ಬಂದೋಬಸ್ತು, ಸುರಕ್ಷತೆಯನ್ನು ಪೊಲೀಸ್ ಇಲಾಖೆ ವ್ಯವಸ್ಥೆ ಮಾಡಿದೆ ಎಂದು ಹೇಳಿದರು. ನಗರ ಪೊಲೀಸ್ ಆಯುಕ್ತರಾದ ಬಿ.ದಯಾನಂದ್

ಅಚರಿಸಲಾಗುತ್ತಿದೆ, ಸಾರ್ವಜನಿಕರ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಮತದಾನ ಮಾಡಿ. ಐದು ವರ್ಷದ ಭವಿಷ್ಯಕ್ಕಾಗಿ ಮತದಾನ ಮಾಡಿ ಎಂದು ಹೇಳಿದರು ಮತದಾರ ಜಾಗೃತಿ ಕಾಲ್ನಡಿಗೆ ಜಾಥ ಕಾರ್ಯಕ್ರಮ ಕಬ್ಬನ್ ಪಾರ್ಕ್ ಮುಖ್ಯ ದ್ವಾರದಿಂದ ಅವರಣದಿಂದ ಆರಂಭವಾಗಿ ಕಸ್ತೂರಬಾ ರಸ್ತೆ ,ಕಂಠೀರವ ಒಳಾಂಗಣ ರಸ್ತೆ ಮೂಲಕ ರಾಜ್ ರಾಮ್ ಮೋಹನ್ ರಾಯ್ ರಸ್ತೆಯಿಂದ ಬಿಬಿಎಂಪಿ ಸಹಕಾರ ಸಂಘದ ಬಳಿ ಮುಕ್ತಾಯವಾಯಿತು. ಸಂಘದ ಪದಾಧಿಕಾರಿಗಳಾದ ಸಾಯಿಶಂಕರ್, ಎ.ಜಿ.ಬಾಬಣ್ಣ, ಮಂಜುನಾಥ್(ಎಮ್.ಎಲ್.ಎ.)ಹೆಚ್.ಬಿ.ಹರೀಶ್ ಕೆ.ನರಸಿಂಹ, , ರೇಣುಕಾಂಬ, ಕೆ.ಮಂಜೇಗೌಡ, ಡಾ.ಶೋಭಾ,ಮಂಜುನಾಥ್(ಮಾರ್ಕೆಟ್), ಸಂತೋಷ್ ಕುಮಾರ್ ನಾಯ್ಕ್, ರವರು ಉಪಸ್ಥಿತರಿದ್ದರು.

## ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹ

• ಉದಯವಾಹಿನಿ, ಬೆಂಗಳೂರು



> ರಾಜ್ಯದಲ್ಲಿ ಹಿಂದೂಗಳ ಜೀವಕ್ಕೆ ಬೆಲೆ ಇಲ್ಲವಾಗಿದೆ. ಮತಾಂಧರಿಗೆ ಕುಮ್ಮಕ್ಕು ಸಿಗುತ್ತಿದೆ. ಇವರು ಏನೇ ಮಾಡಿದರೂ ನೆರವು ನೀಡಲು ಕಾಂಗ್ರೆಸ್ ಸಿದ್ಧ ಇದೆ. ರಾಜ್ಯದಲ್ಲಿ ಹಿಂದುಗಳಿಗೆ ರಕ್ಷಣೆ ಇಲ್ಲದಂತಾಗಿದೆ. ರಾಜ್ಯದಲ್ಲಿ ಜೈ ಶ್ರೀರಾಮ್ ಎಂದರೆ ಬಡಿದು ಹಾಕ್ತಾರೆ. ಹನುಮಾನ್ ಚಾಲೀಸ ಹಾಕಿದರೆ ಹಲ್ಲೆ ಮಾಡುತ್ತಾರೆ. ಆದರೆ, ಪಾಕಿಸ್ತಾನ್ ಜಿಂದಾಬಾದ್ ಅಂದ್ರೆ ಬಿರಿಯಾನಿ ಕೊಡ್ತಾರೆ. ಜೊತೆಗೆ ವಿಧಾನಸೌಧಕ್ಕೂ ಪಾಸ್ ಕೊಡ್ತಾರೆ ಎಂದು ಸಿದ್ದರಾಮಯ್ಯ ಸರ್ಕಾರದ ವಿರುದ್ಧ ವಿರೋಧ ಪಕ್ಷದ ನಾಯಕ ಆರ್ ಅಶೋಕ್ ತೀವ್ರ ವಾಗ್ದಾಳಿ ನಡೆಸಿದರು.

ಹುಬ್ಬಳ್ಳಿಯ ಖಾಸಗಿ ಕಾಲೇಜಿನ ಕ್ಯಾಂಪಸ್‌ನಲ್ಲಿ ಕಾರ್ಪೊರೇಟರ್ ನಿರಂಜನ್ ಹಿರೇಮಠ್ ಪುತ್ರಿ ನೇಹಾಳನ್ನ ಬರ್ಬರವಾಗಿ ಹತ್ಯೆ ಮಾಡಲಾಗಿದೆ. ಕೊಲೆ ಪ್ರಕರಣದ ಸಂಬಂಧಿಸಿದಂತೆ ಪೊಲೀಸರು ಆರೋಪಿ ಫಯಾಜ್‌ನನ್ನು ಬಂಧಿಸಿದ್ದಾರೆ. ಆರೋಪಿ ಫಯಾಜ್ ವಿರುದ್ಧ ರಾಜ್ಯಾದ್ಯಂತ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದ್ದು, ಇತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ವಿಪಕ್ಷ ನಾಯಕ ಆರ್ ಅಶೋಕ್ ಆಗ್ರಹಿಸಿದರು.

ಈ ಕುರಿತು ಮಾಧ್ಯಮಗಳ ಜೊತೆಗೆ ಮಾತನಾಡಿದ ಆರ್ ಅಶೋಕ್ , ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಕಾರ್ಪೊರೇಟರ್ ಪುತ್ರಿ ನೇಹಾ ಕೊಲೆ ಪ್ರಕರಣದಲ್ಲಿ ಸಿದ್ದರಾಮಯ್ಯ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ವಿಪಕ್ಷ ನಾಯಕ ಆರ್ ಅಶೋಕ್ ಒತ್ತಾಯ ಮಾಡಿದ್ದಾರೆ. ರಾಜ್ಯದಲ್ಲಿ ಎರಡು ಮೂರು ತಿಂಗಳಿಂದ ಕಾನೂನು ಸುವ್ಯವಸ್ಥೆ ಹಾಳಾಗಿದೆ. ಮತಾಂಧರಿಗೆ ನೆರವು ನೀಡಲು ಕಾಂಗ್ರೆಸ್ ಸಿದ್ಧವಾಗಿದೆ.

ರಾಜ್ಯದಲ್ಲಿ ತಾಲಿಬಾನ್ ಆಡಳಿತ ಇದೆ. ರಾಜ್ಯದಲ್ಲಿ ತಾಲಿಬಾನ್ ಸರ್ಕಾರ ಇದ್ದಂತಿದೆ ಎಂದು ಅಶೋಕ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ನಿಮ್ಮ ಮತ ಯಾರಿಗೆ ಎಂದು ಕರೆ ಬರುತ್ತಿದ್ದೆಯೇ?

• ಉದಯವಾಹಿನಿ, ಬೆಂಗಳೂರು



ಇದು ಲೋಕಸಭಾ ಚುನಾವಣ ಸಮಯ. ಈ ವೇಳೆ ಹಲವು ಸಂಘ ಸಂಸ್ಥೆಗಳು, ಮಾಧ್ಯಮ ಸಂಸ್ಥೆಗಳು ಸಮೀಕ್ಷೆ ನಡೆಸುತ್ತವೆ. ಜನರ ನಾಡಿಮಿಡಿತ ಅರಿಯಲು ಪ್ರಯತ್ನಿಸುತ್ತಿರುತ್ತಾರೆ. ಆದರೆ, ಮತದಾನದ ಅಭಿಪ್ರಾಯ ಸಮೀಕ್ಷೆ ನಡೆಸುವ ನೆಪದಲ್ಲಿ ಮತದಾರರಿಗೆ ಬರುತ್ತಿರುವ ಕರೆಗಳು ವಂಚನೆಯ ಕರೆಗಳು ಎಂದು ಚುನಾವಣಾ ಅಧಿಕಾರಿಗಳು ತಿಳಿಸುತ್ತಾರೆ.

ಈ ಕರೆಗಳನ್ನು ಟ್ರೂಕಾಲರ್ 'ಸ್ಕ್ಯಾಮ್' ಎಂದು ರೆಡ್ ಟ್ಯಾಗ್ ಮಾಡಿದೆ. ಅಂತಹ ಕರೆಗಳನ್ನು ತೆಗೆದುಕೊಳ್ಳಬೇಡಿ ಅಥವಾ ಅವರು ಮಾಡಿದರೆ ಕರೆಗಳನ್ನು ಕಟ್ ಮಾಡಿ ಎಂದು ಜನರನ್ನು ಎಚ್ಚರಿಸಿದ್ದಾರೆ. ಇಂತಹ ಕರೆಗಳು ಭಾರತೀಯ ಚುನಾವಣೆಯನ್ನು ನಿರೂಪಿಸುವ ರಹಸ್ಯ ಮತದಾನದ ಸಂಪೂರ್ಣ ಉಲ್ಲಂಘನೆಯಾಗಿದೆ ಎಂದಿದ್ದಾರೆ. ಈ ಕರೆಗಳಲ್ಲಿ, ನೀವು ಕಾಂಗ್ರೆಸ್ ಗೆ ಮತ ಹಾಕುವುದಾದರೆ 1 ಒತ್ತಿರಿ, ನೀವು ಬಿಜೆಪಿಗೆ ಮತ ಹಾಕುತ್ತಿದ್ದರೆ '2' ಒತ್ತಿ ಎಂದು ಕೇಳುವ ಇಂತಹ

> ನೆಟ್‌ವರ್ಕ್ ಸೇವಾ ಪೂರೈಕೆದಾರರಿಂದ ನಾಗರಿಕರ ಸಂಪರ್ಕ ಸಂಖ್ಯೆಗಳನ್ನು ಒದಗಿಸಲಾಗಿದೆ. ಕೆಲವು ಸಂದರ್ಭಗಳಲ್ಲಿ ಅವುಗಳನ್ನು ಮಾರಾಟ ಮಾಡಲಾಗಿದೆ ಎಂದು ತಿಳಿದುಬಂದಿದೆ. ಜನರು, ಸಂಸ್ಥೆಗಳು ಅಥವಾ ರಾಜಕೀಯ ಪಕ್ಷಗಳು ಅಭಿಪ್ರಾಯ ಸಂಗ್ರಹಣೆಯನ್ನು ಮಾಡಬಹುದು. ಆದರೆ ಹೆಸರು, ವಯಸ್ಸು, ಲಿಂಗ, ವೃತ್ತಿ, ಜಾತಿ, ಇತ್ಯಾದಿ ಸೇರಿದಂತೆ ನಾಗರಿಕರ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸುವುದು ಅಪರಾಧವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸ್ವಯಂಚಾಲಿತ ಕರೆಗಳು ಬರುತ್ತಿರುವ ಬಗ್ಗೆ ಮತದಾರರು ವರದಿ ಮಾಡಿದ್ದಾರೆ. ಇಂತಹ ಕರೆಗಳ ಬಗ್ಗೆ ನಾಗರಿಕರಿಂದ ಮಾಹಿತಿ ಪಡೆದಿದ್ದೇವೆ ಎಂದು ಕರ್ನಾಟಕ ಮುಖ್ಯ ಚುನಾವಣಾಧಿಕಾರಿ (ಸಿಇಒ) ಕಚೇರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

# ಭಕ್ತ ಪ್ರಹ್ಲಾದ ಆಗಬಾರದು ಉಗ್ರನರಸಿಂಹನ ರೂಪ ತಾಳಬೇಕು

■ ಪ್ರಲ್ಹಾದ್ ಜೋಶಿಯವರು ಕಠಿಣ ಕಾನೂನು ತರಬೇಕು ಎಂದು ಆಗ್ರಹ, ಅಯೋಗ್ಯರನ್ನು ಮಟ್ಟ ಹಾಕಿ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ನೇಹಾ ಹತ್ಯೆ ಪ್ರಕರಣ ರಾಜ್ಯದೆಲ್ಲೆಡೆ ಸದ್ದು ಮಾಡುತ್ತಿದ್ದು, ಈ ಸಂಬಂಧ ಆರೋಪಿ ವಿರುದ್ಧ ಸೂಕ್ತ ಕ್ರಮ ಕೈಗೊಂಡು ನೇಹಾ ಕುಟುಂಬಕ್ಕೆ ನ್ಯಾಯ ಒದಗಿಸಿಕೊಡಬೇಕೆನ್ನುವ ಕೂಗುಗಳು ಜೋರಾಗಿ ಕೇಳಿಬರುತ್ತಿವೆ. ಇದೀಗ ಈ ಬಗ್ಗೆ ಬಿಗ್ ಬಾಸ್ ವಿನ್ನರ್, ನಟ ಪ್ರಥಮ್ ಪ್ರತಿಕ್ರಿಯಿಸಿದ್ದು, ಅವರು ಏನು ಹೇಳಿದ್ದಾರೆ ಎಂದು ಇಲ್ಲಿ ತಿಳಿಯಿರಿ.

ಬಿಗ್ ಬಾಸ್ ವಿನ್ನರ್, ನಟ ಪ್ರಥಮ್ ಇಂದು (ಏಪ್ರಿಲ್ 20) ಹುಬ್ಬಳ್ಳಿಯಲ್ಲಿ ನೇಹಾ ಮನೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ್ದಾರೆ. ಬಳಿಕ ಪ್ರತಿಕ್ರಿಯಿಸಿದ ಅವರು, ಹುಬ್ಬಳ್ಳಿಗೆ ಸಿನೆಮಾ ಪ್ರಮೋಷನ್‌ಗೆ ಬರುತ್ತಿದ್ದೆವು. ಇದೀಗ ಸೂತಕದ ಮನೆಗೆ ಬಂದಿದ್ದು, ಇದರಿಂದ ಮನಸ್ಸಿಗೆ ತುಂಬಾ ನೋವಾಗಿದೆ. ಪ್ರಲ್ಹಾದ್ ಜೋಶಿಯವರು ಕಠಿಣ ಕಾನೂನು ತರಬೇಕು ಎಂದು ಆಗ್ರಹಿಸಿದ್ದಾರೆ.

**ಕಠಿಣ ಕಾನೂನು ತರಬೇಕು:** ನೇಹಾ ಹತ್ಯೆಯಿಂದ ಇಡೀ ದೇಶವೇ ದುಃಖ ಪಡುವಂತಾಗಿದೆ. ಈ ಭಾಗದ ಎಂಪಿ ಪ್ರಹ್ಲಾದ್ ಜೋಶಿ ಸಾಹೇಬ್ರೆ, ನೀವು ಭಕ್ತ ಪ್ರಹ್ಲಾದ ಆಗಬಾರದು, ಉಗ್ರ ನರಸಿಂಹನ ರೂಪ ತಾಳಬೇಕು. ಇಲ್ಲವಾದ್ರೆ, ಹಿರಣ್ಯಕಶ್ಯಪ್ ರೀತಿ ಬಲಿಯಾಗಿಬಿಡುತ್ತೇವೆ. 10 ವರ್ಷ ಅಧಿಕಾರದಲ್ಲಿದ್ದೀರಿ, ಸಾಧ್ಯವಾದರೆ ಒಂದು ಕಠಿಣ ಕಾನೂನು ತರಬೇಕು ಎಂದರು. ಇನ್ನು ರಾಜಕೀಯ ನಾಯಕರೇ ನೀವು ಕೊಡುವ ಹೇಳಿಕೆ ನೇಹಾ ಕುಟುಂಬಕ್ಕೆ ತುಂಬಾ ನೋವುಂಟು ಮಾಡುತ್ತಿದೆ. ಬೇಗನೇ ಆರೋಪಿಗೆ ಶಿಕ್ಷೆಯಾದಾಗ ಮಾತ್ರ, ನೇಹಾ ಕುಟುಂಬಕ್ಕೆ ನ್ಯಾಯ ಸಿಗುತ್ತದೆ ಎಂದರು.

ಸಿಎಂ ವಿಚಾರ ಮಾಡಿ ಹೇಳಿಕೆ ಕೊಡಲಿ

> ಅಯೋಗ್ಯರನ್ನು ಮಟ್ಟ ಹಾಕಿ: ಗೃಹ ಸಚಿವರು, ಸಿಎಂ ವಿಚಾರ ಮಾಡಿ ಹೇಳಿಕೆ ಕೊಡಬೇಕು. ನೇಹಾ ಕುಟುಂಬಕ್ಕೆ ತೊಂದರೆ ಆಗುವಂತೆ ನಡೆದುಕೊಳ್ಳಬಾರದು. ಅವರಿಗೆ ಶೀಘ್ರ ನ್ಯಾಯ ಕೊಡಿಸುವ ಕೆಲಸ ಮಾಡಬೇಕು. ಇನ್ನು ನಿಮಗೆ ನಿಜವಾಗಲೂ ಕಾಮನ್ ಸೆನ್ಸ್ ಇದ್ದರೆ, ಇಂತಹ ಅಯೋಗ್ಯರನ್ನು ಮಟ್ಟ ಹಾಕಿ ಹೇಳಿದರು. - ಪ್ರಥಮ್

> ಮುಸ್ಲಿಂ ಸಮುದಾಯದವರು ಇಂತಹ ಅಯೋಗ್ಯರನ್ನು ಮಟ್ಟಹಾಕುವ ಕೆಲಸ ಮಾಡಬೇಕು. ಯಾರು ಅವನ ಪರ ವಕಾಲತ್ತು ವಹಿಸಿಕೊಳ್ಳಬಾರದು. ನಿಮ್ಮ ಧರ್ಮದಲ್ಲಿ ಮದುವೆಯಾಗಿ ಖುಷಿಯಾಗಿರಿ. ನಿಮಗ್ಯಾಕೆ ಹಿಂದೂಗಳ ಸಹವಾಸ ಬೇಕು? ನಿಮ್ಮ ಸಮುದಾಯದಲ್ಲಿ ಹತ್ತು ಮದುವೆಯಾಗಿ, ನಿಮ್ಮನ್ನು ಯಾರು ಕೇಳುತ್ತಾರೆ. ನಮ್ಮ ಹಿಂದೂಗಳ ತಂಟೆಗೆ ಬರಬೇಡಿ, ಇದು ಸರಿ ಇರುವುದಿಲ್ಲ ಎಂದು ವಾರ್ನ್ ಮಾಡಿದರು. -ಪ್ರಥಮ್

> ಯಾರೋ ಒಬ್ಬ ಕಲಾವಿದ ಚುನಾವಣೆಯ ಪ್ರಚಾರಕ್ಕೆ ಮಾತ್ರ ಬರುತ್ತಾರೆ. ಆದರೆ ಇಂತಹ ಘಟನೆಯಾದಾಗ ಧ್ವನಿ ಎತ್ತಿ ನ್ಯಾಯ ಕೊಡಿಸುವ ಕೆಲಸ ಮಾಡಿದ್ದಾರಾ? ಎಂದು ಕಲಾವಿದರ ಬಗ್ಗೆ ನಟ ಪ್ರಥಮ್ ಅಸಮಾಧಾನ ವ್ಯಕ್ತಪಡಿಸದರು. ಇನ್ನು ಕಲಾವಿದರನ್ನು ತಲೆಮೇಲೆ ಇಟ್ಟುಕೊಂಡು ಮೆರೆಸಬೇಡಿ, ಪೂಜಿಸಬೇಡಿ. ಸಿಕ್ಕಾಗ ಮಾತ್ರ ಹಾಯ್ ಬಾಯ್ ಅಂತಾ ಹೇಳಿ ಸಾಕು. ಕಲಾವಿದರನ್ನು ಕಲಾವಿದರನ್ನಾಗಿ ಬಿಡಿ ಎಂದು ಮನವಿ ಮಾಡಿದರು.

**ಆರೋಪಿ ಪೋಷಕರ ವಿರುದ್ಧ ಆಕ್ರೋಶ:** ಫೈಯಾಜ್ ಮಾಡಿದ್ದು ಅಚಾನಕ್ ಕೃತ್ಯವಲ್ಲ, ಬಲವಂತವಾಗಿ ಬಂದು ಒಂಬತ್ತು ಬಾರಿ ಚಾಕು ಇರಿದ್ದಿದ್ದಾನೆ. ಫೈಯಾಜ್ ತಾಯಿ ನನ್ನ ಮಗ ಅಂತಹವನಲ್ಲ ಅಂತಾ ಹೇಳುತ್ತಾರೆ. ನೀವು ಒಬ್ಬ ಶಿಕ್ಷಕರಾಗಿ ನಿಮ್ಮ ಮಗನಿಗೆ ಹೇಳಿಕೊಟ್ಟಿದ್ದು ಇದೇನಾ? ಎಂದು ಪ್ರಶ್ನಿಸುವ ಮೂಲಕ ಆರೋಪಿ ಪೋಷಕರ ವಿರುದ್ಧ ಆಕ್ರೋಶ ವ್ಯಕ್ತಡಿಸಿದರು.

ಉದಯ ವಾಹಿನಿ
ಪ್ರಾದೇಶಿಕ
ಸೋಮವಾರ 22 ಏಪ್ರಿಲ್ 2024


# ರಾಜ್ಯದ ಪಾಲಿನ ತೆರಿಗೆ ಹಣ ವಾಪಾಸ್ ಯಾಕೆ ಬರ್ಲಿಲ್ಲ?

## • ಮೋದಿಯವರ ಖಾಲಿ ಚೊಂಬು ದೇವೇಗೌಡರಿಗೆ ಅಕ್ಷಯ ಪಾತ್ರೆಯಂತೆ ಕಾಣಿಸಿದ್ದು ಹೇಗೆ: ಸಿದ್ದರಾಮಯ್ಯ ಪ್ರಶ್ನೆ

**• ಉದಯವಾಹಿನಿ ಕೋಲಾರ**

ಮೋದಿ ಕೊಟ್ಟ ಖಾಲಿ ಚೊಂಬು ಅಕ್ಷಯಪಾತ್ರೆ ಎಂದು ದೇವೇಗೌಡರು ರೈಲು ಬಿಟ್ಟಿದ್ದಾರೆ. ಖಾಲಿ ಚೊಂಬು ನಿಮ್ಮ ಕಣ್ಣಿಗೆ ಅಕ್ಷಯ ಪಾತ್ರೆಯಂತೆ ಕಾಣಿಸಿದರೆ ರಾಜ್ಯದ ಪಾಲಿನ ತೆರಿಗೆ ಹಣ ವಾಪಾಸ್ ಯಾಕೆ ಬರ್ಲಿಲ್ಲ? ಬರಗಾಲದ ಅನುದಾನ ಏಕೆ ಬರಲಿಲ್ಲ? ಪ್ರವಾಹದ ವೇಳೆ ರಾಜ್ಯದ ಅನುದಾನ ಏಕೆ ಬರಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶ್ನಿಸಿದರು.

ಬಂಗಾರಪೇಟೆಯ ರೋಡ್ ಶೋನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೌತಮ್ ಗೆಲುವಿನ ಜನ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿ, ಚಿಕ್ಕಬಳ್ಳಾಪುರದಲ್ಲಿ ಹಾಲಿ ಪ್ರಧಾನಿ ಮೋದಿ, ಮಾಜಿ ಪ್ರಧಾನಿ ದೇವೇಗೌಡರು ಒಟ್ಟಾಗಿ ಜಿಲ್ಲೆಯ ಜನತೆಗೆ ಜೋಡಿ ಸುಳ್ಳುಗಳನ್ನು ಹೇಳಿ ಹೋಗಿದ್ದರೆ. ಮೋದಿಯವರ ಚೊಂಬು ನಿಮಗೆ ಅಕ್ಷಯ ಪಾತ್ರೆಯಂತೆ ಕಾಣಿಸಿದ್ರೆ, ರಾಜ್ಯದ ರೈತರ ಸಾಲ ಏಕೆ ಮನ್ನಾ ಮಾಡುತ್ತಿಲ್ಲ? ಮೋದಿಯವರ ಚೊಂಬು ನಿಮಗೆ ಅಕ್ಷಯ ಪಾತ್ರೆಯಂತೆ ಕಾಣಿಸಿದ್ರೆ, ಮೋದಿಯವರೇಕೆ ರಾಜ್ಯದ ರೈತರ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ನಿಗದಿಪಡಿಸ್ತಿಲ್ಲ? ಎಂದು ಪ್ರಶ್ನಿಸಿದರು.

> ಮುಂದಿನ ಜನ್ಮದಲ್ಲಿ ಮುಸ್ಲಿಂ ಆಗಿ ಹುಟ್ಟುತ್ತೇನೆ ಎಂದಿದ್ದ ದೇವೇಗೌಡರು, ಮೋದಿ ಪ್ರಧಾನಿ ಆದರೆ ದೇಶ ಬಿಟ್ಟು ಹೋಗುವುದಾಗಿ ಘೋಷಿಸಿದ್ದ ದೇವೇಗೌಡರು ಈಗ ಮೋದಿ ಮತ್ತು ತಾವು ಭಾಯಿ ಭಾಯಿ ಎನ್ನುತ್ತಿದ್ದಾರೆ. ಈಗ ಇದೇ ದೇವೇಗೌಡರು ಮೋದಿಯವರ ಖಾಲಿ ಚೊಂಬನ್ನು ಅಕ್ಷಯ ಪಾತ್ರೆ ಎನ್ನುತ್ತಿದ್ದಾರೆ. ಕೋಲಾರದಲ್ಲಿ ದೇವೇಗೌಡರು ಮತ್ತು ಮೋದಿಯವರ ಖಾಲಿ ಚೊಂಬನ್ನು ಸೋಲಿಸಿ ನಮ್ಮ ಗ್ಯಾರಂಟಿಗಳಿಗೆ ಆಶೀರ್ವದಿಸುವ ಮೂಲಕ ಕಾಂಗ್ರೆಸ್ ಅಭ್ಯರ್ಥಿ ಗೌತಮ್ ಅವರನ್ನು ಗೆಲ್ಲಿಸಿ ಎಂದು ಸಿದ್ದರಾಮಯ್ಯ ಅವರ ಕರೆ ನೀಡಿದರು. -ಸಿದ್ದರಾಮಯ್ಯ


ಉದಯವಾಹಿನಿ ಚಿತ್ರ

**ಬರಗಾಲದ ಅನುದಾನ ಏಕೆ ಬರಲಿಲ್ಲ?**

ಮೋದಿಯವರ ಚೊಂಬು ಅತ್ಯಂತ ಶ್ರೀ ಮಂತರ, ಉದ್ಯಮಿಗಳ ಲಕ್ಷ ಲಕ್ಷ ಕೋಟಿ ಸಾಲ ಮನ್ನಾ ಮಾಡಿದರು. ಇದು ಅತೀ ಶ್ರೀಮಂತರ ಅಕ್ಷಯ ಪಾತ್ರೆ. ಭಾರತೀಯರ ಪಾಲಿಗೆ, ನಾಡಿನ ಜನರ ಪಾಲಿಗೆ ಖಾಲಿ ಚೊಂಬು ಅಷ್ಟೆ ಅಲ್ವಾ ದೇವೇಗೌಡರೇ ಎಂದು ಸಿದ್ದರಾಮಯ್ಯ ಅವರ ಪ್ರಶ್ನೆ ಹಾಕಿದರು. ಹದಿನೈದನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಮಾಡಿದ ಮೋಸವನ್ನು ಮೋದಿಯವರ ಖಾಲಿ ಚೊಂಬು ಸಾಕ್ಷಿಯಾಗಿದೆ. ದೇವೇಗೌಡರೇ ಈ ಚೊಂಬು ನಿಮ್ಮ ಕಣ್ಣಿಗೆ ಅಕ್ಷಯ ಪಾತ್ರೆಯಾಗಿದ್ದರೆ 15 ನೇ ಹಣಕಾಸು ಆಯೋಗದಲ್ಲಿ ಆಗಿರುವ ನಷ್ಟ, ಅನ್ಯಾಯವನ್ನು ತುಂಬಿ ಕೊಡಿಸಿ. ಅಕ್ಷಯ ಪಾತ್ರೆಯಿಂದ ಉದುರಿಸಿ ನೋಡೋಣ ಎಂದು ಸವಾಲು ಹಾಕಿದರು ಮುಖ್ಯಮಂತ್ರಿಗಳು ಸಾರ್ವಜನಿಕರಿಗೆ ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಜನತೆ ಚೊಂಬು ಚೊಂಬು ಎಂದು ಕೂಗಿದರು. ಮೋದಿಯವರು ನಿಮ್ಮ ಅಕೌಂಟಿಗೆ 15 ಲಕ್ಷ ಹಾಕ್ತೀನಿ ಎಂದಿದ್ದರಲ್ಲಾ, ಎಷ್ಟು ಹಣ ಬಂತು ಎಂದು ಕೇಳಿದರು. ಜನತೆ ಚೊಂಬು ಎಂದು ಕೂಗಿದರು.

ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಗೌತಮ್ ಗೆಲುವು ನಿಶ್ಚಿತವಾಗಿದೆ. ಬಂಗಾರಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚು ಬಹುಮತ ನೀಡಿ ಶಾಸಕ ನಾರಾಯಣಸ್ವಾಮಿಯವರಿಗೆ ಹೆಚ್ಚಿನ ಶಕ್ತಿ ನೀಡಿ ಎಂದು ಹೇಳಿದರು.

**ಎಷ್ಟು ರೈತರಿಗೆ ದುಪ್ಪಟ್ಟು ಹಣ ಬಂತು**

ಮೋದಿಯವರು ವರ್ಷಕ್ಕೆ 2 ಕೋಟಿ ಉದ್ಯೋಗ ಕೊಡ್ತೀವಿ ಎಂದಿದ್ದರಲ್ಲಾ, ಎಷ್ಟು ಜನರಿಗೆ ನೇಮಕಾತಿ ಆದೇಶ ಬಂತು ಎಂದು ಕೇಳಿದರು. ಜನತೆ ಚೊಂಬು ಎಂದು ಕೂಗಿದರು. ಮೋದಿಯವರು ರೈತರ ಆದಾಯ ದುಪ್ಪಟ್ಟು ಮಾಡುವುದಾಗಿ ಹೇಳಿದ್ದರಲ್ಲಾ, ಎಷ್ಟು ರೈತರಿಗೆ ದುಪ್ಪಟ್ಟು ಹಣ ಬಂತು ಎಂದು ಕೇಳಿದರು. ಜನತೆ ಚೊಂಬು ಎಂದು ಕೂಗಿದರು. ಹೀಗಾಗಿ ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ-ಜೆಡಿಎಸ್ ಕೈಗೆ ಅವರ ಖಾಲಿಚೊಂಬನ್ನು ಅವರಿಗೇ ವಾಪಾಸ್ ಕೊಡಿ ಎಂದು ಕರೆ ನೀಡಿದರು.

# ಯದುವೀರ್ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು

**• ಉದಯವಾಹಿನಿ ಮೈಸೂರು**

ಕೊಡಗು-ಮೈಸೂರು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ರಾಜವಂಶಸ್ಥ ಯದುವೀರ್ ಒಡೆಯರ್ ವಿರುದ್ಧ ರಾಜ್ಯ ಕಾಂಗ್ರೆಸ್ ಚುನಾವಣಾ ಆಯೋಗಕ್ಕೆ ದೂರು ನೀಡಿದೆ.ಯದುವೀರ್ ಒಡೆಯರ್ ಈ ಬಾರಿ ಮೈಸೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. ಇದೇ ಮೊದಲ ಬಾರಿಗೆ ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ. ರಾಜಕೀಯದಲ್ಲಿ ಅವರಿಗೆ ಅನುಭವ ಹೊಸದು. ಹಾಗಿದ್ದರೂ ತಮ್ಮ ಕ್ಷೇತ್ರದಲ್ಲಿ ಓಡಾಡುತ್ತಾ ಜನರೊಂದಿಗೆ ಬೆರೆತು ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ಈ ನಡುವೆ ಕಾಂಗ್ರೆಸ್ ಅವರ ವಿರುದ್ಧ ಹಣ, ಸೀರೆ, ಪುಸ್ತಕ ಇತ್ಯಾದಿಗಳನ್ನು ಹಂಚಿ, ಆಮಿಷವೊಡ್ಡಿದ ಆರೋಪ ಹೊರಿಸಿ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಯದುವೀರ್ ಒಡೆಯರ್ ಸೋಷಿಯಲ್ ಮೀಡಿಯಾದಲ್ಲಿ ಪ್ರಭಾವಿತರಾಗಿರುವ ಕೆಲವು ವ್ಯಕ್ತಿಗಳೊಂದಿಗೆ ಸಭೆ ನಡೆಸಿದ್ದಾರೆ. ಈ ಸಭೆಯಲ್ಲಿ ಯದುವೀರ್ ಸೋಷಿಯಲ್ ಮೀಡಿಯಾ ಪ್ರಭಾವಿಗಳಿಗೆ ಹಣ, ಸೀರೆ, ಪುಸ್ತಕ, ಪೆನ್ನು ಹಂಚಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

ತಮ್ಮ ಪರವಾಗಿ ಸೋಷಿಯಲ್ ಮೀಡಿಯಾಗಳಲ್ಲಿ ಪೋಸ್ಟ್ ಮಾಡಲು ಯದುವೀರ್ ಈ ರೀತಿ ಆಮಿಷವೊಡ್ಡಿರುವುದು ಚುನಾವಣಾ ನೀತಿ ಸಂಹಿತೆಗೆ ವಿರುದ್ಧವಾಗಿದೆ. ಇದಕ್ಕೆ ಪುರಾವೆಯಾಗಿ ಫೋಟೋಗಳು ನಮ್ಮ ಬಳಿಯಿದೆ. ಹೀಗಾಗಿ ಯದುವೀರ್ ಒಡೆಯರ್ ವಿರುದ್ಧ ತಕ್ಕ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.


ಉದಯವಾಹಿನಿ ಚಿತ್ರ

# ಎಚ್‌ಡಿಕೆಗೆ ಸುಮಲತಾ ಬೆಂಬಲ

**• ಉದಯವಾಹಿನಿ ಮಂಡ್ಯ**



ಎನ್‌ಡಿಎ ಅಭ್ಯರ್ಥಿ ಎಚ್‌ಡಿ ಕುಮಾರಸ್ವಾಮಿ ಅವರಿಗೆ ಸಂಸದೆ ಸುಮಲತಾ ಅಂಬರೀಶ್ ಅವರು ಶನಿವಾರ ಬೆಂಬಲ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷಕ್ಕಾಗಿ ತ್ಯಾಗ ಮಾಡಿದ್ದೇನೆ. ವಾರದ ಹಿಂದೆಯಷ್ಟೇ ಬಿಜೆಪಿಗೆ ಸೇರ್ಪಡೆಗೊಂಡಿದ್ದೇನೆ. ಪಕ್ಷ ಸೂಚಿದರೆ, ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ಮಾಡುತ್ತೇನೆ. ಕುಮಾರಸ್ವಾಮಿಯವರಿಗೆ ಸಂಪೂರ್ಣ ಸಹಕಾರವಿದೆ ಎಂದು ಹೇಳಿದರು. ಮಂಡ್ಯದಿಂದ ದೂರ ಉಳಿದಿದ್ದಾರೆ ಎಂಬ ನೆಪದಲ್ಲಿ ಮಾಧ್ಯಮಗಳು ವಿವಾದ ಸೃಷ್ಟಿಸುವುದು ಬೇಡ. ಪಕ್ಷದ ಹೈಕಮಾಂಡ್ ಅಥವಾ ಅಭ್ಯರ್ಥಿ ಪರ ಪ್ರಚಾರಕ್ಕೆ ಮನವಿ ಮಾಡಿದರೆ ನಾನು ಪ್ರಚಾರ ಮಾಡುತ್ತೇನೆ ಎಂದು ಸ್ಪಷ್ಟಪಡಿಸಿದರು. ನಾನು ಗೆದ್ದ ಕ್ಷೇತ್ರವನ್ನು ಬಿಟ್ಟುಕೊಟ್ಟಿದ್ದೇನೆ. ಗೆದ್ದ ಸ್ಥಾನವನ್ನು ಯಾರೂ ಬಿಟ್ಟುಕೊಡುವುದಿಲ್ಲ. ಸ್ಥಾನ ಬಿಟ್ಟುಕೊಟ್ಟು ಬಿಜೆಪಿ ಸೇರ್ಪಡೆಯಾಗಿದ್ದೇನೆಂದರೆ ಎನ್'ಡಿಎ ಅಭ್ಯರ್ಥಿ ಪರವಾಗಿದ್ದೇನೆ ಎಂದೇ ಅರ್ಥ ಎಂದು ತಿಳಿಸಿದರು.

# ಬೈಕ್ ಕಳ್ಳತನ: ಎಳನೀರು ವ್ಯಾಪಾರಿಗಳ ಬಂಧನ

**• ಉದಯವಾಹಿನಿ ತುಮಕೂರು**

ನಗರದ ವಿವಿಧೆಡೆ ಬೈಕ್ ಕಳ್ಳತನ ಮಾಡುತ್ತಿದ್ದ ಮೂವರು ಎಳನೀರು ವ್ಯಾಪಾರಿಗಳನ್ನು ಪೊಲೀಸರು ಬಂಧಿಸಿ, 7 ಬೈಕ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

ನಗರದ ಕೋತಿತೋಪು ನಿವಾಸಿಗಳಾದ ಸುದೀಪ್ (24), ರಾಮಮೂರ್ತಿ (22), ಗುಬ್ಬಿ ತಾಲ್ಲೂಕಿನ ತಗ್ಗಿಹಳ್ಳಿಯ ರಂಗನಾಥ್ (27) ಬಂಧಿತ ಕಳ್ಳರು.

ಏ.16 ರಂದು ತಾಲ್ಲೂಕಿನ ನಾಗವಲ್ಲಿಯ ಗಂಗರಾಜು ಎಂಬುವರ ಮನೆಯ ಮುಂದೆ ನಿಲ್ಲಿಸಿದ್ದ ಬೈಕ್ ಕಳ್ಳತನವಾಗಿತ್ತು. ಈ ಕುರಿತು ಹೆಬ್ಬೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸದರಿ ಪ್ರಕರಣದ ತನಿಖೆಗೆ ಕ್ಯಾತ್ಸಂದ್ರ ಠಾಣೆಯ ಸಿಪಿಐ ರಾಮಪ್ರಸಾದ್ ನೇತೃತ್ವದಲ್ಲಿ ಹೆಬ್ಬೂರು ಪಿಎಸ್ಐ ಜಿ.ಎಸ್.ಭೈರೇಗೌಡ ಮತ್ತು ಸಿಬ್ಬಂದಿ ಒಳಗೊಂಡ ತಂಡ ರಚಿಸಲಾಗಿತ್ತು.

ಪ್ರಕರಣದ ಜಾಡು ಹಿಡಿದ ಪೊಲೀಸರು ಮೂವರು ಕಳ್ಳರನ್ನು ಬಂಧಿಸಿದ್ದಾರೆ. 4.60 ಲಕ್ಷ ಮೌಲ್ಯದ ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ. ಸಿಪಿಐ ರಾಮಪ್ರಸಾದ್, ಪಿಎಸ್ಐಗಳಾದ ಜಿ.ಎಸ್.ಭೈರೇಗೌಡ, ಕೃಷ್ಣಮೂರ್ತಿ, ಸಿಬ್ಬಂದಿಯಾದ ಕೆ.ರಾಜಣ್ಣ, ರಮೇಶ್ ಹನುಮರಂಗಯ್ಯ, ಸೈಯದ್ ಇರ್ಫಾತ್ ಅಲಿ, ಕಿರಣ್ ಬಸವರಾಜು, ಸಂತೋಷ್, ವಿರೂಪಾಕ್ಷ, ಕಿಶೋರ್, ಸುರೇಶ್ ಅವರು ಕಾರ್ಯಾಚಾರಣೆಯಲ್ಲಿ ಪಾಲ್ಗೊಂಡಿದ್ದರು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್ ತಿಳಿಸಿದ್ದಾರೆ.

# ತುಮಕೂರು ಕ್ಷೇತ್ರಕ್ಕೆ ವಿ.ಸೋಮಣ್ಣ ಪ್ರಣಾಳಿಕೆ

**• ಉದಯವಾಹಿನಿ ತುಮಕೂರು**


ಉದಯವಾಹಿನಿ ಚಿತ್ರ

ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ವಿ.ಸೋಮಣ್ಣ ಅವರು ಸಂಕಲ್ಪ ಪತ್ರ ಎಂಬ ಹೆಸರಿನಲ್ಲಿ ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಿದ್ದಾರೆ. ಕೃಷಿ, ತೋಟಗಾರಿಕೆ, ಗ್ರಾಮೀಣಾಭಿವೃದ್ಧಿ, ನೀರಾವರಿ, ಶಿಕ್ಷಣ, ಆರೋಗ್ಯ, ಮೂಲಸೌಕರ್ಯ, ರಸ್ತೆ ಮತ್ತು ರೈಲ್ವೆ, ಕೈಗಾರಿಕೆ, ಪ್ರವಾಸೋದ್ಯಮ, ಕ್ರೀಡೆ ಸೇರಿದಂತೆ ಎಲ್ಲಾ ಕ್ಷೇತ್ರದಲ್ಲೂ ಅಭಿವೃದ್ಧಿಯ ಕುರಿತು ಸಂಕಲ್ಪ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

**ಸಂಕಲ್ಪ ಪತ್ರ ಅನಾವರಣ**

ತುಮಕೂರು ಜಿಲ್ಲೆಯಲ್ಲಿ ಅಡಿಕೆ ಸಂಸ್ಕರಣಾ ಘಟಕ ಸ್ಥಾಪನೆ, ತೆಂಗು ಆಧಾರಿತ ಉತ್ಪನ್ನಗಳ ಬೃಹತ್ ಕೈಗಾರಿಕೆ ಸ್ಥಾಪನೆ, ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರದಿಂದ ಘೋಷಣೆ ಆದ 5300 ಕೋಟಿ ರೂ. ಬಿಡುಗಡೆ, ಎತ್ತಿನ ಹೊಳೆ ಯೋಜನೆಯನ್ನು ಜಲಜೀವನ ಮಿಷನ್ ಕಾರಿಡಾರ್ ಆಗಿ ಘೋಷಣೆ, ತುಮಕೂರು ಲೋಕಸಭಾ ಕ್ಷೇತ್ರದಲ್ಲಿ ಐಐಟಿ, ಕೃಷಿ ವಿಜ್ಞಾನ ಕಾಲೇಜು, ಸಿದ್ದರಬೆಟ್ಟ ಸಮೀಪದಲ್ಲಿ ಆಯುಷ್ ವಿಶ್ವವಿದ್ಯಾಲಯ ಸ್ಥಾಪನೆ, ತುಮಕೂರಿನಲ್ಲಿ ಅಂತರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣ ಸ್ಥಾಪನೆ ಸೇರಿದಂತೆ ಒಟ್ಟು 75 ಯೋಜನೆಯನ್ನು ಸಂಕಲ್ಪ ಪತ್ರದಲ್ಲಿ ಪ್ರಕಟಿಸಿದ್ದಾರೆ. ಮೈತ್ರಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಆಂಜಿನಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ಹೆಬ್ಬಾಕ ರವಿ, ತುಮಕೂರು ನಗರ ಶಾಸಕ ಜ್ಯೋತಿಗಣೇಶ್ ಸೇರಿದಂತೆ ಮೈತ್ರಿ ಪಕ್ಷದ ಮುಖಂಡರು ಸಂಕಲ್ಪ ಪತ್ರವನ್ನು ಅನಾವರಣಗೊಳಿಸಿದರು.

# ತಲೆ ತಗ್ಗಿಸುವಂತೆ ಮಾಡಬೇಡಿ: ಸಮಾಜದವರ ಎದುರು ವಿಜಯೇಂದ್ರ ಮನವಿ

**• ಉದಯವಾಹಿನಿ ಮೈಸೂರು**

ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಡಬೇಕು. ನಾನು ತಲೆ ತಗ್ಗಿಸುವಂತೆ ಮಾಡಬೇಡಿ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಕೋರಿದರು.

ಇಲ್ಲಿನ ನರಸಿಂಹರಾಜ ಕಂಠೀರವ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಭಾನುವಾರ ಆಯೋಜಿಸಿದ್ದ ವೀರಶೈವ-ಲಿಂಗಾಯತ ಸಮಾಜದ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.ಸಮಾಜದವರು ತಲೆ ತಗ್ಗಿಸುವಂತೆ ನಾನು ನಡೆದುಕೊಳ್ಳುವುದಿಲ್ಲ.

ವಿಜಯೇಂದ್ರಗೆ ಬೆಂಬಲ ಕೊಟ್ಟಿದ್ದು ಸಾರ್ಥಕವಾಯಿತು ಎಂದು ಎಲ್ಲರೂ ಹೆಮ್ಮೆಯಿಂದ ಮಾತನಾಡುವಂತೆ ರಾಜಕಾರಣ ಮಾಡುತ್ತೇನೆ. ಮೈಸೂರು, ಚಾಮರಾಜನಗರ ಸೇರಿದಂತೆ ರಾಜ್ಯದಾದ್ಯಂತ ಸಮಾಜಕ್ಕೆ ಶಕ್ತಿ ತುಂಬುತ್ತೇನೆ' ಎಂದು ಭರವಸೆ ನೀಡಿದರು.

ಸಮಾಜದವರು ಮತ್ತೊಬ್ಬರ ಕಾಲೆಳೆಯುವ ಕೆಲಸ ಮಾಡುತ್ತಿದ್ದೇವೆ. ಪರಿಣಾಮ, ಕವಲು ದಾರಿಯಲ್ಲಿದ್ದೇವೆ. ಹುಬ್ಬಳ್ಳಿಯಲ್ಲಿ ನಡೆದಂತಹ ಘಟನೆ ಕಂಡಾಗ ನಮ್ಮೆಲ್ಲರಿಗೂ ದುಃಖವಾಗ ಬೇಕು, ಸಿಟ್ಟು ಬರಬೇಕು. ಬೆಂಕಿ ಬಿದ್ದಿರುವುದು ಪಕ್ಕದ ಮನೆಗಲ್ಲವೇ ಎಂದು ಸುಮ್ಮನಿದ್ದರೆ, ಸಮಯ ಮೀರಿದರೆ ಬೆಂಕಿಯನ್ನು ನಂದಿಸಲಾಗದು. ಹೀಗಾಗಿ ಎಚ್ಚೆತ್ತುಕೊಂಡು ಜಾಗೃತರಾಗಬೇಕು' ಎಂದು ತಿಳಿಸಿದರು.ತಂದೆ ಬಿ.ಎಸ್. ಯಡಿಯೂರಪ್ಪ ಅವರ ವಿರುದ್ಧ ನಡೆದಿದ್ದ ಷಡ್ಯಂತ್ರಗಳ ಬಗ್ಗೆ ಪುಸ್ತಕ ಬರೆಯಲಿದ್ದೇನೆ' ಎಂದು ಹೇಳಿದರು.



**ಸಮಯ ಮೀರಿದರೆ ಬೆಂಕಿಯನ್ನು ನಂದಿಸಲಾಗದು. ಹೀಗಾಗಿ ಎಚ್ಚೆತ್ತುಕೊಂಡು ಜಾಗೃತರಾಗಬೇಕು**

**ಗ್ಯಾರಂಟಿಯೇ ಅಭಿವೃದ್ಧಿಯೇ?**

ನೇಹಾ ಕೊಲೆ ಪ್ರಕರಣದಲ್ಲಿ ಹಗುರವಾಗಿ ಹೇಳಿಕೆ ನೀಡುತ್ತಿರುವ ಮುಖ್ಯಮಂತ್ರಿಯ ಮಾನಸಿಕ ಸ್ಥಿತಿ ಹೇಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಯಾವ ಸಮಾಜದ ಬಗ್ಗೆಯೂ ಅವರಿಗೆ ಗೌರವ ಇಲ್ಲ. ಗ್ಯಾರಂಟಿಯೇ ಅಭಿವೃದ್ಧಿಯೇ? ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯ ಸಂಪೂರ್ಣ ಸ್ಥಗಿತಗೊಂಡಿದೆ' ಎಂದು ವಾಗ್ದಾಳಿ ನಡೆಸಿದರು.

# ತಾಂತ್ರಿಕ ನೆಪ: ರೇಷ್ಮೆಗೂಡು ಹರಾಜು ಪ್ರಕ್ರಿಯೆ ವಿಳಂಬ

**• ಉದಯವಾಹಿನಿ ಮಳವಳ್ಳಿ**

ಸರ್ಕಾರಿ ರೇಷ್ಮೆಗೂಡು ಮಾರುಕಟ್ಟೆಯಲ್ಲಿ ಹರಾಜು ಪ್ರಕ್ರಿಯೆ ವಿಳಂಬವಾದ ಹಿನ್ನಲೆಯಲ್ಲಿ ತಾಲ್ಲೂಕಿನ ಬುಗತಗಹಳ್ಳಿ ಬಳಿ ರೈತರು ಮದ್ದೂರು-ಮಳವಳ್ಳಿ ರಸ್ತೆಗೆ ರೇಷ್ಮೆ ಗೂಡು ಸುರಿದು ಕೆಲ ಕಾಲ ಪ್ರತಿಭಟನೆ ನಡೆಸಿದರು. ಬುಗತಗಹಳ್ಳಿ ಬಳಿಯ ಸರ್ಕಾರಿ ರೇಷ್ಮೆ ಮಾರುಕಟ್ಟೆಯಲ್ಲಿ ಬೆಳಿಗ್ಗೆ 10.30ಕ್ಕೆ ಆರಂಭವಾಗಬೇಕಿದ್ದ ಹರಾಜು ಪ್ರಕ್ರಿಯೆ ತಾಂತ್ರಿಕ ಕಾರಣದಿಂದ ತಡವಾಯಿತು.

ಇದರಿಂದ, ದಿಢೀರ್ ರಸ್ತೆಗೆ ಇಳಿದ ರೈತರು ರೇಷ್ಮೆ ಗೂಡು ಸುರಿದು ರಸ್ತೆ ತಡೆಗೆ ಮುಂದಾದರು.

ಕೂಡಲೇ ಸ್ಥಳಕ್ಕೆ ಬಂದ ಸಿಪಿಐ ಬಿ.ಎಸ್. ಶ್ರೀಧರ್, ಪಿಎಸ್ಐ ಶ್ರವಣ ಸದಾಸರಡ್ಡಿ ರೈತರನ್ನು ಮನವೊಲಿಸಿ ಮಾರುಕಟ್ಟೆಗೆ ಕರೆದುಕೊಂಡು ಬಂದು ಅಧಿಕಾರಿಗಳೊಂದಿಗೆ ಸಮಸ್ಯೆ ಬಗ್ಗೆ ಚರ್ಚಿಸಿದರು.

ಸಿಪಿಐ ಬಿ.ಎಸ್. ಶ್ರೀಧರ್ ಅಧಿಕಾರಿಗಳೊಂದಿಗೆ ಚರ್ಚಿಸಿ ಮುಂದೆ ಈತರದ ಸಮಸ್ಯೆಯಾಗದಂತೆ ಕ್ರಮ ವಹಿಸುವಂತೆ ಸೂಚಿಸಿದರು. ಮಾಹಿತಿ ತಿಳಿದು ಚುನಾವಣಾ ಕರ್ತವ್ಯದಲ್ಲಿದ್ದ ರೇಷ್ಮೆ ಸಹಾಯಕ ನಿರ್ದೇಶಕ ಸ್ವಾಮಿ ವಿವೇಕಾನಂದ ಮಾರುಕಟ್ಟೆ ಭೇಟಿ ನೀಡಿ ಹರಾಜು ಪ್ರಕ್ರಿಯೆ ನಡೆಸಿದರು.


ಉದಯವಾಹಿನಿ ಚಿತ್ರ

**ಅಧಿಕಾರಿಗಳ ವಿರುದ್ಧ ಕಿಡಿ**

ಇಂಟರ್‌ನೆಟ್ ಸಮಸ್ಯೆಯಿಂದ ಹರಾಜು ಪ್ರಕ್ರಿಯೆ ವಿಳಂಬವಾಗಿದೆ ಎಂದ ಮಾರುಕಟ್ಟೆ ಅಧಿಕಾರಿ ಸುರೇಶ್ ಅವರಿಗೆ ರೈತರು ತೀವ್ರ ತರಾಟೆಗೆ ತೆಗೆದುಕೊಂಡರು. ಸಾಕಷ್ಟು ಬಾರಿ ಇಂಥ ಸಮಸ್ಯೆ ಹಾಗೂ ದರ ಕುಸಿತದಿಂದ ರೈತರಿಗೆ ನಷ್ಟವಾಗುತ್ತಿದೆ ಎಂದು ಅಧಿಕಾರಿಗಳ ವಿರುದ್ಧ ಕಿಡಿ ಕಾರಿದರು. ಕೆಲಕಾಲ ಅಧಿಕಾರಿಯ ಅಸಡ್ಡೆ ಉತ್ತರದಿಂದ ಕೋಪಕೊಂಡ ರೈತರು ಪ್ರತಿಭಟನೆಗೆ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

# ಅಪಘಾತವಲ್ಲ, ಅದು ಉದ್ದೇಶಪೂರ್ವಕ ಕೃತ್ಯ: ಆರೋಪ

**• ಉದಯವಾಹಿನಿ ವಿರಾಜಪೇಟೆ**

ಇಲ್ಲಿನ ವಾಲ್ನೂರು ಸಮೀಪ ಗುರುವಾರ ರಾತ್ರಿ ಕಾರೊಂದು ಬಿಜೆಪಿ ಕಾರ್ಯಕರ್ತರಿಗೆ ಡಿಕ್ಕಿ ಹೊಡೆದು ರಾಮಪ್ಪ ಎಂಬುವವರು ಮೃತಪಟ್ಟ ಘಟನೆ ಕುರಿತ ಬಿಜೆಪಿ ಆಕ್ರೋಶ ಶನಿವಾರವೂ ಮುಂದುವರೆಯಿತು. ಇಲ್ಲಿನ ಮಡಿಕೇರಿ, ಸೋಮವಾರಪೇಟೆ, ಕುಶಾಲನಗರ, ವಿರಾಜಪೇಟೆ, ಪೊನ್ನಂಪೇಟೆ ತಾಲ್ಲೂಕು ಕೇಂದ್ರಗಳಲ್ಲಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಪ್ರಕರಣದ ಸಮಗ್ರ ತನಿಖೆಗೆ ಒತ್ತಾಯಿಸಿದರು.

ಮಡಿಕೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಬಿಜೆಪಿ ವಕ್ತಾರ ತಳೂರು ಕಿಶೋರ್‌ಕುಮಾರ್, 'ಇದು ಆಕಸ್ಮಿಕ ಘಟನೆಯಲ್ಲ. ಉದ್ದೇಶಪೂರ್ವಕ ಅಪಘಾತ' ಎಂದು ದೂರಿದರು. ಬಿಜೆಪಿ ಕಾರ್ಯಕರ್ತರ ಮನೋಸ್ಥೈರ್ಯವನ್ನು ಕುಗ್ಗಿಸಲೆಂದೇ ಇಂತಹ ಕೃತ್ಯ ನಡೆಸಲಾಗುತ್ತಿದೆ. ಘಟನೆ ಕುರಿತು ಸರ್ಕಾರ ಸಮಗ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು. ಅಪಘಾತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ಪಕ್ಷದ ವತಿಯಿಂದ 10 ಲಕ್ಷ ಹಾಗೂ ಗಾಯಗೊಂಡವರಿಗೆ 2 ಲಕ್ಷ ಪರಿಹಾರ ನೀಡಲಾಗುವುದು ಎಂದು ಹೇಳಿದರು. ಪಕ್ಷದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ ಮಾತನಾಡಿ, 'ಬಿಜೆಪಿ ಪರವಾದ ಅಲೆಯನ್ನು ನಾಶಮಾಡಿ ಮತದಾರರ ಗಮನ ಬೇರೆಡೆ ಸೆಳೆಯುವ ಪ್ರಯತ್ನ ಕಾಂಗ್ರೆಸ್‌ನದು' ಎಂದರು. ಒಂದು ಸಮುದಾಯದ ಓಲೈಕೆಗಾಗಿ ಕಾಂಗ್ರೆಸ್ ತನ್ನ ಕಾರ್ಯಕರ್ತರಿಗೆ ಅನ್ಯಾಯವಾದರೂ ಸುಮ್ಮನಿರುತ್ತದೆ. ಮುಂದೊಂದು ದಿನ ಆ ಪಕ್ಷದಲ್ಲಿ ಹಿಂದೂ ಕಾರ್ಯಕರ್ತರಿಗೆ ರಕ್ಷಣೆಯೇ ಇಲ್ಲದ ಸ್ಥಿತಿ ಬರಬಹುದು ಎಂದು ಹೇಳಿದರು.


ಉದಯವಾಹಿನಿ ಚಿತ್ರ

# ಚಿಕ್ಕಬಳ್ಳಾಪುರ ಲೋಕ ಕ್ಷೇತ್ರ ಜಾತಿ ಕಾವಲಿಯಲ್ಲಿ ಬೇಯುತ್ತಿದೆ ಕಣ

**• ಉದಯವಾಹಿನಿ ಚಿಕ್ಕಬಳ್ಳಾಪುರ**

ಇನ್ನೂ ನನಸಾಗದ ಶಾಶ್ವತ ನೀರಾವರಿ ಯೋಜನೆಯ ಕನಸು, ಕಾಂಗ್ರೆಸ್ ಗ್ಯಾರಂಟಿ, ಮೋದಿ ಅಲೆ, ಭ್ರಷ್ಟಾಚಾರ, ವ್ಯಕ್ತಿಗತ ನಿಂದನೆ- ಹೀಗೆ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಕಣವು ನಾನಾ ವಿಚಾರಗಳ ಮೂಲಕ ಕದಡಿದೆ. ಜಾತಿ ಕಾವಲಿಯಲ್ಲಿ ರಾಜಕಾರಣ ಜೋರಾಗಿಯೇ ಬೇಯುತ್ತಿದೆ. ಮತ ವಿಭಜನೆ ಮತ್ತು ಧ್ರುವೀಕರಣವನ್ನು ಹದಗೊಳಿಸುತ್ತಿದೆ.

ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿ ಮಾಜಿ ಸಚಿವ ಡಾ.ಕೆ.ಸುಧಾಕರ್ ಮತ್ತು ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ನಡುವೆಯೇ ಜಿದ್ದಾಜಿದ್ದು. ಸಿಪಿಎಂನ ಎಂ.ಪಿ.ಮುನಿವೆಂಕಟಪ್ಪ ಸೇರಿದಂತೆ ಒಟ್ಟು 29 ಅಭ್ಯರ್ಥಿಗಳು ಕಣದಲ್ಲಿ ಇದ್ದಾರೆ.

ಆಂಧ್ರಪ್ರದೇಶ ಗಡಿಗೆ ಹೊಂದಿಕೊಂಡಿರುವ ಚೇಳೂರು ತಾಲ್ಲೂಕಿನಿಂದ ರಾಮನಗರ ಜಿಲ್ಲೆಯ ಸೋಲೂರಿನವರೆಗೆ ಕ್ಷೇತ್ರ ಹರಡಿದೆ. ಎಂಟೂ ವಿಧಾನಸಭಾ ಕ್ಷೇತ್ರಗಳಲ್ಲಿ ಒಂದೊಂದು ರೀತಿಯ ಸನ್ನಿವೇಶವಿದೆ. ಕಾಂಗ್ರೆಸ್‌ನಿಂದ ಕಣಕ್ಕೆ ಇಳಿದ ತೀರಾ ಸಣ್ಣ ಪುಟ್ಟ ಸಮುದಾಯಗಳ ಅಭ್ಯರ್ಥಿಗಳು ದಾಖಲೆ ಅಂತರದಿಂದ ಗೆಲುವು ಸಾಧಿಸಿರುವ ಇತಿಹಾಸವಿದೆ. ಆದರೆ, ಈಗ ಆ ಸನ್ನಿವೇಶವಿಲ್ಲ. ಸುಧಾಕರ್ ಒಕ್ಕಲಿಗ ಮತ್ತು ರಕ್ಷಾ ರಾಮಯ್ಯ ಬಲಿಜ ಸಮುದಾಯದವರಾಗಿದ್ದಾರೆ. 'ನಮ್ಮವ' ಎನ್ನುವ ಅಭಿಮಾನದ ಮತ ಬ್ಯಾಂಕ್ ಜೋರಾಗಿದೆ.

ಸಚಿವನಾಗಿದ್ದ ವೇಳೆ ಚಿಕ್ಕಬಳ್ಳಾಪುರಕ್ಕೆ ವೈದ್ಯಕೀಯ ಶಿಕ್ಷಣ ಕಾಲೇಜು, ಮಂಚೇನಹಳ್ಳಿ ತಾಲ್ಲೂಕು ರಚನೆ ಸೇರಿದಂತೆ ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ಜಾತಿ ರಾಜಕೀಯ ಮಾಡಿಲ್ಲ. ಲೋಕಸಭಾ ಕ್ಷೇತ್ರಕ್ಕೆ 'ಚಿಕ್ಕಬಳ್ಳಾಪುರ ಮಾದರಿ ಅಭಿವೃದ್ಧಿ ವಿಸ್ತರಿಸುವೆ, ಮತ ನೀಡಿ ಎಂದು ಡಾ.ಕೆ.ಸುಧಾಕರ್ ಕೋರುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಚಿಕ್ಕಬಳ್ಳಾಪುರ ಹಾಲು ಒಕ್ಕೂಟ ರಚನೆ ರದ್ದುಗೊಳಿಸಿದ್ದನ್ನು ಸಹ ಅಸ್ತ್ರವಾಗಿ ಬಳಸಿಕೊಳ್ಳುತ್ತಿದ್ದಾರೆ.

# ಪ್ರಜಾಧ್ವನಿ -02 ಲೋಕಸಭಾ ಚುನಾವಣಾ ಪ್ರಚಾರ ಸಭೆ

## • ಕಾಂಗ್ರೆಸ್ ಪಕ್ಷ ಗೆದ್ದರೆ ನ್ಯಾಯ ಪತ್ರ ಪ್ರಣಾಳಿಕೆಯಲ್ಲಿ ಘೋಷಣೆಯಾಗಿರುವ ಎಲ್ಲಾ ಯೋಜನೆಗಳು ಜಾರಿ: ಸಿದ್ದರಾಮಯ್ಯ

**• ಉದಯವಾಹಿನಿ ಮಂಡ್ಯ**

ಕಾಂಗ್ರೆಸ್ ನ ಸತ್ಯ ಹಾಗೂ ಜೆಡಿಎಸ್ -- ಬಿಜೆಪಿ ಸುಳ್ಳಿನ ನಡುವಿನ ಹೋರಾಟದಲ್ಲಿ ಸತ್ಯವನ್ನೇ ಗೆಲ್ಲಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು. ಅವರು ಮಂಡ್ಯ ಲೋಕಸಭಾ ವ್ಯಾಪ್ತಿಯ ಕೆ. ಆರ್ ನಗರದಲ್ಲಿ ತಮ್ಮ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾದ ಸ್ಟಾರ್ ಚಂದ್ರು ರವರ ಪರ ಪ್ರಜಾಧ್ವನಿ -02 ಲೋಕಸಭಾ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗವಹಿಸಿ ತಮ್ಮ ಅಭ್ಯರ್ಥಿಯ ಪರವಾಗಿ ಮತಯಾಚನೆ ಮಾಡಿ ಮತದಾರರನ್ನು ಉದ್ದೇಶಿಸಿ ಮಾತನಾಡಿದರು.

ಕಾಂಗ್ರೆಸ್ ಪಕ್ಷ ಗೆದ್ದರೆ ಮಾತ್ರ ನ್ಯಾಯ ಪತ್ರ ಪ್ರಣಾಳಿಕೆಯಲ್ಲಿ ಘೋಷಣೆಯಾಗಿರುವ ಎಲ್ಲಾ ಯೋಜನೆಗಳು ಜಾರಿಯಾಗಲಿವೆ. ಯಾವುದೇ ಕಾರಣಕ್ಕೂ ಗ್ಯಾರಂಟಿಗಳು ನಿಲ್ಲುವುದಿಲ್ಲ ಎಂದು ಆಶ್ವಾಸನೆ ನೀಡಿದರು. ಬಿಜೆಪಿ ಕೇಂದ್ರದಲ್ಲಿ ನರೇಂದ್ರ ಮೋದಿ ಯವರ ನೇತೃತ್ವದಲ್ಲಿ ಹತ್ತು ವರ್ಷ ಆಡಳಿತ ಮಾಡಿದ್ದರೂ ಬಡವರಿಗೆ, ಮಹಿಳೆಯರಿಗೆ, ಕಾರ್ಮಿಕರಿಗೆ, ಅಲ್ಪಸಂಖ್ಯಾತರು, ದಲಿತರಿಗೆ ಏನು ಮಾಡಿದ್ದಾರೆ ಎಂದು ಪ್ರಶ್ನಿಸಬೇಕು. ಅವರು ಚುನಾವಣಾ ಸಂದರ್ಭದಲ್ಲಿ ಹೇಳಿದಂತೆ ನಡೆದುಕೊಂಡಿದ್ದಾರೆಯೇ ಇಲ್ಲವೇ ಎಂದು ವಿಚಾರ ಮಾಡಬೇಕು. ನರೇಂದ್ರ ಮೋದಿ ಅವರ ಹೆಸರಿನಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮತಯಾಚನೆ ಮಾಡುತ್ತಿದ್ದಾರೆ. ಮತ ಕೇಳುವ ನೈತಿಕ ಹಕ್ಕು ಅವರಿಗಿದೆಯೇ? ಅಥವಾ ಕಾಂಗ್ರೆಸ್ ಪಕ್ಷಕ್ಕಿದೆಯೇ? ಎಂದರು.

**ರಾಜಕೀಯದಿಂದಲೇ ನಿವೃತ್ತಿ**

ಕಾಂಗ್ರೆಸ್ ಸರ್ಕಾರ ಇದ್ದೇ ಇರುತ್ತದೆ. ದೇವೇಗೌಡ ಹಾಗೂ ಕುಮಾರಸ್ವಾಮಿ ಹಗಲುಗನಸು ಕಾಣುತ್ತಿದ್ದಾರೆ. ಅವರಿಗೆ ಅವರ ಕುಟುಂಬದವರನ್ನು ಬಿಟ್ಟರೆ ಬೇರೆ ಯಾರನ್ನೂ ಸಹಿಸುವುದಿಲ್ಲ. ಇದಕ್ಕಾಗಿ ಅವರು ಅಧಿಕಾರಕ್ಕೆ ಬರಬೇಕೇ ಎಂದು ಪ್ರಶ್ನಿಸಿದರು.


ಉದಯವಾಹಿನಿ ಚಿತ್ರ

ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡಿದ್ದಾರೆಯೇ? ಯುವಕರನ್ನು ಭ್ರಮಾಲೋಕದಲ್ಲಿ ತೇಲುವಂತೆ ಮಾಡಿದ್ದಾರೆ. ನಿರುದ್ಯೋಗ ದೇಶದಲ್ಲಿ ಬೆಳೆಯುತ್ತಿದೆ. ಉದ್ಯೋಗ ಕೇಳಿದರೆ ಪಕೋಡಾ ಮಾಡುವಂತೆ ಹೇಳಿದ ಇವರು ದೇಶದ ಪ್ರಧಾನಿಯಾಗಲು ಲಾಯಕ್ಕೇ ಎಂದು ಪ್ರಶ್ನಿಸಿದರು.

ರಾಜೀವ್ ಗಾಂಧಿಯವರು 18 ವರ್ಷ ತುಂಬಿದ ಎಲ್ಲರಿಗೂ ಮತ ಹಾಕಲು ಅವಕಾಶ ಕಲ್ಪಿಸಿದರು. ಅದರ ದುರುಪಯೋಗವನ್ನು ಮಾಡಿಕೊಂಡದ್ದು ಸರಿಯೇ? ಎಂದರು. ಯಾವುದರ ಬೆಲೆ ಇಳಿಸಲಿಲ್ಲ. ಬಿಜೆಪಿ ಮತ ಕೇಳುವ ಹಕ್ಕನ್ನು ಕಳೆದುಕೊಂಡಿದ್ದಾರೆ.ಶಾಸಕ ರವಿಶಂಕರ್ ಮೇಲೆ ಆಧಾರ ರಹಿತ ಆರೋಪಗಳನ್ನು ಮಾಡುತ್ತಾರೆ. ದ್ವೇಷದ, ತೇಜೋವಧೆ ಮಾಡುವ ರಾಜಕಾರಣ ಮಾಡುತ್ತಿದ್ದಾರೆ ಎಂದರು. 2022 ನೇ ಇಸವಿಗೆ ದುಪ್ಪಟ್ಟು ಮಾಡುವುದಾಗಿ , ಸ್ವಾಮಿನಾಥನ್ ವರದಿ ಶಿಫಾರಸ್ಸುಗಳನ್ನು ಯಥಾವತ್ತಾಗಿ ಜಾರಿ ಮಾಡುವುದಾಗಿ ಹೇಳಿದ್ದರು.

> ಹೆಚ್.ಡಿ.ದೇವೇಗೌಡರು ನಾಚಿಕೆಯಿಲ್ಲದೆ ಒಟ್ಟು ನಾಲ್ಕರಲ್ಲಿ ಮೂರು ಸ್ಥಾನಗಳಲ್ಲಿ ಅವರ ಮನೆಯವರೇ ನಿಂತಿದ್ದಾರೆ. ಕನ್ನಡಿಗರ ಆಶೀರ್ವಾದ ಇರುವವರೆಗೂ ನನಗೆ ಯಾರೂ ಏನೂ ಮಾಡಲು ಸಾಧ್ಯವಿಲ್ಲ ಎಂದರು. -ಸಿದ್ದರಾಮಯ್ಯ

**ಸ್ಟಾರ್ ಚಂದ್ರು ಪರ ಮತಯಾಚನೆ**

ಮನ್ ಮೋಹನ್ ಸಿಂಗ್ ಅವರು 72 ಸಾವಿರ ಕೋಟಿ ರೈತರ ಸಾಲ ಮನ್ನಾ ಮಾಡಿದ್ದರು. ನನ್ನ ಅಧಿಕಾರದ ಅವಧಿಯಲ್ಲಿ 50 ಸಾವಿರವರೆಗಿನ ರೈತರ ಸಾಲವನ್ನು 8165 ಕೋಟಿ ರೂ.ಗಳನ್ನು 27 ಲಕ್ಷ ರೈತ ಕುಟುಂಬಗಳಿಗೆ ಮನ್ನಾ ಮಾಡಿದ್ದೆ ಎಂದು ಸ್ಮರಿಸಿದರು.

ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಸಾಲ ಮನ್ನಾ ಮಾಡುವ ಗ್ಯಾರಂಟಿ ನೀಡಲಾಗಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರೈತರ ಸಾಲ ಮನ್ನಾ ಮಾಡುವುದಲ್ಲದೆ ಎಂ.ಎಸ್.ಪಿಗೆ ಕಾನೂನು ಜಾರಿ ಮಾಡಲಾಗುವುದು ಎಂದರು.

# ಮಿನಿ ನ್ಯೂಸ್

## ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಎಫ್‌ಐಆರ್ ದಾಖಲು

**• ಉದಯವಾಹಿನಿ ತುಮಕೂರು**




ಮಾದರಿ ನೀತಿ ಸಂಹಿತೆ ಉಲ್ಲಂಘನೆ ಹಿನ್ನಲೆಯಲ್ಲಿ ಮಾಜಿ ಸಿಎಂ ಹೆಚ್.ಡಿ .ಕುಮಾರಸ್ವಾಮಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ವಿರುದ್ಧ ವೈಯಕ್ತಿಕವಾಗಿ ನಿಂದಿಸಿದ ಹಿನ್ನೆಲೆಯಲ್ಲಿ ಮಾಜಿ ಸಿಎಂ ಕುಮಾರಸ್ವಾಮಿ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ತುಮಕೂರು ಜಿಲ್ಲೆಯ ಗುಬ್ಬಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.ಇದೀಗ ಪೊಲೀಸರು ಮಾಜಿ ಸಿಎಂ ಕುಮಾರಸ್ವಾಮಿ ವಿರುದ್ಧ ಎಫ್ ಐಆರ್ ದಾಖಲಿಸಿದ್ದಾರೆ.

ಏಪ್ರಿಲ್ 13ರಂದು ಗುಬ್ಬಿಯಲ್ಲಿ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಪರ ನಡೆದ ಪ್ರಚಾರ ಸಭೆಯಲ್ಲಿ ಡಿ.ಕೆ.ಸುರೇಶ್ ವಿರುದ್ಧ ವಾಗ್ದಾಳಿ ನಡೆಸಿದ್ದ ಹೆಚ್.ಡಿ.ಕುಮಾರಸ್ವಾಮಿ, ಕೊತ್ವಾಲ್ ಗರಡಿಯಿಂದ ಬಂದವರು. ಹಣ ದಾಹಕ್ಕೆ ಏನು ಬೇಕಾದ್ರೂ ಮಾಡ್ತಾರೆ ಎಂದು ಟೀಕಿಸಿದ್ದರು. ಈ ಹಿನ್ನೆಲೆಯಲ್ಲಿ ನೀತಿ ಸಂಹಿತೆ ಉಲ್ಲಂಘನೆ ಅಡಿಯಲ್ಲಿ ಹೆಚ್.ಡಿ.ಕೆ ವಿರುದ್ಧ ಎಫ್ ಐ ಆರ್ ದಾಖಲಾಗಿದೆ

## ಆಗಸ್ಟ್‌ವರೆಗೆ ನೀರಿನ ಸಮಸ್ಯೆಯಾಗದು


**• ಉದಯವಾಹಿನಿ ತುಮಕೂರು**


ಉದಯವಾಹಿನಿ ಚಿತ್ರ

ಬುಗುಡನಹಳ್ಳಿ ಕೆರೆಯಲ್ಲಿ ಪ್ರಸ್ತುತ 270 ಎಂಸಿಎಫ್‌ಟಿ ನೀರಿನ ಸಂಗ್ರಹವಿದ್ದು, ಆ.24ರ ವರೆಗೆ ನಗರಕ್ಕೆ ನೀರು ಸರಬರಾಜು ಮಾಡಬಹುದು ಎಂದು ಮಹಾನಗರ ಪಾಲಿಕೆ ಆಯುಕ್ತೆ ಬಿ.ವಿ.ಅಶ್ವಿಜ ತಿಳಿಸಿದರು. ಬಂಡೇಪಾಳ್ಯ, ಚೇತನ ಬಡಾವಣೆ, ದಿಬ್ಬೂರು ಸೇರಿದಂತೆ ಇತರೆ ಬಡಾವಣೆಗಳಿಗೆ ಶನಿವಾರ ಭೇಟಿ ನೀಡಿ, ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪರಿಶೀಲಿಸಿದರು.

ನೀರಿನ ಪೂರೈಕೆಯ ಬಗ್ಗೆ ಸ್ಥಳೀಯರಿಂದ ಅಗತ್ಯ ಮಾಹಿತಿ ಪಡೆದರು. ಸದ್ಯಕ್ಕೆ ಕುಡಿಯುವ ನೀರಿನ ಸಮಸ್ಯೆಯಾಗುವುದಿಲ್ಲ ಎಂದು ಭರವಸೆ ನೀಡಿದರು. ನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ಪಾಲಿಕೆಯಿಂದ ವಾಟರ್ ಎಟಿಎಂ ಅಳವಡಿಸಲಾಗುತ್ತಿದೆ. ಎಟಿಎಂ ಮೂಲಕ 1ಕ್ಕೆ ಅರ್ಧ ಲೀಟರ್, 2ಕ್ಕೆ ಒಂದು ಲೀಟರ್ ನೀರು ಪಡೆಯಬಹುದು ಎಂದರು. ನಗರದ ಎಲ್ಲ ಕಡೆ ಪ್ರಸ್ತುತ 3 ದಿನಗಳಿಗೊಮ್ಮೆ ನೀರು ಪೂರೈಕೆ ಮಾಡಲಾಗುತ್ತಿದೆ. 45 ಜಲ ಸಂಗ್ರಹಾಗಾರ ಹಾಗೂ 710 ಕೊಳವೆ ಬಾವಿಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಹೊಸದಾಗಿ 3 ಕೊಳವೆ ಬಾವಿ ಕೊರೆಸಿದ್ದು, 25 ಹಳೆಯ ಕೊಳವೆ ಬಾವಿಗಳನ್ನು ಪುನಶ್ಚೇತನಗೊಳಿಸಲಾಗಿದೆ ಎಂದು ತಿಳಿಸಿದರು.


## ಮುನೇಶ್ವರ ಸ್ವಾಮಿ 7ನೇ ವಾರ್ಷಿಕ ಪೂಜೆ


ಉದಯವಾಹಿನಿ ಚಿತ್ರ

**• ಉದಯವಾಹಿನಿ ಸೋಮವಾರಪೇಟೆ**

ಇಲ್ಲಿನ ಮಹದೇಶ್ವರ ಬ್ಲಾಕ್‌ನ ಮಹದೇಶ್ವರ ಭಕ್ತವೃಂದದ ವತಿಯಿಂದ ಶನಿವಾರ ಮುನೇಶ್ವರ ಸ್ವಾಮಿ ಮತ್ತು ಚಾಮುಂಡೇಶ್ವರಿ ಅಮ್ಮನವರ 7ನೇ ವಾರ್ಷಿಕ ಮಹಾಪೂಜೆ ನಡೆಯಿತು. ಅರ್ಚಕ ಜಗದೀಶ್ ಉಡುಪ ಅವರ ನೇತೃತ್ವದಲ್ಲಿ ಬೆಳಿಗ್ಗೆ 8ಕ್ಕೆ ಮಹಾಗಣಪತಿ ಹೋಮ, 10ಕ್ಕೆ ದುರ್ಗಾ ಹೋಮ ಹಾಗೂ ಕಳಸ ಪ್ರತಿಷ್ಠಾಪನೆ, 11-30ಕ್ಕೆ ನವಕ ಕಳಸ ಪ್ರತಿಷ್ಠಾಪನೆ, ಕಳಶಾಭಿಷೇಕ, ಸಂಜೆ 5ಕ್ಕೆ ಪಂಚ ದುರ್ಗಾದೀಪ ನಮಸ್ಕಾರ, 7-30ಕ್ಕೆ ಮಹಾ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ನಡೆಯಿತು. ಪೂಜಾ ಸಂದರ್ಭ ಸಮಿತಿ ಅಧ್ಯಕ್ಷ ಸುರೇಶ್ ಬಾಬು, ಗೌರವಾಧ್ಯಕ್ಷ ಡಿ.ಕೆ. ದೊರೆ, ಕಾರ್ಯದರ್ಶಿ ವಿ.ಸಿ. ಲೋಕೇಶ್, ಪ್ರಮುಖರಾದ ಬಿ.ಬಿ. ಮೋಹನ್, ಎನ್.ಪಿ. ಗೋವಿಂದ, ಆರ್.ಸಿ. ಅಣ್ಣಪ್ಪ, ತಿಮ್ಮಶೆಟ್ಟಿ ಇದ್ದರು.

## ಹೈನುಗಾರಿಕೆಯಲ್ಲಿ ಹೊಸ ಅನ್ವೇಷಣೆ: ರೈತ ಮಹಿಳೆ ಸಾಧನೆಗೆ ಮೆಚ್ಚುಗೆ


ಉದಯವಾಹಿನಿ ಚಿತ್ರ

**• ಉದಯವಾಹಿನಿ ಚನ್ನಪಟ್ಟಣ**

ಹೈನುಗಾರಿಕೆ ರೈತರ ಪ್ರಮುಖ ಉಪಕಸುಬು. ಹೈನುಗಾರಿಕೆಯನ್ನು ನಂಬಿ ಬದುಕು ಕಟ್ಟಿಕೊಂಡು ನೆಮ್ಮದಿಯ ಜೀವನ ಸಾಗಿಸುತ್ತಿರುವ ಹಲವಾರು ಕುಟುಂಬಗಳು ನಮ್ಮ ಕಣ್ಣ ಮುಂದಿವೆ. ಹೈನುಗಾರಿಕೆಯಲ್ಲಿ ರೈತ ಮಹಿಳೆಯರು ಸಹ ತೊಡಗಿಕೊಂಡು ಕ್ಷೀರಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಇದಕ್ಕೆ ಉತ್ತಮ ಉದಾಹರಣೆ ತಾಲ್ಲೂಕಿನ ಭೂಹಳ್ಳಿ ಗ್ರಾಮದ ರೈತ ಮಹಿಳೆ ಸುಜಾತ ವೆಂಕಟೇಶ್.

**ಮೂಲತಃ ರೈತಾಪಿ ಕುಟುಂಬದ ಸುಜಾತ ಅವರಿಗೆ ಏಳು ಎಕರೆ ಜಮೀನು ಇದೆ. ತಮ್ಮ ಜಮೀನಿನಲ್ಲಿ ತೆಂಗು, ವೀಳ್ಯದೆಲೆ, ಜೋಳ ಸೇರಿದಂತೆ ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಆದರೆ ಇವರ ಕೈ ಹಿಡಿದಿರುವುದು ಮಾತ್ರ ಹೈನುಗಾರಿಕೆ.**

ಗ್ರಾಮದ ರೈತ ಮಹಿಳೆ ಸುಜಾತ ತನ್ನ ಪತಿ ವೆಂಕಟೇಶ್, ಪುತ್ರ ಹೇಮಂತ್ ಸಹಕಾರದೊಂದಿಗೆ ಇಂದು ಹೈನುಗಾರಿಕೆಯಲ್ಲಿ ತನ್ನದೇ ವಿಶೇಷ ಸ್ಥಾನ ಪಡೆದುಕೊಂಡಿದ್ದಾರೆ.

ಹೈನುಗಾರಿಕೆಯಲ್ಲಿ ಆಧುನಿಕ ತಂತ್ರಜ್ಞಾನ ಹಾಗೂ ವೈಜ್ಞಾನಿಕ ಕ್ರಮಗಳನ್ನು ಅಳವಡಿಸಿಕೊಂಡು ಯಶಸ್ವಿಯಾಗಿದ್ದಾರೆ.

ಹೈನುಗಾರಿಕೆಯಲ್ಲಿ ದಕ್ಷಿಣ ಭಾರತದಲ್ಲೆ ಅತಿ ಹೆಚ್ಚು ಹಾಲು ಉತ್ಪಾದಿಸುವ ಸಂಘದ ಸದಸ್ಯೆ ಎಂಬ ಗೌರವಕ್ಕೂ ಇವರು ಪಾತ್ರರಾಗಿದ್ದಾರೆ.

ಅಂತರಾಳದಿಂದ..
EDITORIAL

# ಚೀನಾವನ್ನೂ ಹಿಂದಿಕ್ಕಿದ ಭಾರತದ ಆರ್ಥಿಕತೆಯ ಬೆಳವಣಿಗೆ ಐತಿಹಾಸಿಕ

ಭಾರತದ ಆರ್ಥಿಕತೆ ಚಿಕ್ಕದಾಗಿದ್ದರೂ ಸಾಗುತ್ತಿರುವ ವೇಗ ಹೆಚ್ಚಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಏಷ್ಯಾ ಮತ್ತು ಪೆಸಿಫಿಕ್ (ಎಪಿಎಸಿ) ವಿಭಾಗದ ನಿರ್ದೇಶಕ ಕೃಷ್ಣ ಶ್ರೀನಿವಾಸನ್ ಅವರು ಹೇಳಿದ್ದಾರೆ. ಭಾರತದ ಪ್ರಭಾವಶಾಲಿ ಬೆಳವಣಿಗೆಗೆ ಖಾಸಗಿ ಮತ್ತು ಸಾರ್ವಜನಿಕ ಹೂಡಿಕೆ ಕಾರಣ. ಮುಂದಿನ ದಿನಗಳಲ್ಲಿ ಭಾರತದ ಮುನ್ನಡೆಗೆ ಅಡೆತಡೆಗಳಿಲ್ಲ ಎಂದಿದ್ದಾರೆ. ಇದು ಚೀನಾವನ್ನೇ ಮೀರಿಸುತ್ತಿರುವುದು ಆಶಾದಾಯಕವಾಗಿದೆ.

ಕೋವಿಡ್- 19 ಸಾಂಕ್ರಾಮಿಕ ರೋಗ, ರಷ್ಯಾ-ಉಕ್ರೇನ್ ಯುದ್ಧ ಮತ್ತು ಗಲ್ಫ್ ಪ್ರದೇಶದಲ್ಲಿ ಇತ್ತೀಚಿನ ಉದ್ವಿಗ್ನತೆ ಸೇರಿದಂತೆ ಅನೇಕ ಆಘಾತಗಳನ್ನು ಪರಿಹರಿಸಿಕೊಂಡಿರುವ ಭಾರತದ ಸಾಮರ್ಥ್ಯದ ಬಗ್ಗೆ ಶ್ರೀನಿವಾಸನ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಭಾರತದ ಪ್ರಭಾವಶಾಲಿ ಬೆಳವಣಿಗೆಗೆ ಖಾಸಗಿ ಮತ್ತು ಸಾರ್ವಜನಿಕ ಹೂಡಿಕೆ ಕಾರಣ. ಮುಂದಿನ ದಿನಗಳಲ್ಲಿ ಭಾರತದ ಮುನ್ನಡೆಗೆ ಅಡೆತಡೆಗಳಿಲ್ಲ. ಸಮಗ್ರ ಸುಧಾರಣೆಗಳನ್ನು ಶ್ರದ್ಧೆಯಿಂದ ಜಾರಿಗೆ ತಂದರೆ ಮುಂದಿನ ಹಲವಾರು ವರ್ಷಗಳಲ್ಲಿ ಭಾರತವು 6.5% ಅಥವಾ ಅದಕ್ಕಿಂತ ಹೆಚ್ಚಿನ ಬೆಳವಣಿಗೆಯ ದರ ಸಾಧಿಸಬಹುದು ಎಂದವರು ಹೇಳಿದ್ದಾರೆ. ವಿಸ್ತರಿಸುತ್ತಿರುವ ಕಾರ್ಮಿಕ ಶಕ್ತಿಯ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಗಮನಾರ್ಹ ಸುಧಾರಣೆಗಳ ಅಗತ್ಯವನ್ನು ಪ್ರಸ್ತಾಪಿಸಿದ್ದಾರೆ. ಭಾರತವು ಯುವ, ಬೆಳೆಯುತ್ತಿರುವ ಜನಸಂಖ್ಯೆಯನ್ನು ಹೊಂದಿದೆ. ಇದು ಪ್ರತಿವರ್ಷ ಸುಮಾರು 1.5 ಕೋಟಿ ಜನರನ್ನು ಕಾರ್ಮಿಕ ಬಲಕ್ಕೆ ಸೇರಿಸಲಿದೆ. ಈ ಜನಸಂಖ್ಯಾ ಅನುಕೂಲವನ್ನು ಬಳಸಿಕೊಳ್ಳಲು ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಯಲ್ಲಿ ಗಣನೀಯ ಹೂಡಿಕೆಗಳು ನಿರ್ಣಾಯಕ ಎಂಬುದು ಅವರ ಕಾಳಜಿ. ಬೆಳೆಯುತ್ತಿರುವ ಕಾರ್ಮಿಕ ಶಕ್ತಿಯು ಆರ್ಥಿಕತೆಗೆ ನೆರವು ನೀಡಬಹುದು ಎಂಬ ಅವರ ಮಾತಿನಲ್ಲಿ ಅರ್ಥವಿದೆ.

**ಭಾರತದ ಆರ್ಥಿಕತೆ ಚೀನಾವನ್ನು ಹಿಂದಿಕ್ಕಿ ವೇಗವಾಗಿ ಬೆಳೆಯುತ್ತಿದ್ದು, ಗಾತ್ರದಲ್ಲಿ ಭಾರತದ ಆರ್ಥಿಕತೆ ಚಿಕ್ಕದಾಗಿದ್ದರೂ ಸಾಗುತ್ತಿರುವ ವೇಗ ಹೆಚ್ಚಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಏಷ್ಯಾ ಮತ್ತು ಪೆಸಿಫಿಕ್ (ಎಪಿಎಸಿ) ವಿಭಾಗದ ನಿರ್ದೇಶಕ ಕೃಷ್ಣ ಶ್ರೀನಿವಾಸನ್ ಅವರು ಹೇಳಿದ್ದಾರೆ. ಇದು ನಿರೀಕ್ಷಿತವಾಗಿದ್ದು, ಅಚ್ಚರಿಯ ಸಂಗತಿಯೇನೂ ಅಲ್ಲ. ಚೀನಾದ ಆರ್ಥಿಕತೆಯ ಗಾತ್ರ ಭಾರತಕ್ಕಿಂತ ನಾಲ್ಕು ಪಟ್ಟು ದೊಡ್ಡದಾಗಿದೆ. ಆದರೆ ಭಾರತವು ಇಂದು ಚೀನಾಕ್ಕಿಂತ ವೇಗವಾಗಿ ಬೆಳೆಯುತ್ತಿದೆ ಎಂದಿರುವ ಅವರು ಭಾರತದ ಆರ್ಥಿಕ ಕಾರ್ಯಕ್ಷಮತೆಯನ್ನು ಶ್ಲಾಘಿಸಿದ್ದು, 2024-25ರ ಹಣಕಾಸು ವರ್ಷದಲ್ಲಿ ಭಾರತದ ಯೋಜಿತ ಬೆಳವಣಿಗೆಯ ದರ 6.8% ಎಂದು ನಿರೀಕ್ಷಿಸಿದ್ದಾರೆ.**

ಕಳೆದ ವರ್ಷ ಜಾಗತಿಕ ಆರ್ಥಿಕ ಪ್ರಗತಿ ಅಷ್ಟೇನೂ ಆಶಾದಾಯಕವಾಗಿರಲಿಲ್ಲ. ರಷ್ಯಾ-ಉಕ್ರೇನ್ ಯುದ್ಧ, ಕೋವಿಡ್ ನಂತರದ ಸ್ಥಿತಿಗತಿ ಮತ್ತಿತರ ಕಾರಣಗಳಿಂದ ಅದು ಕುಸಿದಿತ್ತು. ಆದರೆ ಭಾರತ ವಿಶ್ವದ ಪ್ರಬಲ ಆರ್ಥಿಕ ಶಕ್ತಿಯಾಗಿ ಬೆಳೆಯಲಿದೆ ಎಂದು ವಿಶ್ವ ಹಣಕಾಸು ಸಂಸ್ಥೆ (ಐಎಂಎಫ್) ಹೇಳಿದಂತೆ ಭಾರತ ಬೆಳವಣಿಗೆ ಕಂಡಿತ್ತು. ಐಎಂಎಫ್ ವರದಿ ಹಾಗೂ ಆರ್ಥಿಕ ಸಮೀಕ್ಷೆಗಳು ಮುಂದಿಟ್ಟಿರುವ ದೇಶದ ಆರ್ಥಿಕ ಚಿತ್ರಣ ಭರವಸೆದಾಯಕವಾಗಿದೆ. ಕೋರೊನಾದಿಂದ ಮುಕ್ತವಾದ ಬಳಿಕ ದೇಶದ ಮಾರುಕಟ್ಟೆಯಲ್ಲಿ ಚಲನಶೀಲತೆ ಮರಳಿದೆ. ಪಟ್ಟಣ ಹಾಗೂ ಗ್ರಾಮೀಣ ಉದ್ಯೋಗ ಮಾರುಕಟ್ಟೆಯಲ್ಲಿ ಉದ್ಯೋಗಗಳು ಮರಳಿರುವುದರಿಂದ, ಗ್ರಾಹಕ ಮಾರುಕಟ್ಟೆಯಲ್ಲಿ ಗ್ರಾಹಕನಿಗೆ ವೆಚ್ಚ ಮಾಡುವ ಧೈರ್ಯವೂ ಹೆಚ್ಚಿದೆ. 2024ರಲ್ಲಿ ಭಾರತದ ಆರ್ಥಿಕತೆಯಲ್ಲಿ ಶೇಕಡಾ 7.5ರ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ ಎಂದು ವಿಶ್ವ ಬ್ಯಾಂಕ್ ಹೇಳಿದೆ. ಒಟ್ಟಾರೆಯಾಗಿ ದಕ್ಷಿಣ ಏಷ್ಯಾದ ಬೆಳವಣಿಗೆಯು 2024ರಲ್ಲಿ 6.0 ಪ್ರತಿಶತದಷ್ಟು ಪ್ರಬಲವಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಇದು ಮುಖ್ಯವಾಗಿ ಭಾರತದಲ್ಲಿನ ದೃಢವಾದ ಬೆಳವಣಿಗೆಯಿಂದ ಉಂಟಾಗಿದೆ ಎಂದು ವಿಶ್ವ ಬ್ಯಾಂಕ್ ತಿಳಿಸಿದೆ. ಇಲ್ಲಿನ ಹಣದುಬ್ಬರವನ್ನೂ ಆರ್‌ಬಿಐ ನಿಯಂತ್ರಣದಲ್ಲಿಟ್ಟಿದೆ.

ಭಾರತದ ಜನಸಂಖ್ಯೆ ಚೀನಾವನ್ನೂ ಮೀರಿಸಿ ಈಗಾಗಲೇ ಮುಂದಡಿಯಿಟ್ಟಿದೆ. ಚೀನಾದ ಜನಸಂಖ್ಯೆಯ ಹೆಚ್ಚಿನ ಪ್ರಮಾಣ 40 ವರ್ಷ ಮೀರುತ್ತಿದ್ದರೆ, ಭಾರತದ ಶೇ.50 ಮಂದಿ 30 ವರ್ಷಕ್ಕಿಂತ ಕೆಳಗಿನವರು ಹಾಗೂ ಅದೇ ಕಾರಣಕ್ಕಾಗಿ ಇವರು ಮುಂದಿನ ಮೂರು ದಶಕಗಳ ಕಾಲ ದುಡಿಯುವವರಾಗಿರುತ್ತಾರೆ. ಭಾರತದ ಫಲವತ್ತತೆ ದರವೂ ಚೀನಾಕ್ಕಿಂತ ಮುಂದಿದೆ ಹಾಗೂ ಮುಂದಿನ ದಶಕದಲ್ಲಿ ಅದು ಚೀನಾವನ್ನೂ ಅಭಿವೃದ್ಧಿಯಲ್ಲಿ ಹಿಂದಿಕ್ಕಲಿದೆ. ಇದೇ ಕಾರಣದಿಂದ ಮುಂದಿನ ದಶಕಗಳು ಭಾರತದ್ದಾಗಿದ್ದು, ಇಲ್ಲಿನ ದುಡಿಯುವ ಕೈಗಳು ಜಗತ್ತಿನ ಪಾಲಿಗೆ ಭರವಸೆಯ ಕಿರಣಗಳಾಗಿ ಹೊಮ್ಮಲಿವೆ. ಈ ಹಿಂದೆ ಎರಡು ಬಾರಿ ಜಾಗತಿಕ ಆರ್ಥಿಕ ಹಿಂಜರಿತ ಉಂಟಾದಾಗಲೂ ಭಾರತಕ್ಕೆ ಅದರ ಬಿಸಿ ತಟ್ಟಿರಲಿಲ್ಲ. ಈ ಬಾರಿ ವಿಶ್ವದ ಹಲವು ದೇಶಗಳು ಆರ್ಥಿಕ ಹಿಂಜರಿತದಿಂದ ತತ್ತರಿಸುತ್ತಿದ್ದರೂ ಭಾರತ ಯಥಾಸ್ಥಿತಿಯಲ್ಲಿದೆ ಎಂಬುದು ಮಹತ್ವದ ಅಂಶ. ಕೇಂದ್ರ ಸರ್ಕಾರದ ಹಲವಾರು ದೃಢ ಕ್ರಮಗಳು ಈ ಉನ್ನತಿಯ ಹಿಂದೆ ಇವೆ. ಕಳೆದ ಒಂದು ದಶಕದಿಂದ ದೇಶದ ವಿತ್ತ ವಲಯದಲ್ಲಿ ಮಾಡಿದ ಸುಧಾರಣೆಗಳು, ಡಿಜಿಟಲ್ ಪಾವತಿ ಹಾಗೂ ಜನಧನ್‌ನಂಥ ಉಪಕ್ರಮಗಳು, ಗ್ಯಾಸ್ ಸಬ್ಸಿಡಿ, ಉಚಿತ ವಿದ್ಯುತ್‌ನಂಥ ಯೋಜನೆಗಳು, ಸುಸ್ಥಿರ ಇಂಧನ ಬಳಕೆ, ಗಡಿಯಲ್ಲಿ ಸುಭದ್ರತೆಯ ಭರವಸೆ ಇತ್ಯಾದಿಗಳು ಎಕಾನಮಿಗೆ ಮಹತ್ವದ ಕೊಡುಗೆ ನೀಡಿವೆ ಎನ್ನಲಡ್ಡಿಯಿಲ್ಲ.




• ಹಿಂದಿನ ಸಂಚಿಕೆಯಿಂದ


ಯುದ್ಧದ ಹದಿನೈದನೆಯ ದಿನ ಕೌರವರ ಪಾಲಿಗೆ ತೀರ ನಿರಾಶಾದಾಯಕವಾಗಿ ಕೊನೆಗೊಂಡಿತು. ರಾತ್ರಿ ದುರ್ಯೋಧನಾದಿಗಳು ಒಗ್ಗೂಡಿ ಕುಳಿತು ತಮ್ಮ ದುರವಸ್ಥೆಯಿಂದ ಪಾರಾಗುವುದು ಹೇಗೆಂಬ ಬಗ್ಗೆ ಚರ್ಚಿಸುತ್ತಿದ್ದರು. ಅಶ್ವತ್ಥಾಮನು, ''ಈಗ ಸಮರ್ಥನೂ ಧೈರ್ಯಶಾಲಿಯೂ ಶೂರನೂ ನಿನ್ನನ್ನು ಕಂಡರೆ ಪ್ರೀತಿಯಿರುವವನೂ ಆದ ನಾಯಕನೊಬ್ಬನು ನಮಗೆ ಅಗತ್ಯ. ಅಂಥವನೊಬ್ಬನು ಸೇನಾಪತಿಯಾದರೆ ನಿನಗೆ ವಿಜಯವು ಖಂಡಿತ. ಇಲ್ಲಿ ಸಭೆ ಸೇರಿರುವ ಎಲ್ಲಾ ವೀರರುಗಳೂ ಈ ಗುಣಗಳನ್ನುಳ್ಳವರೇ; ನೀನು ನಿರಾಶನಾಗಬೇಕಾದದ್ದಿಲ್ಲ. ನಾವೆಲ್ಲರೂ ನಿನಗಾಗಿ ಪ್ರಾಣ ಬಿಡಲು ಸಿದ್ಧರಾಗಿದ್ದೇವೆ. ರಾಧೇಯನು ನಾಯಕನಾಗಲಿ; ಅವನನ್ನು ಯಾರೂ ಸೋಲಿಸಲಾರರು ಎನ್ನಲು ದುರ್ಯೋಧನನಿಗೆ ಪರಮಾನಂದವಾಯಿತು. ದೇಹದಲ್ಲಿ ಜೀವವಿರುವವರೆಗೆ ಮನುಷ್ಯನಿಗೆ ಆಸೆಯೆಂಬುದು ಹೋಗುವುದಿಲ್ಲ. ಭೀಷ್ಮದ್ರೋಣರ ನಂತರವೂ ದುರ್ಯೋಧನನ ಹೃದಯದಲ್ಲಿ ರಾಧೇಯನ ಸೈನ್ಯಾಧಿಪತ್ಯದಲ್ಲಾದರೂ ತನಗೆ ಜಯವಾಗಬಹುದೆಂಬ ಭರವಸೆ ಮೊಳೆಯಿತು. ಅವನು ರಾಧೇಯನನ್ನು ಪ್ರೀತಿಯಿಂದ ನೋಡುತ್ತ, ''ರಾಧೇಯ, ನೀನು ನನ್ನ ಮೇಲಿಟ್ಟಿರುವ ಪ್ರೀತಿ, ನಿನ್ನ ಯೋಗ್ಯತೆ ನನಗೆ ಚೆನ್ನಾಗಿ ಗೊತ್ತು. ಈಗ ಈ ಕಷ್ಟಕಾಲದಲ್ಲಿ ನೀನು ನಮ್ಮ ಸೈನ್ಯವನ್ನು ಮುನ್ನಡೆಸಬೇಕು. ಭೀಷ್ಮದ್ರೋಣರಿಬ್ಬರೂ ವೀರ್ಯವತ್ತಾಗಿ ನನಗೋಸ್ಕರ ಹೋರಾಡಿದರು. ಭೀಷ್ಮನಿಗೆ ಪಾಂಡವರೆಂದರೆ ಪ್ರೀತಿ. ಅವನ ನಂತರ ನಿನ್ನ ಮಾತಿನಂತೆ ದ್ರೋಣನ್ನು ಸೇನಾಪತಿಯಾಗಿ ಮಾಡಿದೆವು. ಇಬ್ಬರನ್ನೂ ನಿರಾಯುಧರಾಗಿದ್ದಾಗ, ನ್ಯಾಯವಲ್ಲದ ಮಾರ್ಗದಿಂದ ಸೋಲಿಸಲಾಯಿತು. ಅರಕ್ಷಿತರಾಗಿದ್ದವರನ್ನು ಕೊಲ್ಲಲಾಯಿತು. ಅವರಿಬ್ಬರಿಗೂ ಪಂಚಪಾಂಡವರನ್ನು ನೋಯಿಸಲು ಸ್ವಲ್ಪವೂ ಇಷ್ಟವಿರಲಿಲ್ಲ. ದ್ರೋಣನಿಗಂತೂ ಅರ್ಜುನನೆಂದರೆ ತುಂಬ ಮಮತೆ. ಆದರೆ ನೀನು ಹಾಗಲ್ಲ. ಈಗ ಸೈನ್ಯವು ಮೊದಲ ಬಾರಿಗೆ ಪಾಂಡವರನ್ನು ನನ್ನಷ್ಟೇ ದ್ವೇಷಿಸುವ ವ್ಯಕ್ತಿಯ ಕೈಗೆ ಬರಲಿದೆ. ದೇವಸೈನ್ಯವನ್ನು ಕಾರ್ತಿಕೇಯನು ನಡೆಸಿದಂತೆ ನೀನು ಈಗ ನಮ್ಮನ್ನು ಮುನ್ನಡೆಸಬೇಕು ಎಂದನು.ರಾಜನ ಮಾತನ್ನು ಕೇಳಿ ರಾಧೇಯನಿಗೆ ಬಹಳ ಸಂತೋಷವಾಯಿತು. ಕೊನೆಗೂ ದುರ್ಯೋಧನನ ಸ್ನೇಹದ ಋಣವನ್ನು ತೀರಿಸುವ ಅವಕಾಶ ಒದಗಿಬಂದಿದೆ ಎಂದುಕೊಂಡು, ''ಹಾಗೆಯೇ ಆಗಲಿ! ನಾನೂ ಸಹ ಪಾಂಡವರೊಡನೆ ಹೋರಾಡಲು, ಅರ್ಜುನನನ್ನು ಕೊಲ್ಲಲು ಕಾತುರನಾಗಿರುವೆ. ನಾಳಿನ ಯುದ್ಧದಲ್ಲಿ ಅರ್ಜುನನನ್ನು ಕೊಂದು, ಇಡೀ ಲೋಕವನ್ನೇ ನಿನ್ನ ವಶ ಮಾಡುವೆ ಎಂದನು. ಅವಭೃಥಸ್ನಾನ ಮಾಡಿಸಿ, ವಿಧಿವತ್ತಾಗಿ ರಾಧೇಯನನ್ನು ಕೌರವರ ಕಡೆಯ ಮೂರನೆಯ ಸೇನಾಪತಿಯೆಂದು ಘೋಷಿಸಲಾಯಿತು. ಕುರುಕ್ಷೇತ್ರ ಯುದ್ಧದ ಹದಿನಾರನೆಯ ದಿನ ಬೆಳಗಾಯಿತು. ಸೈನ್ಯಾಧಿಪತಿಯಾಗಿ ರಾಧೇಯನು ಪೂರ್ವದಲ್ಲಿ ಆಗತಾನೆ ಉದಯಿಸಿದ ಭಾನುವಿನಂತೆ ಕಂಗೊಳಿಸುತ್ತಿದ್ದನು. ಸೇನೆಯನ್ನು ಮಕರವ್ಯೂಹದಲ್ಲಿ ನಿಲ್ಲಿಸಿದನು. ಶಕುನಿ ಮತ್ತು ಅವನ ಮಗ ಉಲೂಕ ಅದರ ಎರಡು ಕಣ್ಣುಗಳು; ತಲೆಯೇ ಅಶ್ವತ್ಥಾಮ; ಧಾರ್ತರಾಷ್ಟ್ರರು ಅದರ ಕತ್ತು; ಉರಗಪತಾಕನಾದ ದುರ್ಯೋಧನನೇ ಅದರ ಮಧ್ಯಭಾಗ; ಎಡ ಮುಂಗಾಲಿನಲ್ಲಿ ಕೃತವರ್ಮ ಮತ್ತು ಅವನ ಸೈನ್ಯ;

ಮುಂದುವರಿಯುವುದು...

# ಪ್ರೀತಿ ಎಂಬ ಹೆಸರಿನಲ್ಲಿ ಹೆಣ್ಣಿನ ಪ್ರಾಣಹರಣ

• ಉದಯವಾಹಿನಿ, ವಿಶೇಷ

*ಹೊಂದದೆಯೆ ಜೀವಿಸಲು ಆಸೆಯನು ಹೇಳುತಲಿ*
*ಮಂದದಲಿ ನಡೆಯುತಿರೆ ಬದುಕಿನಲಿಯೆ*
*ಕಂದನದೆ ರೂಪವನು ತೋರದಲೆ ಬೆದರಿಸುತ*
*ಹೊಂಡವದು ಸರಿಯಲ್ಲ ಲಕ್ಷ್ಮಿ ದೇವಿ......*



ಸಾಮಾಜಿಕ ಕಳಕಳಿ
**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ


ಜೀವನದಲ್ಲಿ ಆಸೆಯನ್ನು ಪಡುವುದು ಸರ್ವೆ ಸಾಮಾನ್ಯ ಅಂತಹ ಬದುಕಿನಲ್ಲಿ ಹೊಂದಾಣಿಕೆಯ ಆಸೆಯು ಪ್ರೀತಿ - ಪ್ರೇಮ ಎಂಬ ಪಾಶದಲ್ಲಿ ಹೆಚ್ಚಿರುತ್ತದೆ. ಪ್ರೀತಿಯಿಂದ ನಡೆದುಕೊಂಡು ನಡೆಯುವವರು ಪ್ರೀತಿಯ ಹೆಸರಿನಲ್ಲಿ ಪ್ರಾಣದೊಂದಿಗೆ ಚೆಲ್ಲಾಟ ಆಡುವುದನ್ನು ಕಾಣುತ್ತಿದ್ದೇವೆ. ನೋಡಲು ಮಗುವಿನಂತೆ ವರ್ತಿಸುತ್ತಾ ಹೊಂಡವನ್ನು ತೋಡಿದಾಗ ಬೀಳಬೇಕೆಂಬುದು ಮೂರ್ಖತನವಲ್ಲವೇ?

ಪಶ್ಚಿಮ ಬಂಗಾಳ ನಮ್ಮ ಹತ್ತಿರವೇನು ಇಲ್ಲ? ಎಂದು ಸುಮ್ಮನಾಗಿ ಬಿಟ್ಟರು. ಈಗ ನೋಡಿ ಇಂದೀಗ ಹುಬ್ಬಳ್ಳಿಯ ನೇಹಾ ಕೊಲೆಯ ಪ್ರಕರಣ ಎಲ್ಲರಿಗೂ ಆತಂಕದ ವಿಚಾರವಾಗಿದೆ . ಮಗಳನ್ನು ಕಳೆದುಕೊಂಡಂತಹ ಕುಟುಂಬದ ರೋಧನೆಯನ್ನು ಕೇಳಲು ಆಗುತ್ತಿಲ್ಲ.ಈ ಪ್ರಕರಣಗಳು ನಮ್ಮ ಅಕ್ಕ ಪಕ್ಕದಲ್ಲಿ ಆಗುವುದರಲ್ಲಿ ಸಂಶಯವಿಲ್ಲ. ಸರಿಯಾದ ಕ್ರಮ ತೆಗೆದುಕೊಂಡು ನ್ಯಾಯಯುತವಾದಂತ ತೀರ್ಮಾನವು ಈ ಹೆಣ್ಣು ಮಗಳಿಗೆ ಸಿಕ್ಕಿಲ್ಲವೆಂದರೆ ಹೆಣ್ಣಾಗಿ ಹುಟ್ಟಿದ್ದೆ ತಪ್ಪೇನು? ಎಂಬಂತಾಗುತ್ತದೆ . ಸರ್ವೇಸಾಮಾನ್ಯವಾಗಿ ನಮ್ಮ ಹೆಣ್ಣು ಮಕ್ಕಳಿಗೆ ರಕ್ಷಣೆಯಂತೂ ಇಲ್ಲವೇ ಇಲ್ಲ. ಹೆಣ್ಣು ಎಲ್ಲಾ ರೀತಿಯ ರೂಪವನ್ನು ಒಳಗೊಂಡಂತಹ ದೇವಿ ಎನ್ನುವ ನಮ್ಮ ಸಮಾಜದಲ್ಲಿ ಎಂಥ ಕೃತ್ಯಗಳು ನಡೆಯುತ್ತಿದ್ದಾವೆಂದರೆ ಹೇಳಲು, ನೋಡಲು, ಕೇಳಲು ಆಗದಿರುವ ಪರಿಸ್ಥಿತಿಯಾಗಿದೆ. ಹೆಣ್ಣು ಸಮಾಜದ ಕಣ್ಣು ಎಂದು ಹೇಳುವ ಸಮಾಜ ಕಣ್ಣೇ ಇಲ್ಲದಂತೆ ಮಾಡಿಕೊಲ್ಲುವುದರಲ್ಲಿ ಸಂಶಯವಿಲ್ಲ. ಬಹಿರಂಗವಾಗಿ ಒಂದು ಹೆಣ್ಣು ಮಗುವನ್ನು ಕೊಲೆ ಮಾಡುತ್ತಾರೆಂದರೆ ಎಷ್ಟರಮಟ್ಟಿಗೆ ನಮ್ಮ ಸಮಾಜದಲ್ಲಿ ಸ್ತ್ರೀಗೆ ರಕ್ಷಣೆ ಇದೆ ಎಂಬುದನ್ನು ತಿಳಿಯಬಹುದಲ್ಲವೇ. ಅಂದಿನ ಕಾಲದಲ್ಲಿ ಮಾಡಿದಂತಹ ಒಂದು ನಿಯಮವೇ ಸರಿ ಇತ್ತು. ಕಣ್ಣಿಗೆ ಕಣ್ಣು, ಕೈಗೆ ಕೈ, ಕಾಲಿಗೆ ಕಾಲು ಇಂತಹ ನಿಯಮವು ಇದ್ದಾಗ ಅಹಿತಕರ ಘಟನೆಗಳು ನಡೆಯುತ್ತಿರಲಿಲ್ಲ. ಪ್ರತಿಯೊಬ್ಬರೂ ಹೆದರಿ ಕೊಂಡೆ ಜೀವನ ಮಾಡುತ್ತಿದ್ದರು. ಹೆಣ್ಣನ್ನು ಪ್ರೀತಿಸಿದ ಮಾತ್ರಕ್ಕೆ ಆಕೆ ಒಪ್ಪಬೇಕೆಂದೆನಿಲ್ಲ. ಪ್ರತಿಯೊಂದು ಬಯಕೆಯಲ್ಲಿ ಆಕೆಗೆ ಇರುವ ಸ್ವತಂತ್ರ ಜೀವನದ ಆಯ್ಕೆ. ಪ್ರೀತಿಗೆ ಒಪ್ಪಲಿಲ್ಲವೆಂದು ಹತ್ತಾರು ಬಾರಿ ಹಿರಿದುಕೊಲ್ಲುವಷ್ಟು ಕ್ರೂರ ಪಾಪಿಗಳಿದ್ದಾರೆ. ಕೋಳಿ ಕುಯ್ಯುವ ರೀತಿಯಲ್ಲಿ ಪ್ರೀತಿಗೆ ಒಪ್ಪಿಲ್ಲವೆಂದು ಬರ್ಬರವಾಗಿ ಹತ್ಯೆ ಮಾಡುತ್ತಾರೆ ಎಂದರೆ ಆತನ ಮನಸ್ಥಿತಿ ಎಷ್ಟು ವಿಕೃತವಾಗಿದೆ ಎಂಬುದನ್ನು ಯೋಚಿಸಿ. ಪ್ರೀತಿಸುವ ಮನಸ್ಥಿತಿ ಇರುವವನು ಪ್ರೀತಿಯನ್ನು ಒಪ್ಪದೆ ಇರುವ ಕಾರಣಕ್ಕೆ ಆಕೆಯನ್ನು ಹೀನಾಯವಾದ ಸಾವು ನೀಡುತ್ತಾನೆಂದರೆ ಆಕೆ ಒಪ್ಪಿದರೆ ಆಕೆಯನ್ನು ವಿವಾಹವಾಗಿ ಆಕೆಯನ್ನು ಬಾಳಿಸುತ್ತಿದ್ದನೇನು...? ಎಂದು ಯೋಚಿಸಬೇಕು. ಮಾನಕ್ಕೆ ಹೆದರಿ ಜೀವಿಸುತ್ತಿರುವ ಹೆಣ್ಣು ಮಕ್ಕಳಿಗೆ ಪ್ರಾಣಹರಣದಿಂದಲೇ ರಕ್ಷಣೆ ಏನು. ಪ್ರಾಣ ಕಳೆದುಕೊಳ್ಳುವುದೇ ಮರ್ಯಾದೆಗೆ ಸಿಕ್ಕಪಲಿತಾಂಶದ ಕೊನೆಯಾಗಬೇಕೆನು? ಪ್ರಾಣ ತೆಗೆಯುವವನಿಗೆ ಏನು ಅನಿಸದಿರಬಹುದು ಆದರೆ ಆ ಹೆಣ್ಣು ಮಗುವನ್ನು ಹೆತ್ತು ಹೊತ್ತು ಸಾಕಿದ ತಂದೆ ತಾಯಿಯ ಪರಿಸ್ಥಿತಿ ಏನಾಗಬೇಡ. ಘಟನೆಗಳಿಗೆ ಸೂಕ್ತವಾದ ಸಾಕ್ಷಿಗಳು ಇದ್ದರೂ ಸಹ ಕಾನೂನು ಸಮಯ ತೆಗೆದುಕೊಳ್ಳುವುದು ಏಕೆ ಆತನನ್ನು ಬಂಧಿಸಿದರೆ ಸಾಲದು ಅದೇ ಸಮಯಕ್ಕೆ ಆತನನ್ನು ಸಹ ಮರಣದಂಡನೆಗೆ ಏರಿಸಬೇಕು. ಆಗಲಾದರೂ ನಮ್ಮ ಸಮಾಜದಲ್ಲಿ ಹೆಣ್ಣಿಗೆ ಸ್ವಲ್ಪವಾದರೂ ರಕ್ಷಣೆ ಸಿಕ್ಕಂತಾಗುತ್ತದೆ. ಅದನ್ನು ಬಿಟ್ಟು ಕಣ್ಣು ಹೊರೆಸುವಂತಹ ನಾಟಕಗಳ ಕಾನೂನು ಎಷ್ಟು ದಿನ ಇರುತ್ತದೆಯೋ ಅಲ್ಲಿಯವರೆಗೂ ಹೆಣ್ಣು ರಕ್ಷಣೆಯಿಂದ ಇರಲು ಸಾಧ್ಯವಿಲ್ಲ. ಮಾನಕ್ಕೆ ಅಂಜಿ, ಮನೆಯವರಿಗೆ ಅಂಜಿ, ತನ್ನ ಆಸೆ ಆಕಾಂಕ್ಷಿಗಳನ್ನು ತೋರಿಸಿಕೊಳ್ಳದೆ ಬದುಕುತ್ತಿರುವ ಹೆಣ್ಣಿಗೆ ಪ್ರಾಣವನ್ನು ತೆಗೆಯುವ ಹಕ್ಕು ಯಾರಿಗೂ ಇಲ್ಲ. ಪ್ರಸ್ತುತ ದಿನಮಾನಗಳಲ್ಲಿ ಎಷ್ಟು ಘಟನೆಗಳು ನಡೆಯುತ್ತಿಲ್ಲ ಹೇಳಿ. ನಾನೇ ಕಂಡು ಕೇಳಿದಂತಹ ಅದರ ವಿರುದ್ಧ ದನಿಯೆತ್ತಿದೇನೆ. ಆದರೂ ಅದಾವುದಕ್ಕೂ ನ್ಯಾಯ ಸಮ್ಮತವಾದ ಫಲಿತಾಂಶ ಸಿಕ್ಕಿಲ್ಲ. ಬಹಿರಂಗವಾಗಿ ಕೋರ್ಟಿನಲ್ಲೇ ಸೌಮ್ಯ ಎಂಬ ಹೆಣ್ಣು ಮಗುವಿನ ಕುತ್ತಿಗೆ ಕುಯ್ದು ಗಂಡನೇ ಕೊಲೆ ಮಾಡುತ್ತಾನೆ ಎಂದರೆ ನ್ಯಾಯಾಂಗದಲ್ಲೇ ಹೆಣ್ಣಿಗೆ ರಕ್ಷಣೆ ಇಲ್ಲ. ಕೊಲೆ ಮಾಡಿದವನೇ ನೇಣು ಬಿಗಿದು ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಹೇಳುವ ಜನರಿರುವಾಗ ಹೆಣ್ಣಿಗೆ ರಕ್ಷಣೆ ಇದೆಯೇ? ರಸ್ತೆಯಲ್ಲೇ ಮಾರಣಾಂತಿಕ ಹಲ್ಲೆಯನ್ನು ಮಾಡಿ ಹೆಣ್ಣನ್ನು ಬೆತ್ತಲೆ ಗೊಳಿಸಿ ಆಕೆಯ ಮಾನಹರಣ ಮಾಡುತ್ತಾರೆ ಎಂದರೆ. ಹೆಣ್ಣಿಗೆ ರಕ್ಷಣೆ ಇದೆ ಯೇ? ಮಹಿಳಾ ಪೊಲೀಸ್ ಠಾಣೆಯಲ್ಲಿ ಹೆಂಡತಿಯ ಕುತ್ತಿಗೆ ಕೊಯ್ದ ಗಂಡ ಎದುರೇ ಇರುತ್ತಾನೆ. ಹೆಣ್ಣಿಗೆ ರಕ್ಷಣೆ ಇದೆಯೇ? ಕೋರ್ಟ್ ಮತ್ತು ಪೊಲೀಸ್ ಸ್ಟೇಷನಗಳಲ್ಲಿ ಮಾರಕಾಸ್ತ್ರಗಳನ್ನು ತರುತ್ತಾರೆ ಎಂದರೆ ಅಲ್ಲಿಯೇ ಮಾರಕಸ್ತ್ರದ ಉಪಯೋಗ ಮಾಡುತ್ತಾರೆಂದರೆ ಹೆಣ್ಣಿಗೆ ರಕ್ಷಣೆ ಇದೆಯೇ? ಹೇಳುವುದಕ್ಕೆ ರಾಮರಾಜ್ಯ ನಮ್ಮದು. ಮಾಡುತ್ತಿರುವುದು ಚಿಕ್ಕ ಬುದ್ಧಿಯ ಕೀಳರಿಮೆಯ ಕೆಲಸವನ್ನು. ಹೆಣ್ಣು ಎಲ್ಲಿಯೂ ಬಾಳಬಾರದೇನು?, ಹೆಸರು ಮಾಡಬಾರದೇನು? ತನ್ನ ಸ್ವಾತಂತ್ರದ ಜೀವನವನ್ನು ಮಾಡಬಾರದೇನು? ಹಿರಿಯರ ಮಾರ್ಗದರ್ಶನಗಳಿಲ್ಲದಂತೆ ಬೆಳೆಯುತ್ತಿರುವ ಯುವಕರಲ್ಲಿ ಸಂಸ್ಕೃತಿಯ ಕೊರತೆಯೇ ಇದಕ್ಕೆಲ್ಲ ಕಾರಣವಾಗಿರಬಹುದು. ಏನೇ ಆಗಲಿ ಸಾಕ್ಷಿ ಸಮೇತ ಸಿಕ್ಕಂತಹ ಅಪರಾಧಿಯನ್ನು ಗಲ್ಲಿಗೇರಿಸಿ ಪ್ರಚಾರವನ್ನು ನೀಡಿ. ಇಂತಹ ಘಟನೆಗಳು ನಡೆಯುವುದು ಕಡಿಮೆಯಾಗುತ್ತದೆ. ಹೆಣ್ಣು ಮಗುವಾಯಿತೆಂದು ಅಳುವ ತಾಯಿ. ಇಂತಹ ಮುಂದಿನ ದಿನಗಳನ್ನು ಯೋಚಿಸಿ ಅಳುತ್ತಾಳೆ ಹೊರತು. ಹೆಣ್ಣು ಮಗುವಾಯಿತು ಎಂದು ಅಳುವುದಿಲ್ಲ. ಹೆಣ್ಣು ಮಗುವನ್ನು ಪ್ರೀತಿ ಪ್ರೇಮದಲ್ಲಿ ಸಾಕುವುದು ಆಕೆಯನ್ನು ಮದುವೆ ಮಾಡಿ ಕೊಡುವುದು ಹಿಂಸೆಯನ್ನು ಅನುಭವಿಸಲಿ ಎಂದಲ್ಲ ಆಕೆ ಒಂದು ಸುರಕ್ಷಿತವಾದ ಒಳ್ಳೆಯ ಜೀವನವನ್ನು ಮಾಡುವಂತಾಗಲಿ ಎಂದು. ಏಕೆ ಹೀಗೆ ಆಗುತ್ತಿರುವುದು. ಪ್ರತಿಯೊಬ್ಬರ ಮನದಲ್ಲೂ ಒಂದೊಂದು ಪ್ರಶ್ನೆಯನ್ನು ಹಾಕಿಕೊಳ್ಳಿ ನೋಡೋಣ. ಇಂದು ಯಾರದೋ ಮಗುವಿಗೆ ಆದಂತಹ ಪರಿಸ್ಥಿತಿ ನಾಳೆ ನಮ್ಮ ಮಕ್ಕಳಿಗೂ ಆಗಬಹುದಲ್ಲವೇ? ಕಾನೂನಿನಲ್ಲಿ ರಕ್ಷಣೆ ಎಂಬುದು ಸಿಕ್ಕರೆ ಸಾಲದು ಪ್ರತಿಯೊಬ್ಬರೂ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಜಾಗೃತರಾಗಬೇಕಿದೆ. ಯಾರದೋ ಮನೆಯ ಹೆಣ್ಣು ಮಗುವಿಗೆ ಅನ್ಯಾಯ ಆಗುತ್ತಿದೆ ಎಂದರೆ ಅಲ್ಲಿ ರಾಜಕೀಯ ಬೇಡ, ಜಾತೀಯತೆ ಬೇಡ, ಧರ್ಮ ಭೇದ ಬೇಡ. ನಮಗೆ ನ್ಯಾಯ ಸಿಗಬೇಕು ಎಂದರೆ ಪ್ರತಿಯೊಬ್ಬರೂ ಒಂದಾಗಬೇಕು. ಆಗ ಮಾತ್ರ ನಮಗೆ ನ್ಯಾಯ ಸಿಗುತ್ತದೆ. ಅತ್ಯಾಚಾರ,ಕೊಲೆಯಂತಹ ಪೈಶಾಚಿಕಾ ಕೃತ್ಯಗಳು ಕಡಿಮೆಯಾಗಬೇಕು. ಜೈ ಹಿಂದ್ ಜೈ ಕರ್ನಾಟಕ ಮಾತೆ.



**ಇತ್ತೀಚೆಗೆ ನಡೆದ ಹುಬ್ಬಳ್ಳಿಯ ಬಿ. ವಿ. ಬಿ ಕಾಲೇಜಿನ ವಿದ್ಯಾರ್ಥಿನಿ ನೇಹಾ ಹಿರೇಮಠ ರವರ ಕೊಲೆ ಪ್ರಕರಣ ಎಲ್ಲರಿಗೂ ತಿಳಿಯುದೆ. ಈ ಹೆಣ್ಣು ಮಗಳು ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆ ಕಾರ್ಪೊರೇಟರ್ ನಿರಂಜನ ಹಿರೇಮಠ ಅವರ ಮಗಳು. ನಮ್ಮಲ್ಲೂ ಜಿಹಾದಿನ ಕೃತ್ಯಗಳು ನಡೆಯುತ್ತಿರುವುದು ಜನರಲ್ಲಿ ಆತಂಕವನ್ನು ಉಂಟು ಮಾಡಿದೆ. ಕಾಶ್ಮೀರದ ಕಥೆ ಸುಳ್ಳೆಂದು ಹೇಳಿದರು. ಅಷ್ಟೇ ಅಲ್ಲ ಕೇರಳದಲ್ಲಿ ನಡೆದ ಘಟನೆ ಕಟ್ಟುಕಥೆ ಎಂದು ಹೇಳಿದರು.**

# ಜ್ಞಾನ ಜಗಜ್ಯೋತಿ, ಅಹಿಂಸಾ ಕರುಣಾಮೂರ್ತಿ ಭಗವಾನ್ ವರ್ಧಮಾನ ಮಹಾವೀರರ ಜನ್ಮ ಜಯಂತಿ



• ಉದಯವಾಹಿನಿ, ವಿಶೇಷ



ಕಲಾ ಸಾಹಿತ್ಯ
**ಕೃಷ್ಣಪ್ಪ**
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ
ವಿಮರ್ಶಕರು

ವಿಶ್ವದ ಪ್ರಮುಖ ಮತಗಳಲ್ಲಿ ಜೈನ ಮತವೂ ಒಂದಾಗಿದೆ. ಜೈನ ಧರ್ಮದ ಪರಂಪರೆಯಲ್ಲಿ 24 ಜನ ತೀರ್ಥಂಕರರು ಪರಮ ಪೂಜ್ಯನೀಯರಾಗಿದ್ದಾರೆ. ಅವರಲ್ಲಿ ಕೊನೆಯವರು ಭಗವಾನ್ ಮಹಾವೀರರು. ಕ್ರಿ. ಪೂ. 597 ರಲ್ಲಿ ಬಿಹಾರ್ ರಾಜ್ಯದ ವೈಶಾಲಿಯಲ್ಲಿ ಮಹಾವೀರರು ಜನಿಸಿದರು.ತಂದೆ ಸಿದ್ಧಾರ್ಥ,ತಾಯಿ ತ್ರಿಶಾಲಾ ಇವರದು ರಾಜಕುಟುಂಬ. ಬಾಲ್ಯದಲ್ಲಿಯೇ ವರ್ಧಮಾನ ತನ್ನ ಶಕ್ತಿ ಸಾಮರ್ಥ್ಯಗಳಿಂದ ಮಹಾವೀರನಾಗಿ ತೀಕ್ಷ್ಣಬುದ್ಧಿಯ ಬಾಲಕನಾಗಿದ್ದನು. ಗುರುಗಳು ಅವರನ್ನು ಸನ್ಮತಿ ಎಂದು ಕರೆಯುತ್ತಿದ್ದರು. ತರ್ಕ, ವ್ಯಾಕರಣ ಮೊದಲಾದ ಶಾಸ್ತ್ರವಿದ್ಯೆಗಳಲ್ಲಿ ಅದ್ಭುತ ಪ್ರೌಢಿಮೆಯನ್ನು ಸಾಧಿಸಿದರು. ವರ್ಧಮಾನ ರಾಜಕುಮಾರನಾಗಿ ಸಕಲ ಭೋಗಭಾಗ್ಯಗಳನ್ನು ಪಡೆದಿದ್ದರೂ ಲೋಕ ಜೀವನದಲ್ಲಿರುವ ಅಪಾರ ನೋವನ್ನು ಕಂಡು ಅವನ ಅಂತಃಕರಣ ಕಲಕಿ ಹೋಗಿತ್ತು.

ಹುಟ್ಟು ಸಾವಿನ ರಹಸ್ಯವನ್ನು ಕುರಿತು ಅವನ ಮನಸ್ಸು ಯೋಚಿಸುತ್ತಿತ್ತು. ಮಾನವನ ದುಃಖಕ್ಕೆ ಕಾರಣವಾದ ಆಸೆ, ಆಕರ್ಷಣೆಗಳು, ಅಜ್ಞಾನ, ಅಂಧಾನುಕರಣೆ ಇವುಗಳ ಬಗ್ಗೆಯೂ ಅವನು ಚಿಂತಿಸಿದನು.

ಮನಸ್ಸಿನ ಅಂತರಾಳದಲ್ಲಿ ವೈರಾಗ್ಯ ಭಾವ ವಿಧಿಸಿತ್ತು. ಆದರೂ ತಾಯಿಯ ವಾತ್ಸಲ್ಯಕ್ಕೆ ಮಣಿದು ರಾಜಕುಮಾರಿ ಯಶೋಧರೆರೊಂದಿಗೆ ವಿವಾಹವಾಯಿತು.ನಂತರ ಪ್ರಿಯದರ್ಶನಿ ಎಂಬ ಹೆಣ್ಣು ಮಗು ಜನಿಸಿತು. ಕಾಮ ಕ್ರೋಧಾದಿಗಳನ್ನು ಗೆದ್ದು ಸಮ್ಯಕ್ ಜ್ಞಾನ ಸಂಪಾದನೆಗೆ ಅವರ ಮನಸ್ಸು ಹಾತೊರೆಯುತ್ತಿತ್ತು. ಕ್ರಮೇಣ ಅವರ ಮನದಲ್ಲಿ ಲೋಕಕಲ್ಯಾಣದ ಭಾವನೆ ತೀವ್ರವಾಯಿತು. ಪ್ರಾಪಂಚಿಕವಾದ ಮಮಕಾರಗಳನ್ನು ತೊರೆದು ದೇಹದ ಸಕಲ ಭೋಗ ಭಾಗ್ಯಗಳನ್ನು ತ್ಯಜಿಸಿ ತಪಸ್ಸಿಗೆ ತೆರಳುವ ನಿರ್ಧಾರ ಮಾಡಿದರು.

ಸುಮಾರು 12 ವರ್ಷಗಳ ಕಾಲ ಕಠಿಣ ತಪಸ್ಸುಗಳನ್ನು ಮಾಡಿ ಮಹಾಯೋಗಿಯಾದರು. ಮಹಾವೀರರು ಲೋಕಕ್ಕೆ ನೀಡಿದ ಉಪದೇಶಗಳನ್ನು ತಿಳಿಯುವುದಾದರೆ, ತಮ್ಮ ಕರ್ಮದ ಫಲವನ್ನು ಅನುಭವಿಸಲೇಬೇಕು. ತನ್ನ ಏಳಿಗೆ ಮತ್ತು ಅವನತಿ ಎಲ್ಲಕ್ಕೂ ಅವನೇ ಕಾರಣ, ಮನುಷ್ಯ ತನ್ನ ಆತ್ಮವಿಶ್ವಾಸದಿಂದ ಸ್ವಾವಲಂಬಿಯಾಗಿ ತನ್ನ ಉನ್ನತಿಯನ್ನು ಸಾಧಿಸಬೇಕು. ಆ ಸಾಧನೆಯ ಮಾರ್ಗದಲ್ಲಿ ಸತ್ಯ, ಧರ್ಮ, ಅಹಿಂಸೆ, ಪ್ರಾಮಾಣಿಕತೆ,ನಿಸ್ವಾರ್ಥ ಇವುಗಳೇ ವ್ರತಗಳು ಆಗಿರಬೇಕು. ಮನುಷ್ಯನ ಆಸೆಗೆ ಅಂತ್ಯವಿಲ್ಲ. ಅದು ಆಕಾಶದಷ್ಟು ಅನಂತವಾದದ್ದು. ಆದರೆ ಮಾನವ ತನ್ನ ಇಂದ್ರಿಯಗಳನ್ನು ತನ್ನ ಅಧೀನದಲ್ಲಿರಿಸಿಕೊಂಡು ಸಂಯಮದಿಂದ ಆಸೆ ಆಮಿಷಗಳಿಗೆ ಬಲಿಯಾಗದೇ ಶುದ್ಧ ಬಾಳ್ವೆ ನಡೆಸಬೇಕು. ಮಹಾವೀರರ ಮುಖ್ಯ ಜೀವನ ಸೂತ್ರಗಳಲ್ಲಿ ಅಹಿಂಸೆಗೆ ಪ್ರಮುಖ ಸ್ಥಾನ ದೊರೆತಿದೆ. ಲೋಕದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಅವನವನ ಜೀವನ ಪ್ರಿಯವಾಗಿದೆ. ಎಲ್ಲರೂ ಬದುಕಿನಲ್ಲಿ ನೆಮ್ಮದಿಗಳನ್ನು ಬಯಸುತ್ತಾರೆ. ಎಲ್ಲರಿಗೂ ಜೀವನದ ಬಗ್ಗೆ ಪ್ರೀತಿ ಇದೆ. ಇತರರ ಸುಖದುಃಖಗಳನ್ನು ಅರಿತುಕೊಳ್ಳಬೇಕು. ಅವರ ನೋವು-ನಲಿವುಗಳಲ್ಲಿ ಭಾಗಿಗಳಾಗಬೇಕು.

ತಮಗೆ ದುಃಖ ಉಂಟುಮಾಡುವ ಮಾತು, ಕ್ರಿಯೆ, ವಿಚಾರಗಳು ಇತರರಿಗೂ ದುಃಖದಾಯಕವಾದದ್ದು ತಮಗೆ ಸುಖಕರ ವಾದದ್ದು ಇತರರಿಗೂ ಸುಖ ನೀಡುತ್ತದೆ ಎಂಬ ಈ ಪರಸ್ಪರ ತಿಳುವಳಿಕೆಯೇ ಅಹಿಂಸೆಯ ಅಡಿಪಾಯ. ಇಂದು ವರ್ಧಮಾನ ಮಹಾವೀರರ ಜನ್ಮ ಜಯಂತಿಯನ್ನು ಭಾರತೀಯರಾದ ನಾವುಗಳು ಹಾಗೂ ಜಗತ್ತಿನ ಎಲ್ಲಾ ಮಾನವ ಜನಾಂಗದವರು ಇಂತಹ ಅಹಿಂಸಾ ಕರುಣಾಮೂರ್ತಿಯನ್ನು ಸ್ಮರಿಸಿ ನೆನೆಯುತ್ತಾ ಶ್ರದ್ಧಾಭಕ್ತಿಯಿಂದ ಆಚರಿಸುವುದರಲ್ಲಿ ಅರ್ಥವಿದೆಯೆಂದು ತಿಳಿದು ಆಚರಿಸುತ್ತಾ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕಲೆಂದು ಆ ಭಗವಂತನಲ್ಲಿ ಪ್ರಾರ್ಥಿಸೋಣ.

# ಬೆಂ.ಗ್ರಾ. ಕ್ಷೇತ್ರವನ್ನು ಅತಿ ಸೂಕ್ಷ್ಮ ಲೋ.ಸ. ಕ್ಷೇತ್ರವೆಂದು ಘೋಷಣೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಗ್ರಾಮಾಂತರ ಕ್ಷೇತ್ರ-23 ಅನ್ನು ಅತಿ ಸೂಕ್ಷ್ಮ ಲೋಕಸಭಾ ಕ್ಷೇತ್ರವನ್ನಾಗಿ ಪರಿಗಣಿಸಿ, ಅರೆಸೇನಾ ಪಡೆಯನ್ನು ನಿಯೋಜಿಸುವಂತೆ ಚುನಾವಣಾ ಆಯೋಗ ಆದೇಶಿಸಿದೆ. ಇಂದು ಈ ಕುರಿತು ರಾಮನಗರ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಚುನಾವಣಾ ಆಯೋಗದಿಂದ ಪತ್ರವನ್ನು ಬರೆಯಲಾಗಿದೆ. ಅದರಲ್ಲಿ ಭಾರತ ಚುನಾವಣಾ ಆಯೋಗವು ಶ್ರೀ ಪದ್ಮನಾಭ ಜಿ.ವಿ., ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಬಿ.ಜೆ.ಪಿ ಪಕ್ಷದ ಅಭ್ಯರ್ಥಿಯ ಚುನಾವಣಾ ಏಜೆಂಟ್ ಇವರು ತಮ್ಮ ಇ-ಮೇಲ್ ದಿನಾಂಕ: 16.04.2024ರಲ್ಲಿ ಭಾರತ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ದೂರಿನಲ್ಲಿ ಬೆಂಗಳೂರು ಗ್ರಾಮಾಂತರ-23 ಲೋಕಸಭಾ ಕ್ಷೇತ್ರದಲ್ಲಿ ಪುಬಲ ಅಭ್ಯರ್ಥಿಗಳು ಸ್ಪರ್ಧಿಸಿದ್ದು, ಆಡಳಿತ ಯಂತ್ರವನ್ನು ದುರುಪಯೋಗ ಪಡೆಸಿಕೊಳ್ಳುವ ಸಾಧ್ಯತೆಗಳಿದ್ದು, ಈ ಕಾರಣಳಿಂದ ಸದರಿ ಕ್ಷೇತ್ರಕ್ಕೆ ಹೆಚ್ಚುವರಿ ಪೊಲೀಸ್ ಪಡೆಯನ್ನು ಹಾಗೂ ಅರೆ ಸೇನಾಪಡೆಯನ್ನು ನಿಯೋಜಿಸಿ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸಲು ನೆರವಾಗುವಂತೆ ಕೋರಿರುತ್ತಾರೆ. ಸದರಿ ಮನವಿ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ ಭಾರತ ಚುನಾವಣಾ ಆಯೋಗವು ಈ ಕಛೇರಿಗೆ ಸದರಿ ದೂರು ಅರ್ಜಿಯನ್ನು ವರ್ಗಾಯಿಸಲಾಗಿರುತ್ತದೆ ಎಂದಿದೆ.



**ಈ ಕುರಿತು ಪರಿಶೀಲಿಸಲಾಗಿ, ಇದೇ ವಿಷಯಕ್ಕೆ ಸಂಬಂಧಿಸಿದಂತೆ ಭಾರತೀಯ ಜನತಾ ಪಕ್ಷವು ಪತ್ರ ದಿನಾಂಕ: 10.04.2024ರಲ್ಲಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವನ್ನು ಅತಿ ಸೂಕ್ಷ್ಮ ಲೋಕಸಭಾ ಕ್ಷೇತ್ರವನ್ನಾಗಿ ಪರಿಗಣಿಸಿ, ಕ್ಷೇತ್ರದಲ್ಲಿ ಅರೆಸೇನಾ ಪಡೆಯನ್ನು ನಿಯೋಜಿಸುವಂತೆ ಕೋರಲಾಗಿತ್ತು. ಅದರಂತೆ ಉಲ್ಲೇಖ(2)ರಲ್ಲಿ ಈ ಕುರಿತು ನಿಯಮಾನಸಾರ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ತಮಗೆ ತಿಳಿಸಲಾಗಿತ್ತು. ಮುಂದುವರೆದು, ಭಾರತ ಚುನಾವಣಾ ಆಯೋಗದ ಉಲ್ಲೇಖ(1)ರ ಪತ್ರವನ್ನು ಇದರೊಂದಿಗೆ ಲಗತ್ತಿಸಿ ಈ ಕುರಿತು ನಿಯಮಾನಸಾರ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದಾರೆ.**

# ಟಿ20 ವಿಶ್ವಕಪ್‌ನಲ್ಲಿ ಕನ್ನಡಿಗರ ನಂದಿನಿ ಪ್ರಾಯೋಜಕತ್ವ

## ■ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ. ಜಗದೀಶ್ ಈ ವಿಷಯವನ್ನು ದೃಢ, ಎರಡು ತಂಡಗಳು ಜಾಹೀರಾತು

• ಉದಯವಾಹಿನಿ, ಬೆಂಗಳೂರು

ನಂದಿನಿ ಬ್ರಾಂಡ್‌ನಲ್ಲಿ ತನ್ನ ಡೈರಿ ಉತ್ಪನ್ನಗಳನ್ನು ಮಾರಾಟ ಮಾಡುವ ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್), ಟಿ20 ಕ್ರಿಕೆಟ್ ವಿಶ್ವಕಪ್‌ಗಾಗಿ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ತಂಡಗಳನ್ನು ಪ್ರಾಯೋಜಿಸುತ್ತಿದೆ ಈ ಬಗ್ಗೆ 'ಮನಿಕಂಟ್ರೋಲ್' ವಿಶೇಷ ವರದಿ ಮಾಡಿದೆ.

ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ. ಜಗದೀಶ್ ಈ ವಿಷಯವನ್ನು ದೃಢಪಡಿಸಿದ್ದಾರೆ. ನಾವು ಏಪ್ರಿಲ್ 20 ರಂದು ಖಳಿಫಾ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್‌ಗೆ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ಎರಡು ತಂಡಗಳನ್ನು ಪ್ರಾಯೋಜಿಸಲು ವರ್ಕ್ ಆರ್ಡರ್ ಆದೇಶವನ್ನು ನೀಡಿದ್ದೇವೆ. ನಂದಿನಿ ಲೋಗೋ ಲೀಡ್ ಆರ್ಮ್ ಜರ್ಸಿಯಲ್ಲಿ ಬರುತ್ತದೆ (ಅಂದರೆ, ಎಡಗೈ ಬ್ಯಾಟ್ಸ್‌ಮನ್‌ಗಳಿಗೆ ಬಲಗೈ ಮತ್ತು ಬಲಗೈ ಬ್ಯಾಟರ್‌ಗಳಿಗೆ ಎಡಗೈ ಮೇಲೆ) ಎಂದು ತಿಳಿಸಿದ್ದಾರೆ. ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ಎರಡು ತಂಡಗಳು ನಮ್ಮ ಜಾಹೀರಾತುಗಳು, ಸಾಮಾಜಿಕ ಮಾಧ್ಯಮ ಪ್ರಚಾರಗಳು, ಫೋಟೋ ಶೂಟ್‌ಗಳು ಮತ್ತು ನಮ್ಮ ಉತ್ಪನ್ನಗಳನ್ನು ಅನುಮೋದಿಸುವುದರಲ್ಲಿ ತೊಡಗಿಸಿಕೊಳ್ಳುತ್ತವೆ. ಇದನ್ನು ನಾವು ಪಂದ್ಯಾವಳಿಯ ಸಮಯದಲ್ಲಿ ಪ್ರಸಾರ ಮಾಡುತ್ತೇವೆ. ಇದು ಕರ್ನಾಟಕದ ಪ್ರತಿಯೊಬ್ಬರಿಗೂ ಹೆಮ್ಮೆಯ ಕ್ಷಣವಾಗಲಿದೆ ಎಂದು ಎಂ.ಕೆ. ಜಗದೀಶ್ ಮಾಹಿತಿ ನೀಡಿದ್ದಾರೆ. ಮಧ್ಯಪ್ರಾಚ್ಯ, ಸಿಂಗಾಪುರ, ಭೂತಾನ್ ಮತ್ತು ಮ್ಯಾನ್ಮಾರ್ ಸೇರಿದಂತೆ ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕೆಎಂಎಫ್ ಅಸ್ತಿತ್ವವನ್ನು ಹೊಂದಿದೆ. ಕೆಲವು ಫ್ರೋಜನ್ ಸಿಹಿತಿಂಡಿಗಳು ಯುಎಸ್‌ಗೆ ತಲುಪಲು ಸಹಾಯ ಮಾಡಿಕೊಡುತ್ತವೆ ಎಂದು ಜಗದೀಶ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಟಿ20 ಕ್ರಿಕೆಟ್ ವಿಶ್ವಕಪ್ 2024 ಜೂನ್ 1 ರಿಂದ 29 ರವರೆಗೆ ವೆಸ್ಟ್ ಇಂಡೀಸ್ ಮತ್ತು ಯುನೈಟೆಡ್ ಸ್ಟೇಟ್ಸ್‌ನಲ್ಲಿ ನಡೆಯಲಿದೆ. ಈ ವರ್ಷದ ಟ್ವೆಂಟಿ-20 ಕ್ರಿಕೆಟ್ ಚಾಂಪಿಯನ್‌ಶಿಪ್‌ನಲ್ಲಿ 20 ತಂಡಗಳು ಭಾಗವಹಿಸಲಿವೆ.

ವಿಶ್ವಕಪ್ ಪಂದ್ಯಾವಳಿಯ ಸಮಯದಲ್ಲಿ ಅಮೆರಿಕದಲ್ಲಿ ಎನರ್ಜಿ ಡ್ರಿಂಕ್ ನಂದಿನಿ ಸ್ಪ್ಲಾಶ್ ಅನ್ನು ಬಿಡುಗಡೆ ಮಾಡಲು ಯೋಜಿಸಲಾಗಿದೆ ಎಂದು ಕೆಎಫ್ಎಂ ಎಂಡಿ ತಿಳಿಸಿದ್ದಾರೆ. ನಾವು ನಂದಿನಿ ಸ್ಪ್ಲಾಶ್, ಮಾವು, ಇಕಿತ್ತಳೆ, ಲಿಚಿ ಮತ್ತು ನಿಂಬೆಯಂತಹ ವಿಭಿನ್ನ ಸುವಾಸನೆಗಳೊಂದಿಗೆ ಮೊದಲ ಬಾರಿಗೆ ಹಾಲೊಡಕು ಆಧಾರಿತ ಎನರ್ಜಿ ಡ್ರಿಂಕ್ ಅನ್ನು ಪ್ರಾರಂಭಿಸಲು ಬಯಸುತ್ತಿದ್ದೇವೆ. ಯುಎಸ್‌ನಲ್ಲಿ ದೊಡ್ಡ ಮಾರಾಟ ಮಾಡಲು ಬಯಸುತ್ತಿದ್ದು, ಅದರ ಬಗ್ಗೆ ಹೆಚ್ಚು ಗಮನಹರಿಸುತ್ತಿದ್ದೇವೆ. ಆ ಉತ್ಪನ್ನವು ಈವೆಂಟ್‌ಗೆ ಸರಿಹೊಂದುತ್ತದೆ ಎಂದಿದ್ದಾರೆ.

☛ ಉದಯವಾಹಿನಿ ಚಿತ್ರ




**❝ ನಾವು ಯುಎಇಯಲ್ಲಿ ಇನ್ನೂ ಎರಡು ನಂದಿನಿ ಪಾರ್ಲರ್‌ಗಳನ್ನು ತೆರೆಯುತ್ತಿದ್ದೇವೆ. ಅಬುಧಾಬಿ ಮತ್ತು ಶಾರ್ಜಾದಲ್ಲಿ. ದೇಶದಲ್ಲಿ ಲೋಕಸಭೆ ಚುನಾವಣೆ ಮುಗಿದ ಕೆಲವೇ ದಿನಗಳಲ್ಲಿ ಈ ಪಾರ್ಲರ್‌ಗಳು ಉದ್ಘಾಟನೆಗೊಳ್ಳಲಿದೆ. ಪ್ರಸ್ತುತ, ದುಬೈನಲ್ಲಿ ನಾವು ಒಂದು ನಂದಿನಿ ಪಾರ್ಲರ್ ಅನ್ನು ಹೊಂದಿದ್ದೇವೆ ಎಂದು ತಿಳಿಸಿದ್ದಾರೆ.**

### ಪ್ರತಿದಿನ 8.4 ಮಿಲಿಯನ್ ಲೀಟರ್ ಹಾಲನ್ನು ಸಂಗ್ರಹ

**ಕೆಎಂಎಫ್ 14 ಒಕ್ಕೂಟಗಳು, 24 ಲಕ್ಷ ಹಾಲು ಉತ್ಪಾದಕ ಸದಸ್ಯರು, 22,000 ಹಳ್ಳಿಗಳಲ್ಲಿ 14,000 ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಒಳಗೊಂಡಿದೆ. ಪ್ರತಿದಿನ 8.4 ಮಿಲಿಯನ್ ಲೀಟರ್ ಹಾಲನ್ನು ಸಂಗ್ರಹಿಸುತ್ತದೆ. ಇದು 65 ಕ್ಕೂ ಹೆಚ್ಚು ಹಾಲು ಮತ್ತು ಡೈರಿ ಸಂಬಂಧಿತ ಉತ್ಪನ್ನಗಳನ್ನು ತಯಾರಿಸುತ್ತದೆ. ಹೆಚ್ಚುವರಿಯಾಗಿ, ಇದು ಸಶಸ್ತ್ರ ಪಡೆಗಳಿಗೆ ಉತ್ಪನ್ನಗಳನ್ನು ಪೂರೈಸುತ್ತದೆ ಮತ್ತು ಹಾಲನ್ನು ರಫ್ತು ಮಾಡುತ್ತದೆ. 2021-22ರಲ್ಲಿ ಕೆಎಂಎಫ್ ಸುಮಾರು 19,800 ಕೋಟಿ ರೂ.ಗಳ ವಹಿವಾಟು ನಡೆಸಿದೆ.**

# ಒಂದು ತಿಂಗಳಿಂದ ಆಸ್ಪತ್ರೆಗೆ ಅಲೆದಾಡುವುದೇ ನಿತ್ಯದ ಕೆಲಸ

## ಚಿಕಿತ್ಸೆ ಕೊಡಿಸಿದರೂ ಕೆಮ್ಮು, ಕಫ ಕಡಿಮೆ ಆಗುತ್ತಿಲ್ಲ. ದೂಳಿನ ಹಾವಳಿಗೆ ಜೀವನವೇ ಸಾಕಾಗಿ ಹೋಗಿದೆ

• ಉದಯವಾಹಿನಿ, ಕೊಪ್ಪಳ


ಉದಯವಾಹಿನಿ ಚಿತ್ರ

ಬೂದಿ ಹಾರುತಿದೆ ಜೀವ ಹಿಂಡುತಿದೆ

ಮಗನ ಸಲುವಾಗಿ ಒಂದು ತಿಂಗಳಿಂದ ಆಸ್ಪತ್ರೆಗೆ ಅಲೆದಾಡುವುದೇ ನಿತ್ಯದ ಕೆಲಸವಾಗಿದೆ. ಚಿಕಿತ್ಸೆ ಕೊಡಿಸಿದರೂ ಕೆಮ್ಮು, ಕಫ ಕಡಿಮೆ ಆಗುತ್ತಿಲ್ಲ. ದೂಳಿನ ಹಾವಳಿಗೆ ಜೀವನವೇ ಸಾಕಾಗಿ ಹೋಗಿದೆ. ಬೀಗರು ಕೂಡ ಊರಿಗೆ ಬರಲು ಹಿಂದೇಟು ಹಾಕುತ್ತಿದ್ದಾರೆ. ದೂರದಲ್ಲಿರುವ ಅಲ್ಲಾನಗರ ಗ್ರಾಮದಲ್ಲಿ 12 ವರ್ಷಗಳಿಂದ ವಾಸವಾಗಿರುವ ಸಾವಿತ್ರಿ ಚಂದಪ್ಪ ಚವ್ಹಾಣ್ ಅವರ ನೋವಿನ ಮಾತುಗಳು ಇವು. ಇವರ ಮನೆಯ ಸುತ್ತಲೂ ಯಥೇಚ್ಛವಾಗಿ ಕಪ್ಪು ದೂಳು ಉಗುಳುವ ಕಾರ್ಖಾನೆಗಳಿವೆ.

ಉಪಜೀವನಕ್ಕೆಂದು ಮನೆಯ ಮುಂಭಾಗದಲ್ಲಿ ಅವರು ಸಣ್ಣ ಅಂಗಡಿ ನಡೆಸುತ್ತಿದ್ದು, ಮಕ್ಕಳಿಗಾಗಿ ಚಾಕೋಲೆಟ್, ಚಕ್ಕಲಿ, ಬಿಸ್ಕತ್ ಹೀಗೆ ಹಲವು ತಿನಿಸು ಮಾರಾಟ ಮಾಡುತ್ತಾರೆ. ಡಬ್ಬಿಯೊಳಗಿಂದ ಗ್ರಾಹಕರಿಗೆ ತಿನಿಸು ತೆಗೆದು ಕೊಡುವಾಗಲೆಲ್ಲ ಅವರ ಕೈಗೆ ಕಪ್ಪು ದೂಳು ಅಡರುತ್ತದೆ. ಸಾಮಗ್ರಿಗಳನ್ನು ಹಾಕಿಟ್ಟ ಪ್ಲಾಸ್ಟಿಕ್ ಡಬ್ಬಿಗಳು, ಚೀಲಗಳು, ತಂಪು ಪಾನೀಯ ಇಟ್ಟಿರುವ ಫ್ರಿಡ್ಜ್ ಎಲ್ಲವೂ ಕಪ್ಪೇ ಕಪ್ಪು. ನಿತ್ಯವೂ ದೂಳಾದರೆ ಬದುಕು ಹೇಗೆ ಸಾಗಿಸುತ್ತೀರಿ' ಎಂದು ಮಾತಿಗೆಳೆದಾಗ, 'ಇದೇ ನಮ್ಮ ಬದುಕು. ಅದಕ್ಕಾಗಿಯೇ ಈ ಭಾಗದ ಜನ ಮೇಲಿಂದ ಮೇಲೆ ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ನಮ್ಮ ದುಡಿಮೆಯ ಬಹುಪಾಲು ಹಣ ಆಸ್ಪತ್ರೆಗೆ ಖರ್ಚಾಗುತ್ತಿದೆ. ಹೆಣ್ಣು ಕೊಡಲು ಮೀನಮೇಷ ಎಣಿಸುತ್ತಾರೆ' ಎಂದರಲ್ಲದೇ ಕಂಕುಳಲ್ಲಿ ಹೊತ್ತುಕೊಂಡಿದ್ದ ತಮ್ಮ ಒಂಬತ್ತು ತಿಂಗಳ ಮಗನ ಕೈ ತೋರಿಸಿದರು. ಮಗನಿಗೆ ಚಿಕಿತ್ಸೆಗೆಂದು ಕೈಗೆ ಹಾಕಲಾಗಿದ್ದ ಬ್ಯಾಂಡೇಜ್ ಹಾಗೆಯೇ ಇತ್ತು. ಈ ಗ್ರಾಮದಿಂದ ನಾಲ್ಕೈದು ಕಿ.ಮೀ. ದೂರದಲ್ಲಿರುವ ಹಿರೇಬಗನಾಳ ಗ್ರಾಮದ ಜನರ ಬವಣೆ ಮತ್ತಷ್ಟು ದುರಂತಮಯ.

### ಆದೇಶ ಮಾಡಿದರೂ ಕಾರ್ಯರೂಪಕ್ಕೆ ಬಂದಿಲ್ಲ

**ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ ಅವರ ಪ್ರಶ್ನೆಗೆ ಸರ್ಕಾರ ಕೊಟ್ಟ ಲಿಖಿತ ಉತ್ತರದ ಪ್ರಕಾರ ಕೊಪ್ಪಳ ತಾಲ್ಲೂಕು ವ್ಯಾಪ್ತಿಯಲ್ಲಿ 202 ಕಾರ್ಖಾನೆಗಳಿವೆ. ಕೆಲ ಸ್ಪಾಂಜ್ ಐರನ್ ತಯಾರಿಕಾ ಘಟಕಗಳ ಅವೈಜ್ಞಾನಿಕ ಹೊಗೆ ವಿಲೇವಾರಿಯಿಂದಾಗಿ ಮಾಲಿನ್ಯ ವಾಗುತ್ತಿದೆ. ಈ ಬಗ್ಗೆ ಅನೇಕ ದೂರುಗಳು ಬಂದಿದ್ದು ಷರತ್ತು ಉಲ್ಲಂಘಿಸಿದ 12 ಕೈಗಾರಿಕೆಗಳನ್ನು ಮುಚ್ಚುವಂತೆ ಅಧಿಕಾರಿಗಳು ಆದೇಶ ಮಾಡಿದರೂ ಕಾರ್ಯರೂಪಕ್ಕೆ ಬಂದಿಲ್ಲ.**


**ಆದರೂ ವೈಜ್ಞಾನಿಕವಾಗಿ ಹಾರುಬೂದಿ ವಿಲೇವಾರಿ ಹಾಗೂ ಜನರ ಆರೋಗ್ಯ ಸುರಕ್ಷತೆಗೆ ಸರ್ಕಾರ ಕ್ರಮ ವಹಿಸಿಲ್ಲ. ಕಾರ್ಖಾನೆಗಳಿಗೆ ಬೇಕಾಗುವ ಕಚ್ಚಾವಸ್ತು, ತ್ಯಾಜ್ಯ ಹೀಗೆ ಅನೇಕ ಸಾಮಗ್ರಿ ಸಾಗಿಸಲು ನಿತ್ಯ ನೂರಾರು ಟಿಪ್ಪರ್‌ಗಳು ಓಡಾಡುತ್ತವೆ. ಇವುಗಳ ಭಾರ ತಾಳಲಾಗದೆ ರಸ್ತೆ ಗುಂಡಿಮಯವಾಗಿದ್ದು, ಇದರ ದೂಳಿನಿಂದಲೂ ಸಮಸ್ಯೆ ಬಿಗಡಾಯಿಸಿದೆ ಎಂದು ಇಲ್ಲಿನ ಜನ ಹೇಳುತ್ತಾರೆ.**

ಗ್ರಾಮದ ಆರಂಭದಲ್ಲಿ ವಾಹನಗಳ ದುರಸ್ತಿ ಗ್ಯಾರೇಜ್ ಬಳಿ ಮಾತಿಗೆ ಸಿಕ್ಕ ದೇವಪ್ಪ ಪತ್ತಾರ ಅವರನ್ನು 'ಕಪ್ಪು ದೂಳಿನ ಹಾವಳಿ ಹೇಗಿದೆ' ಎಂದು ಕೇಳಿದಾಗ, 'ಜೀವನ ಸಾಕು ಎನಿಸಿದವರು ಮಾತ್ರ ನಮ್ಮೂರಿಗೆ ಬರಬೇಕು' ಎಂದು ಹೇಳಿದರು. ಇದು ಅಲ್ಲಿನ ದೂಳುಮಯ ಪರಿಸರ, ಜನರಲ್ಲಿ ಕಾಡುತ್ತಿರುವ ನಿರಂತರ ಅನಾರೋಗ್ಯ, ಅಸಹಾಯಕತೆಗೆ ಸಾಕ್ಷಿಯಂತಿತ್ತು.

ಇವು ಕೆಲವು ಉದಾಹರಣೆಗಳು ಮಾತ್ರ. ಹೀಗೆ ಕಪ್ಪು ದೂಳಿನ ಹೊಡೆತಕ್ಕೆ ಸಿಲುಕಿ ಕೊಪ್ಪಳ ತಾಲ್ಲೂಕಿನ ಚಿಕ್ಕಬಗನಾಳ, ಕಾಸನಕಂಡಿ, ಹಾಲವರ್ತಿ, ಲಾಚನಕೆರೆ, ಕರ್ಕಿಹಳ್ಳಿ, ಹ್ಯಾಟಿ ಹಾಗೂ ಮುಂಡರಗಿ ಗ್ರಾಮಗಳು ನಲುಗಿ ಹೋಗಿವೆ. ಬಹಳಷ್ಟು ಪ್ರಮುಖ ಕಾರ್ಖಾನೆಗಳು ಆಡಳಿತದ ಶಕ್ತಿ ಕೇಂದ್ರ ಕೊಪ್ಪಳ ಜಿಲ್ಲಾಡಳಿತ ಭವನದಿಂದ ಕೇವಲ ನಾಲ್ಕು ಕಿ.ಮೀ. ದೂರದಲ್ಲಿವೆ. ಆರಂಭದಲ್ಲಿ ದೂಳು ಬರುವುದಿಲ್ಲ ಎಂದು ಕೊಪ್ಪಳ ನಗರದ ಜನ ಸುಮ್ಮನಿದ್ದರು. ಇತ್ತೀಚೆಗಿನ ವರ್ಷಗಳಲ್ಲಿ ನಗರ ಪ್ರದೇಶದಲ್ಲಿಯೂ ಕಪ್ಪು ದೂಳು ಆವರಿಸುತ್ತಿದೆ. ಮನೆಯ ಮೇಲೆ, ಮುಂಭಾಗದ ಮೇಲಿನ ಪ್ರದೇಶವೆಲ್ಲ ಕಪ್ಪಾಗುತ್ತಿದೆ. ಸ್ಪಾಂಜ್ ಐರನ್ ಘಟಕಗಳಿಗೆ ಸಮರ್ಪಕವಾದ ಬಫರ್ ವಲಯ ಇಲ್ಲದಿರುವುದು ಸಮಸ್ಯೆಗೆ ಕಾರಣವಾಗಿದ್ದು, ಇದು ಕೃಷಿ ಭೂಮಿ ಮೇಲೂ ಪರಿಣಾಮ ಬೀರಿದೆ. ಕಾರ್ಖಾನೆಗಳ ಹತ್ತಿರದಲ್ಲಿಯೇ ಹಲವು ಹಳ್ಳಿಗಳು ಇರುವುದು ಮಾಲಿನ್ಯಕ್ಕೆ ಕಾರಣ ಎನ್ನುವ ಅಂಶವನ್ನು ಖುದ್ದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯೇ ಒಪ್ಪಿಕೊಂಡಿದೆ.

# ನೇಹಾ ಹಿರೇಮಠ ಹತ್ಯೆ ಖಂಡಿಸಿ ಪ್ರತಿಭಟನೆ

• ಸಿಂಧನೂರು ಉದಯವಾಹಿನಿ


ಉದಯವಾಹಿನಿ ಚಿತ್ರ

ನೇಹಾ ಹಿರೇಮಠ ಅವರು ಹತ್ಯೆ ಖಂಡಿಸಿ ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಸಮಿತಿ ರಾಯಚೂರು ವತಿಯಿಂದ ತಾಲ್ಲೂಕು ತಹಶೀಲ್ದಾರರ ಮುಖಾಂತರ ಮಾನ್ಯ ಮುಖ್ಯಮಂತ್ರಿ ಅವರಿಗೆ ಮನವಿ ಪತ್ರವನ್ನು ಸಲ್ಲಿಸುವುದರ ಮೂಲಕ ಆಗ್ರಹಿಸಿದರು.


ನಂತರ ಪ್ರತಿಭಟನೆ ಮಾತನಾಡಿದ ಜಿಲ್ಲಾ ಸಂಚಾಲಕ ಮೌನೇಶ ಜಾಲವಾಡಗಿ ಅವರು ಈ ದೇಶದಲ್ಲಿ ನಿರಂತರವಾಗಿ ಮಹಿಳೆಯರ ಮೇಲೆ, ಬಾಲಕಿಯರ ಮೇಲೆ, ವಿದ್ಯಾರ್ಥಿನಿಯರ ಮೇಲೆ ದೌರ್ಜನ್ಯಗಳು, ಅತ್ಯಾಚಾರಗಳು, ಕೊಲೆಗಳು ಎಗ್ಗಿಲ್ಲದೆ ನಡೆಯುತ್ತಿರುವುದು ಕೇಂದ್ರ, ರಾಜ್ಯ ಸರ್ಕಾರಗಳು ದುರಂತವೇ ಸರಿ ಎಂದು ಆಗ್ರಹಿಸಿದರು. 18 ರಂದು ಹುಬ್ಬಳ್ಳಿಯ ಬಿ.ವಿ.ಬಿ. ಕಾಲೇಜಿನ ಎಂಸಿಎ ವಿಭಾಗದಲ್ಲಿ ಓದುತ್ತಿದ್ದ ವಿದ್ಯಾರ್ಥಿನಿ ನೇಹಾ ನಿರಂಜನ ಹಿರೇಮಠ(25) ಅವರನ್ನು ತನ್ನ ಸಹಪಾಠಿಯಾದ ಫಯಾಜ್(27) ಎನ್ನುವವನು ಕೊಲೆ ಮಾಡಿ ವಿಕೃತಿ ಮೆರೆದಿದ್ದಾನೆ.

ನೇಹಾ ತನ್ನನ್ನು ಪ್ರೀತಿಸುವಂತೆ ಫಯಾಜ್ ಹಲವು ದಿನಗಳಿಂದ ಪೀಡಿಸುತ್ತಿದ್ದ, ತನ್ನ ಪ್ರೀತಿಯನ್ನು ನಿರಾಕರಿಸಿದ ಕಾರಣ ಕೋಪಗೊಂಡ ಆತ ಕಾಲೇಜ್ ಕ್ಯಾಂಪಸ್ ಒಳಗಡೆ ನೇಹಾ ಮೇಲೆ ಏಕಾಏಕಿ ನುಗ್ಗಿ ಚಾಕುವಿನಿಂದ ದಾಳಿ ನಡೆಸಿ, ಕುತ್ತಿಗೆಗೆ ಹಿರಿದು ಕೊಲೆ ಮಾಡಿದ್ದಾನೆ. ಆದ್ದರಿಂದ ಇಂತಹ ಪೈಶಾಚಿತ ವಿಕೃತಿ ಕೃತ್ಯ ಎಸಗಿ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡಿ, ಮಹಿಳೆಯರು ವಿದ್ಯಾರ್ಥಿನಿಯರು, ಭಯದ ವಾತಾವರಣದಲ್ಲಿ ಸಿಲುಕುವಂತೆ ಮಾಡಿದ ಅಪರಾಧಿಗಳನ್ನು ಕೂಡಲೇ ಗಲ್ಲಿಗೇರಿಸಬೇಕು. ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಹಾಗೂ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿಯರಿಗೆ ವಿಶೇಷವಾದ ಭದ್ರತೆ ಒದಗಿಸಬೇಕೆಂದರು ಮಹಿಳೆಯರ ಹಾಗೂ ವಿದ್ಯಾರ್ಥಿನಿಯರ ಮೇಲೆ ಅತ್ಯಾಚಾರ ಹಾಗೂ ಕೊಲೆ ಮಾಡಿದವರಿಗೆ ಎನ್ಕೌಂಟರ್ ಮಾಡುವ ವಿಶೇಷ ಕಾನೂನು ಜಾರಿಯಾಗಬೇಕು ಎಂದು ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಸಮಿತಿ ವತಿಯಿಂದ ಆಗ್ರಹಿಸುತ್ತಿದ್ದೇವೆ ಎಂದರು.

# ಸರಳ ಪದಗಳಲ್ಲಿ ಜೀವನ ಮೌಲ್ಯ ಬೋಧಿಸಿದ ಭಗವಾನ್ ಮಹಾವೀರ

## ಜಯಂತಿ ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಎಂ.ಕಾರ್ತಿಕ್ ಅಭಿಮತ

• ಉದಯವಾಹಿನಿ, ಚಿತ್ರದುರ್ಗ


ಉದಯವಾಹಿನಿ ಚಿತ್ರ

ಬೋಧನೆಗಳು ಸರಳ ಪದಗಳಲ್ಲಿ ಇವೆ

ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಆಸ್ತೇಯ, ಅಪರಿಗ್ರಹ ಎನ್ನುವ ಐದು ಸರಳ ಪದಗಳಲ್ಲಿ ಜೀವನ ಮೌಲ್ಯಗಳನ್ನು ಭಗವಾನ್ ಮಹಾವೀರ ಬೋಧಿಸಿದ್ದಾರೆ ಎಂದು ಉಪವಿಭಾಗಾಧಿಕಾರಿ ಎಂ.ಕಾರ್ತಿಕ್ ಹೇಳಿದರು. ನಗರದ ತ.ರಾ.ಸು ರಂಗಮಂದಿರದಲ್ಲಿನ ಕನ್ನಡ, ಸಂಸ್ಕೃತಿ ಇಲಾಖೆ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಭಗವಾನ್ ಮಹಾವೀರ ಸರಳ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಮಹಾವೀರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಸತ್ಯ ಹೇಳುವುದು, ಪರರನ್ನು, ಸಕಲ ಜೀವಗಳ ಎಡೆಗೆ ಅಹಿಂಸಾ ಭಾವದಿಂದ ನಡೆದು ಕೊಳ್ಳುವುದು. ಶುದ್ಧ ಚಾರಿತ್ರ್ಯ ಕಾಪಾಡಿಕೊಳ್ಳುವುದು. ಪರ ವಸ್ತುಗಳನ್ನು ಕದಿಯದಿರುವುದು. ಎಲ್ಲಾ ಭವ ಬಂಧನಗಳಿಂದ ಮುಕ್ತವಾಗಿರಬೇಕು ಎಂಬುದು ಮಹಾವೀರ ಬೋಧನೆ ತಿರುಳಾಗಿದೆ. ಮಹಾವೀರರ ಈ ಬೋಧನೆಗಳು ಸರಳ ಪದಗಳಲ್ಲಿ ಇವೆ. ಇವುಗಳನ್ನು ಅರ್ಥೈಸಿಕೊಂಡು ಜೀವನದಲ್ಲಿ ಅಳವಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣವಾಗಲಿದೆ. ಇದರಿಂದ ಹಿಂಸೆ, ಯುದ್ಧಗಳು ಭೀತಿಯಿಲ್ಲದೆ ಎಲ್ಲರು ಪ್ರಗತಿ ಕಾಣಬಹುದು ಎಂದು ಉಪವಿಭಾಗಾಧಿಕಾರಿ ಎಂ. ಕಾರ್ತಿಕ್ ಅಭಿಪ್ರಾಯಪಟ್ಟರು.

ಲೋಕಸಭಾ ಸಾರ್ವತ್ರಿಕ ಚುನಾವಣೆ ಮಾದರಿ ನೀತಿ ಸಂಹಿತೆ ಹಿನ್ನಲೆಯಲ್ಲಿ ಸರಳವಾಗಿ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಕುಮಾರ್ ಪ್ರಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ರಂಗನಿರ್ದೇಶಕ ಕೆ.ಪಿ.ಎಂ.ಗಣೇಶಯ್ಯ ನಾಡಗೀತೆ ಪ್ರಸ್ತುತ ಪಡಿಸುವುದರೊಂದಿಗೆ ಕಾರ್ಯಕ್ರಮ ನಿರೂಪಿಸಿದರು. ತಹಶೀಲ್ದಾರ್ ಡಾ.ನಾಗವೇಣಿ, ಜೈನ ಸಮುದಾಯದ ಮುಖಂಡರಾದ ಪ್ರೇಮ್ ಚಂದ್, ಮನ್ಸಿರಾಜ್ ಸೇರಿದಂತೆ ಮತ್ತಿತರರು ಇದ್ದರು.

**ಮಹಾವೀರ ಸರಳ ಬೋಧನೆ ಎಂದರೆ 'ಜಿಯೋ ಜೀನೇದೋ' ಇದರ ಅರ್ಥ ನೀವು ಬದುಕಿ ಇತರರಿಗೆ ಬದುಕಲು ಬಿಡಿ ಎಂಬುದಾಗಿದೆ. ಕಾಮ, ಕ್ರೋಧ, ಮೋಹ, ಮದ, ಮಾತ್ಸರ್ಯಗಳನ್ನು ಜಯಿಸಿದರೆ ಮುಕ್ತಿ ಪಡೆಯಬಹುದಾಗಿದೆ. ರಾಜ ಮನೆತನದಲ್ಲಿ ಹುಟ್ಟಿದರೂ ವೈಭೋಗ ತೊರೆದು ಸನ್ಯಾಸತ್ವನ್ನು ಮಹಾವೀರರು ಪಡೆದುಕೊಂಡರು. ಇದೇ ಹಾದಿಯಲ್ಲಿ ಇಂದಿಗೂ ಹಲವಾರು ಕೋಟ್ಯಾಧಿಪತಿಗಳು ತಮ್ಮ ಎಲ್ಲಾ ಆಸ್ತಿ ಪಾಸ್ತಿಗಳನ್ನ ದಾನ ಮಾಡಿ ಸನ್ಯಾಸ ದೀಕ್ಷೆ ಪಡೆಯುವುದನ್ನು ನೋಡಬಹುದು**

**-ವಸ್ತಿಮಲ್, ಜೈನ ಸಮಾಜದ ಮುಖಂಡ**

# ಬಂಜಾರ ಸಮುದಾಯದ ಸ್ವಾಮೀಜಿಗಳ ಹೇಳಿಕೆ ಖಂಡನೀಯ

• ಉದಯವಾಹಿನಿ,ಚಿಂಚೋಳಿ


ಉದಯವಾಹಿನಿ ಚಿತ್ರ

ಬಂಜಾರ ಸಮಾಜ ಆಕ್ರೋಶ

ಕಲಬುರ್ಗಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಡಾ.ಉಮೇಶ ಜಾಧವ ವಿರುದ್ಧ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಸೂಚಿಸುತ್ತೇವೆ ಎಂದು ಹೇಳಿದ ಲೋಕೇಶ ಮಹಾರಾಜರು, ಪರಮೇಶ್ವರ ಮಹಾರಾಜರು, ರೇವುನಾಯಕ ಬೆಳಮಗಿಯವರ ಹೇಳಿಕೆ ಖಂಡನೀಯ ಎಂದು ವಕೀಲ ವಿಜಯಕುಮಾರ ರಾಠೋಡ್ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈಡಿ ದೇಶದಲ್ಲಿಯೇ ಬಂಜಾರ ಸಮಾಜವನ್ನು ಗುರುತು ಮಾಡಿದ್ದು ಡಾ.ಉಮೇಶ ಜಾಧವ ಸಮಾಜವನ್ನು ಒಗ್ಗೂಡಿಸಿ ಉನ್ನತಮಟ್ಟಕ್ಕೆ ಕೊಂಡ್ಯೊದಿದ್ದು ಜಾಧವ ಕುಟುಂಬವಾಗಿದೆ ಆದರೆ ಜಾಧವ ವಿರುದ್ಧ ಹೇಳಿಕೆ ನೀಡಿದ ಈ ಬಂಜಾರ ಸ್ವಾಮೀಜಿಗಳ ಬುದ್ಧಿಭ್ರಮೆಯಾಗಿದೆ.

ಪ್ರತಿವರ್ಷ ದೆಹಲಿಯಲ್ಲಿ ಸೇವಾಲಾಲ್ ಮಹಾ ರಾಜರ ಹಾಗೂ ರಾಮರಾವ ಮಹಾರಾಜರ ಮತ್ತು ಲಕ್ಕಿಷಾ ಬಂಜಾರರವರ ಜಯಂತಿಗಳು ಆಚರಿಸಿ ಸಮಾಜ ಒಕ್ಕೂಡಿಸುವ ಕೆಲಸ ಉಮೇಶ ಜಾಧವ ಮಾಡುತ್ತಿದರೆ ಪರಮೇಶ್ವರ ಸ್ವಾಮೀಜಿ, ಲೋಕೇಶ ಸ್ವಾಮೀಜಿ ಸಮಾಜ ಒಡೆಯುವ ಕೆಲಸ ಮಾಡುತ್ತಿದ್ದಾರೆ ಅದಕಾರಣ ಈಡಿ ದೇಶದ ಬಂಜಾರ ಸಮಾಜ ಬಂಧುಗಳು ಸ್ವಾಮೀಜಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಜಾಧವ ಕುಟುಂಬ ಸಹ ಈ ಸ್ವಾಮೀಜಿಗಳ ಮಠ, ಇನ್ನಿತರ ಧರ್ಮಗುರುಗಳಿಗೆ ಸರ್ಕಾರಿ ಜಮೀನು ಕೊಡಿಸಿ ಅವರ ಮಠಗಳನ್ನು ಕಟ್ಟಿಸಿಕೊಳ್ಳಲು ಸಹಾಯ ಮಾಡಿರುತ್ತಾರೆ, ಆದರೆ ಸ್ವಾತಂತ್ರ್ಯ ಬಂದಾಗಿನಿಂದ ಕಾಂಗ್ರೆಸ್ ಪಕ್ಷ ಕೇಂದ್ರ, ರಾಜ್ಯದಲ್ಲಿ ಅಧಿಕಾರದಲ್ಲಿದರು ಬಂಜಾರ ಸಮಾಜಕ್ಕೆ ಯಾವುದೇ ಕೊಡುಗೆ ಇಲ್ಲವೆಂದು ತಿಳಿದರು ಸ್ವಾಮೀಜಿಗಳು ಕಾಂಗ್ರೆಸ್ ಏಕಾಏಕಿ ಬೆಂಬಲ ನೀಡುತ್ತಿರುವುದು ನೋಡಿದರೆ ಹಣದ ಅಮಿಷಗಳಿಗೆ ಒಳಗಾಗಿ ಹೇಳಿಕೆ ನೀಡಿರಬಹುದು ಎಂದು ಮೇಲ್ನೋಟಕ್ಕೆ ಗೋತ್ತಾಗುತ್ತಿದೆ.

ಬಂಜಾರ ಸಮಾಜ ವಿರೋಧಿಯಾಗಿರುವ ಈ ಸ್ವಾಮೀಜಿಗಳು ಹೇಳಿಕೆ ಹಿಂಪಡೆದರೆ ಸರಿ ಇಲ್ಲಾದಿದ್ದರೆ ಸಮಾಜದಿಂದ ಹೊರಹಾಕುವಂತೆ ಚಳುವಳಿ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು. ಈ ಸಂದರ್ಭದಲ್ಲಿ ಬಿಜೆಪಿ ವಕ್ತಾರ ಶ್ರೀಮಂತ ಕಟ್ಟಿಮನಿ, ವಕೀಲ ನೀಲಕಂಠ ರಾಠೋಡ್, ವಕೀಲ ಚಂದ್ರಶೇಟ್ಟಿ ಜಾಧವ, ವಕೀಲ ದೀಲೀಪ ಚವ್ಹಾಣ, ಗುರುನಾಥ ರಾಠೋಡ್ ಇದ್ದರು.

# ಜಾನುವಾರು ಜಾತ್ರೆಯಲ್ಲಿ ಎತ್ತುಗಳ ಭರ್ಜರಿ ಮಾರಾಟ

• ಉದಯವಾಹಿನಿ, ಕವಿತಾಳ


ಉದಯವಾಹಿನಿ ಚಿತ್ರ


ಪಟ್ಟಣದಲ್ಲಿ ತ್ರಯಂಭಕೇಶ್ವರ ಜಾತ್ರೆ ಅಂಗವಾಗಿ ನಡೆಯುತ್ತಿರುವ ಜಾನುವಾರು ಜಾತ್ರೆಯಲ್ಲಿ ಎತ್ತುಗಳ ಖರೀದಿ, ಮಾರಾಟ ಭರ್ಜರಿಯಾಗಿದೆ. ಹಿಂಗಾರು, ಮುಂಗಾರು ಮಳೆ ಕೈಕೊಟ್ಟ ಪರಿಣಾಮ ಈ ವರ್ಷ ತೀವ್ರ ಬರಗಾಲ ಆವರಿಸಿದ್ದರೂ ಎತ್ತುಗಳ ಬೆಲೆಯಲ್ಲಿ ಏರಿಕೆಯಾಗಿದ್ದರೂ ರೈತರು ಉತ್ಸಾಹದಿಂದ ಖರೀದಿಸುತ್ತಿರುವುದು ಮತ್ತು ಎತ್ತುಗಳನ್ನು ಬದಲಿಸಲು ಮುಂದಾಗಿರುವ ದೃಶ್ಯ ಕಂಡುಬಂತು.

ಜಾತ್ರೆಯಲ್ಲಿ ನಿರೀಕ್ಷಿತ ಸಂಖ್ಯೆಯಲ್ಲಿ ಜಾನುವಾರುಗಳು ಕಂಡುಬರದಿದ್ದರೂ ಒಂದು ಎತ್ತಿನ ಬೆಲೆ ಅಂದಾಜು 80 ಸಾವಿರದಿಂದ 1.5 ಲಕ್ಷದ ವರೆಗೆ ವಹಿವಾಟು ನಡೆಯುತ್ತಿದೆ. ಎತ್ತುಗಳ ಮಾರಾಟ ಮತ್ತು ಖರೀದಿ ಮೇಲೆ ಬರಗಾಲ ಯಾವುದೇ ಪರಿಣಾಮ ಬೀರಿಲ್ಲ. ಬದಲಿಗೆ ಈ ವರ್ಷ ಮಳೆಯಾಗುವ ಲಕ್ಷಣಗಳಿವೆ. ಮುಂದೆಯೂ ಕೃಷಿ ಚಟುವಟಿಕೆಗೆ ಎತ್ತುಗಳು ಬೇಕೇ ಬೇಕು. ಎರಡು ವರ್ಷಗಳ ಹಿಂದೆ ಎರಡು ರಾಸುಗಳನ್ನು 80 ಸಾವಿರಕ್ಕೆ ಖರೀದಿ ಮಾಡಿದ್ದೆ. ಈಗ ಒಂದು ಎತ್ತನ್ನು ಈಗಾಗಲೇ ಊರಲ್ಲಿಯೇ 1 ಲಕ್ಷಕ್ಕೆ ಮಾರಾಟ ಮಾಡಿದ್ದೇನೆ. ಮತ್ತೊಂದು ಎತ್ತನ್ನು 1.20 ಲಕ್ಷ ಹೇಳುತ್ತಿದ್ದೇನೆ. ಮಾರಾಟ ಮಾಡಿ ಬೇರೆ ಎತ್ತುಗಳನ್ನು ಖರೀದಿಸುತ್ತೇನೆ' ಎಂದು ಕುರಕುಂದಿ ಗ್ರಾಮದ ರೈತ ಹನುಮಂತ ಹೇಳಿದರು.

**ಕೃಷಿ ಚಟುವಟಿಕೆಗಳು ವರ್ಷ ಪೂರ್ತಿ ನಡೆಯುತ್ತದೆ. ಒಂದು ವರ್ಷ ಮಳೆ ಕೈ ಕೊಟ್ಟರೆ ರೈತರಿಗೆ ತೊಂದರೆಯಾಗುತ್ತದೆ. ಹಾಗಂತ ವ್ಯವಸಾಯದಿಂದ ರೈತರು ವಿಮುಖರಾಗುವುದಿಲ್ಲ. ಆಧುನಿಕವಾಗಿ ಟ್ರ್ಯಾಕ್ಟರ್ ಮತ್ತಿತರ ಯಂತ್ರಗಳು ಬಂದಿದ್ದರೂ ಎತ್ತುಗಳ ಅಗತ್ಯ ಇದೆ -ರಾಮಪ್ಪ, ರೈತ**

# ಅಭಿವೃದ್ಧಿ ಯೋಜನೆ ಮನೆ ಮನೆಗೆ ತಲುಪಿಸಿ

• ಉದಯವಾಹಿನಿ, ಶಿಗ್ಗಾವಿ


ಉದಯವಾಹಿನಿ ಚಿತ್ರ


ಕಾಂಗ್ರೆಸ್ ಸರ್ಕಾರ ಬಡವರ, ಕೂಲಿ ಕಾರ್ಮಿಕರ, ಹಿಂದುಳಿದ ಜನರಿಗಾಗಿ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತಂದಿದೆ. ಅವುಗಳನ್ನು ಮನೆ, ಮನೆಗೆ ತಲುಪಿಸುವ ಕಾರ್ಯವನ್ನು ಕಾರ್ಯಕರ್ತರು ಮಾಡಬೇಕು ಎಂದು ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿ ನಿಗಮದ ಅಧ್ಯಕ್ಷ ಸೋಮಣ್ಣ ಬೇವಿನಮರದ ಹೇಳಿದರು. ತಾಲ್ಲೂಕಿನ ಬಂಕಾಪುರ ಪಟ್ಟಣದ ರೇಣುಕಾ ಪ್ಯಾಲೇಸ್ ಸಭಾ ಭವನದಲ್ಲಿ ಶನಿವಾರ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಕೊಲೆಯಾದ ವಿದ್ಯಾರ್ಥಿನಿ ನೇಹಾ ಹಿರೇಮಠ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಮಾತನಾಡಿದರು.

ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳು ಜನಮನಕ್ಕೆ ಮುಟ್ಟಿದ್ದು, ಕಾರ್ಯಕರ್ತರು ಮನೆಗಳಿಗೆ ಭೇಟಿ ನೀಡಿ ಅವುಗಳನ್ನು ಮತ್ತೆ ನೆನಪಿಸುವ ಮೂಲಕ ಮತಯಾಚಿಸಬೇಕು. ಬಿಜೆಪಿಯು ಕಾಂಗ್ರೆಸ್ ಅಭಿವೃದ್ಧಿ ಸಹಿಸಲಾಗದೆ ಸುಳ್ಳು ಭರವಸೆ ನೀಡುತ್ತಿದೆ. ಹೀಗಾಗಿ ನಾವೇ ಕಾಂಗ್ರೆಸ್ ಅಭ್ಯರ್ಥಿ ಎಂದು ಭಾವಿಸಿ ಮತಯಾಚನೆ ಮಾಡಬೇಕು ಎಂದರು.

ಕಾಂಗ್ರೆಸ್ ಮುಖಂಡ ಯಾಸೀರಖಾನ್ ಪಠಾಣ ಮಾತನಾಡಿ, ಚುನಾವಣೆ ಪ್ರಚಾರದಲ್ಲಿ ಯುವ ಕಾರ್ಯಕರ್ತರ ಶ್ರಮ ಮುಖ್ಯವಾಗಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಂತೆ ಮನೆ, ಮನೆಗಳಿಗೆ ಹೋಗಿ ಪ್ರಚಾರ ಮಾಡಬೇಕು ಎಂದು ಹೇಳಿದರು.

# ಪ್ರಧಾನಿ ಹುದ್ದೆ ಗಾಂಧಿ ಕುಟುಂಬದ ಸ್ವತ್ತಾ? ಪ್ರಹ್ಲಾದ್ ಜೋಶಿ ಕಿಡಿ

• ಉದಯವಾಹಿನಿ, ಹುಬ್ಬಳ್ಳಿ



ರಮೇಶ್ ಕುಮಾರ್ ಹೇಳಿಕೆಗೆ ಆಕ್ರೋಶ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವಿರುದ್ಧ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಶನಿ ಎಂದು ಕರೆದಿರುವ ವಿಚಾರಕ್ಕೆ ಸಂಬಂಧಿಸಿದಂತೆ ಹುಬ್ಬಳ್ಳಿಯಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಕಿಡಿ ಕಾರಿದ್ದು, ಇಂದಿರಾ ಗಾಂಧಿ ಅವರ ಜಾಗಕ್ಕೆ ಮೋದಿ ಬಂದು ಕುಳಿತಿದ್ದಾರೆ ಎನ್ನುವುದಕ್ಕೆ ಪ್ರಧಾನ ಮಂತ್ರಿ ಹುದ್ದೆ ಏನು ಗಾಂಧಿ ಕುಟುಂಬದ ಸ್ವತ್ತ ಎಂದು ಆಕ್ರೋಶ ಅವರ ಹಾಕಿದರು.

ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ರಮೇಶ್ ಕುಮಾರ ನಾಯಕ ಮೋದಿ ವಿರುದ್ಧ ನಿಂದನೆಗಳನ್ನು ಮಾಡುತ್ತಿದ್ದಾರೆ ಟೀಕೆಯಲ್ಲ.

ಹಿಂದೆ ಸಿದ್ದರಾಮಯ್ಯ ಅವರು 20 13ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಗೆದ್ದರು. ಆನಂತರ ಮುಖ್ಯಮಂತ್ರಿ ಆದರು ನಂತರ ಒಂದೇ ವರ್ಷದಲ್ಲಿ 2014ರಲ್ಲಿ ಲೋಕಸಭೆ ಚುನಾವಣೆ ಬಂದಾಗ ಮೋದಿ ವಿರುದ್ಧ ಅತ್ಯಂತ ಕೆಟ್ಟದಾಗಿ ನಿಂದನಾತ್ಮಕ ಭಾಷೆಯಲ್ಲಿ ಮಾತನಾಡಿದರು. ಆಗ ದೇಶದಲ್ಲಿ ಕಾಂಗ್ರೆಸ್ ಮಣ್ಣುಮುಕ್ಕಿತು.

ಮೊದಲ ಬಾರಿಗೆ ಜವರಹಾಲ್ ನೆಹರು ಪ್ರಧಾನಮಂತ್ರಿಯ ಆದರೂ. ಅದ'ರ ನಂತರ ಅವರ ಪುತ್ರಿ ಇಂದಿರಾಗಾಂಧಿ ಅವರು ಪ್ರಧಾನ ಮಂತ್ರಿ ಆದ ಬಳಿಕ ರಾಜೀವ್ ಗಾಂಧಿ ಅವರು ಪ್ರಧಾನ ಮಂತ್ರಿಯಾದರು.

ಹಾಗೆಂದ ಮಾತ್ರಕ್ಕೆ ಪ್ರಧಾನಮಂತ್ರಿ ಹುದ್ದೆ ಏನು ಗಾಂಧಿ ಕುಟುಂಬದ ಸ್ವತ್ತ ಎಂದು ರಮೇಶ್ ಕುಮಾರ್ ವಿರುದ್ಧ ಪ್ರಹ್ಲಾದ್ ಜೋಶಿ ಕಿಡಿಕಾರಿದರು.

**ಇದೀಗ ಕಳೆದ ವರ್ಷ ಮತ್ತೆ ವಿಧಾನಸಭೆ ಚುನಾವಣೆಯಲ್ಲಿ ಗೆದ್ದು ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾರೆ. ಇದೀಗ ಒಂದು ವರ್ಷ ಬಳಿಕ ಮತ್ತೆ ಲೋಕಸಭೆ ಚುನಾವಣೆ ಆಗಮಿಸಿದ್ದು, ಪುನಹ ಮತ್ತೆ ಕಾಂಗ್ರೆಸ್ ಈ ಬಾರಿ ಇಡೀ ದೇಶದಲ್ಲಿ ಮಣ್ಣು ಮುಕ್ಕಲಿದೆ. ಗುಲಾಮಗಿರಿ ಮಾಡುವುದು ಅವರ ಪದ್ಧತಿ. ಇದೀಗ ರಮೇಶ್ ಕುಮಾರ ಅವರ ಬಗ್ಗೆ ಇರುವಂತಹ ಗೌರವ ಕಡಿಮೆ ಆಗಿದೆ**

**-ಪ್ರಹ್ಲಾದ್ ಜೋಶಿ**

# ಯುಗಾದಿ ಕಳೆದು ಹತ್ತು ದಿನವಾದರೂ ಹದ ಮಳೆಯಾಗಿಲ್ಲ

## • ಈ ವರ್ಷ ಹೆಚ್ಚಿನ ಸಂಖ್ಯೆಯ ಬೆಳೆಗಾರರು ತಂಬಾಕು ಬೆಳೆಯಲು ಮುಂದಾಗಿದ್ದರೂ, ಮಳೆಯಿಲ್ಲದೆ ನಿರಾಸೆ

• ಉದಯವಾಹಿನಿ, ಕೊಣನೂರು


ಉದಯವಾಹಿನಿ ಚಿತ್ರ

ಮಳೆಗಾಗಿ ಕಾಯುತ್ತಿರುವ ಬೆಳೆಗಾರರು

ಕಳೆದ ವರ್ಷ ಹೊಗೆಸೊಪ್ಪಿಗೆ ದಾಖಲೆಯ ಬೆಲೆ ದೊರೆತದ್ದರಿಂದ ಈ ವರ್ಷ ಹೆಚ್ಚಿನ ಸಂಖ್ಯೆಯ ಬೆಳೆಗಾರರು ತಂಬಾಕು ಬೆಳೆಯಲು ಮುಂದಾಗಿದ್ದರೂ, ಮಳೆಯಿಲ್ಲದೆ ನಿರಾಸೆಗೊಂಡಿದ್ದಾರೆ.

ಅರಕಲಗೂಡು ತಾಲ್ಲೂಕಿನ ಪ್ರಮುಖ ವಾಣಿಜ್ಯ ಬೆಳೆಯಾದ್ದರೂ ಬೆಲೆ ಕಡಿಮೆ. ಉತ್ಪಾದನಾ ವೆಚ್ಚ ಹೆಚ್ಚಳದ ಕಾರಣದಿಂದ ಹೊಗೆಸೊಪ್ಪು ಬೆಳೆಯಲು ಅನೇಕ ತಂಬಾಕು ಬೆಳೆಗಾರರು ಹಿಂದೇಟು ಹಾಕುತ್ತಿದ್ದರು.

2022 ರಿಂದ ಈಚೆಗೆ ವರ್ಷದಿಂದ ವರ್ಷಕ್ಕೆ ತಂಬಾಕು ಬೆಲೆ ಏರಿಕೆ ಆಗುತ್ತಿದ್ದು, ಪರವಾನಗಿ ಇದ್ದರೂ ಹೊಗೆಸೊಪ್ಪಿನ ಸಹವಾಸ ಬೇಡ ಎಂದು ಕೈ ಚೆಲ್ಲಿದ್ದ ಬೆಳೆಗಾರರೂ ಈ ಬಾರಿ ಹೊಗೆಸೊಪ್ಪು ಬೆಳೆಯ ಲು ಉತ್ಸುಕರಾಗಿದ್ದಾರೆ. ವಿಶೇಷವಾಗಿ ಕಾಳಜಿ ವಹಿಸಿ, ಒಂದೂವರೆ ತಿಂಗಳಿಂದಲೂ ಸಸಿಮಡಿಗಳನ್ನು ಬೆಳೆಸಿದ್ದು, ಮಳೆಗಾಗಿ ಕಾಯುತ್ತಿದ್ದಾರೆ. ಇದುವರೆಗೂ ಕೃಪೆ ತೋರದ ವರುಣ, ಹೊಗೆಸೊಪ್ಪು ಬೆಳೆಗಾರರನ್ನು ಆಕಾಶದತ್ತ ನೋಡುವಂತೆ ಮಾಡಿದ್ದಾನೆ. ಪ್ರತಿವರ್ಷವೂ ಏಪ್ರಿಲ್‌ನಲ್ಲಿ ಬಹುತೇಕ ರೈತರು ಹೊಗೆಸೊಪ್ಪು ನಾಟಿ ಮಾಡುತ್ತಿದ್ದರು. ಈ ವರ್ಷ ಮಳೆಯಿಲ್ಲದೆ ಇನ್ನೂ ಹೊಲಗಳನ್ನು ಸಹ ಹಸನು ಮಾಡಿಕೊಳ್ಳಲು ಆಗಿಲ್ಲ, ಪ್ರತಿವರ್ಷ ಸಾಮಾನ್ಯವಾಗಿ ಯುಗಾದಿಯ ನಂತರ ಮುಂಗಾರು ಮಳೆ ಸುರಿಯುತ್ತಿದ್ದು, ಈ ವರ್ಷ ಯುಗಾದಿ ಕಳೆದು 10 ದಿನವಾದರೂ ಹದ ಮಳೆಯಾಗಿಲ್ಲ.

ಮಡಿಯಲ್ಲೇ ಬಿಟ್ಟರೆ ಸಸಿಗಳು ಮಳೆ, ಆಲಿ ಕಲ್ಲು ಅಥವಾ ಅತಿಯಾದ ಧಗೆಯಿಂದ ಹಾಳಾ ಗು ವುದ ನ್ನು ತಪ್ಪಿಸಲು, ಮಡಿಯಿಂದ ಕಿತ್ತು ಟ್ರೇನಲ್ಲಿ ಹಾಕಿ ಪೋಷಿಸುತ್ತಿದ್ದಾರೆ. ಬಹುತೇಕ ತಂಬಾಕು ಬೆಳೆಗಾರರು ಮಳೆ ಬೀಳುವವರೆಗೆ ಸಸಿಗಳನ್ನು ಉಳಿಸಿಕೊಳ್ಳಲು ಕೋಕೋಪಿಟ್ ಸಹಿತ ಟ್ರೇನಲ್ಲಿ ಸಸಿಗಳನ್ನು ಹಾಕಿ ಕಾಪಾಡಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಮಡಿಯಲ್ಲಿರುವ ಸಸಿಗಳು ಹೆಚ್ಚು ಉದ್ದವಾಗಿ ಬೆಳೆದಲ್ಲಿ ನಾಟಿ ಮಾಡಲು ಯೋಗ್ಯ ಇಲ್ಲದಂತಾಗುತ್ತವೆ ಎಂದು ಸಸಿಗಳ ಎಲೆಗಳನ್ನು ಮುರಿದು ನಿಧಾನವಾಗಿ ಬೆಳವಣಿಗೆ ಆಗುವಂತೆ ಮಾಡುತ್ತಿದ್ದಾರೆ. ರಾಮನಾಥಪುರ ತಂಬಾಕು ಮಾರುಕಟ್ಟೆಯ ವ್ಯಾಪ್ತಿಯ ಅತಿ ಹೆಚ್ಚು ತಂಬಾಕು ಬೆಳೆಯುವ ಕೊಣನೂರು, ರಾಮನಾಥಪುರ ಭಾಗದಲ್ಲಿ ನೀರಾವರಿ ವ್ಯವಸ್ಥೆಯಿರುವ ಕೆಲವೇ ಕೆಲವು ಬೆಳೆಗಾರರು ಈಗಾಗಲೇ ಹೊಗೆಸೊಪ್ಪು ಸಸಿಗಳನ್ನು ನಾಟಿ ಮಾಡಿದ್ದು, ಹೊಲದಲ್ಲಿ ಸಸಿಗಳ ಆರೈಕೆಯಲ್ಲಿ ತೊಡಗಿದ್ದಾರೆ. ಹೊಗೆಸೊಪ್ಪನ್ನೇ ಮುಖ್ಯ ಬೆಳೆಯಾಗಿ ಅವಲಂಬಿಸಿರುವ ಸುಮಾರು 7 ಸಾವಿರ ತಂಬಾಕು ಬೆಳೆಗಾರರನ್ನು ಮಳೆಯ ಕೊರತೆಯು ದೊಡ್ಡಮಟ್ಟದಲ್ಲಿ ಕಾಡುತ್ತಿದೆ.

ಕಳೆದ ಒಂದು ವಾರದಿಂದ ಈಚೆಗೆ 3 ದಿನ ಬಂದ ತುಂತುರು ಮಳೆ ನಿರಾಸೆಗೊಳಿಸುತ್ತಿದ್ದು, ತಂಬಾಕು ಬೆಳೆಗಾರರ ಆಸೆಗೆ ತಣ್ಣೀರೆರೆಚಿದೆ.

**ಪರವಾನಗಿ ನವೀಕರಿಸಿ:** ಏಪ್ರಿಲ್ ಕೊನೆಯ ವಾರದಿಂದ ಮೇ 10ರೊಳಗೆ ತಂಬಾಕು ನಾಟಿ ಮಾಡಲು ಸಕಾಲ ಮಂಡಳಿ ಶಿಫಾರಸು ಮಾಡಿದೆ.

**ಕಳೆದ ವರ್ಷ ಹೆಚ್ಚಿದ ಬೆಲೆಯಿಂದ ಸ್ವಯಂ ಪ್ರೇರಿತರಾಗಿ ತಂಬಾಕು ಬೆಳೆಗಾರರು ಈ ಬಾರಿ ಹೆಚ್ಚು ಉತ್ಸಾಹ ತೋರುತ್ತಿದ್ದು ಸಿದ್ಧತೆ ನಡೆಸಿದ್ದಾರೆ. ತಂಬಾಕು ಬೆಳೆಯುವ ಪರವಾನಗಿ ನವೀಕರಣ ಪ್ರಕ್ರಿಯೆಯು ಮಾರ್ಚ್ 27 ರಿಂದ ಪ್ರಾರಂಭವಾಗಿದೆ. ಪರವಾನಗಿದಾರರೂ 2024-25ನೇ ಸಾಲಿಗೆ ನವೀಕರಿಸಿಕೊಳ್ಳಬೇಕು**

**-ಸವಿತಾ, ರಾಮನಾಥಪುರ ತಂಬಾಕು ಮಾರುಕಟ್ಟೆ ಅಧೀಕ್ಷಕಿ**

**ಮಡಿಯಲ್ಲಿ ಹುಲುಸಾಗಿ ಬೆಳೆದು ನಾಟಿಗೆ ಸಿದ್ಧವಿರುವ ಹೊಗೆಸೊಪ್ಪು ಸಸಿಗಳು.ಸತೀಶ್ ಎಸ್.ಡಿ.ಸರಗೂರು ತಂಬಾಕು ಬೆಳೆಗಾರ ಯುಗಾದಿಯ ನಂತರ ಮಳೆ ಬಿದ್ದು ಏಪ್ರಿಲ್ ಕೊನೆಯ ವಾರಕ್ಕೆ ಹೊಗೆಸೊಪ್ಪು ನಾಟಿಗೆ ಸಮಯ ಸರಿ ಹೋಗುತ್ತಿತ್ತು. ಈ ವರ್ಷ ಇದುವರೆಗೂ ಮಳೆಯಾಗದೇ ಸಿದ್ಧತೆ ಮಾಡಲು ಆಗಿಲ್ಲ.**

**-ಸತೀಶ್, ತಂಬಾಕು ಬೆಳೆಗಾರ**

# ಮಿನಿ ನ್ಯೂಸ್

## ಚೆಕ್ ಪೋಸ್ಟ್‌ನಲ್ಲಿ ದಾಖಲೆಯಿಲ್ಲದ 3.33ಲಕ್ಷ ರೂ.ಅಧಿಕಾರಿಗಳು ಜಪ್ತಿ


ಉದಯವಾಹಿನಿ ಚಿತ್ರ

• ಉದಯವಾಹಿನಿ,ಚಿಂಚೋಳಿ

ತಾಲ್ಲೂಕಿನ ಮಿರಿಯಾಣ ಚೆಕ್ ಪೋಸ್ಟನಲ್ಲಿ ವಾಹನಗಳು ತಪಾಸಣೆ ಮಾಡುವ ವೇಳೆ ದಾಖಲೆಯಿಲ್ಲದೆ ಸಾಗಿಸುತ್ತಿರುವ 3.33ಲಕ್ಷ ರೂ. ಅಧಿಕಾರಿಗಳು ಜಪ್ತಿ ಮಾಡಲಾಗಿದೆ ಎಂದು ಸಹಾಯಕ ಚುನಾವಣಾಧಿಕಾರಿ ಸಂತೋಷ ಇನಾಂದಾರ ತಿಳಿಸಿದ್ದಾರೆ. ಮಿರಿಯಾಣ ಚೆಕ್ ಪೋಸ್ಟ್‌ನಲ್ಲಿ ವಾಹನ ತಪಾಸಣೆ ಮಾಡುವಾಗ ಯಾವುದೇ ದಾಖಲಾತಿಗಳಿಲ್ಲದೆ 3.33ಲಕ್ಷ ರೂ.ಗಳು ಚಿಂಚೋಳಿ ಕಡೆಯಿಂದ ತಾಂಡುರ್ ಕಡೆಗೆ ವಾಹನದಲ್ಲಿ ಸಾಗಿಸುತ್ತಿರುವಾಗ ಎಸ್.ಎಸ್.ಟಿ ತಂಡದ ಅಧಿಕಾರಿ ಎಂಡಿ ಹಾತವುರ್ ರಹೇಮಾನ ಜಪ್ತಿ ಮಾಡಿ ಎಫ್.ಎಸ್.ಟಿ ತಂಡದ ಮುಖ್ಯಸ್ಥರಿಗೆ ಹಸ್ತಾಂತರಿಸಲಾಗಿದೆ ಎಂದು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಪಿಎಸ್ಐ ಶಿವರಾಜ ಪಾ ಟೀಲ, ಅಧಿಕಾರಿಗಳು ತುಕ್ಕಪ್ಪ ಕಣ್ಣಿ, ಆನಂದ ಪೋಜಿ, ಪುಂಡಲೀಕ, ಮಲ್ಲಿಕಾರ್ಜುನ, ಗೃಹದಳದ ಸಿಬ್ಬಂದಿಗಳು ಇನ್ನಿತರ ಅಧಿಕಾರಿಗಳು ಇದ್ದರು.

## 36-ಸುರಪೂರ (ಪ.ಪಂ) ವಿಧಾನಸಭಾ ಉಪ ಚುನಾವಣೆ

• ಉದಯವಾಹಿನಿ, ಯಾದಗಿರಿ

36-ಸುರಪೂರ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಸಂಬಂಧ ಇಂದು 2024ರ ಏಪ್ರಿಲ್ 20 ರಂದು ನಾಮಪತ್ರಗಳ ಪರಿಶೀಲನೆ ನಡೆಸಿದ್ದು, ಒಟ್ಟು ಏಳು ಅಭ್ಯರ್ಥಿಗಳ ನಾಮಪತ್ರಗಳು ಕ್ರಮಬದ್ಧವಾಗಿವೆ ಎಂದು 36-ಶೋರಾಪೂರ ವಿಧಾನಸಭಾ ಕ್ಷೇತ್ರ ಉಪ ಚುನಾವಣೆ-2024 ಚುನಾವಣಾಧಿಕಾರಿಗಳಾದ ಕು. ಕಾವ್ಯರಾಣಿ ಅವರು ತಿಳಿಸಿದ್ದಾರೆ. ಮಾನ್ಯತೆ ಪಡೆದ ರಾಷ್ಟ್ರೀಯ, ರಾಜ್ಯ ರಾಜಕೀಯ ಪಕ್ಷಗಳ ಅಭ್ಯ ರ್ಥಿಗಳಾದ ಶ್ರೀ ನರಸಿಂಹನಾಯಕ ಶಂಭನಗೌಡ-ಭಾರತೀಯ ಜನ ತಾ ಪಕ್ಷದ ಅಭ್ಯರ್ಥಿ ಇವರ ನಾಮಪತ್ರ, ರಾಜಾ ವೇಣುಗೋಪಾಲ ನಾಯಕ ರಾಜಾ ವೆಂಕಟಪ್ಪ ನಾಯಕ-ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಭ್ಯರ್ಥಿ ಇವರ ನಾಮಪತ್ರ ಕ್ರಮಬದ್ಧವಾಗಿದೆ. ಅದರಂತೆ ನೋಂದಾಯಿತ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಾದ, ಇತರೆ ಅಭ್ಯರ್ಥಿಗಳಾದ ಗುಂಡಪ್ಪ ಜಟ್ಟೆಪ್ಪ -ಸಮಾಜವಾದಿ ಜನತಾ ಪಾರ್ಟಿ, ಇತರೆ ಅಭ್ಯರ್ಥಿಗಳಾದ ಅಶೋಕ ಲಕ್ಷ್ಮಣ -ಪಕ್ಷೇತರ, ವೇಣುಗೋಪಾಲ ತಿಮ್ಮಣ್ಣ-ಪಕ್ಷೇತರ, ವೆಂಕಟಪ್ಪ ನಾಯಕ ಚಂದ್ರಶೇಖರ ನಾಯಕ-ಪಕ್ಷೇತರ, ಶಶಿಕುಮಾರ ಶಿವಪ್ಪ-ಪಕ್ಷೇತರ ಈ ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧವಾಗಿವೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂಚೆಮತ ಪತ್ರ ಸೌಲಭ್ಯ ಕೇಂದ್ರ ಸ್ಥಾಪನೆ

• ಉದಯವಾಹಿನಿ, ಚಿತ್ರದುರ್ಗ

ಚಿತ್ರದುರ್ಗ ಲೋಕಸಭಾ ಸಾರ್ವತ್ರಿಕ ಚುನಾವಣೆ-2024ರ ಹಿನ್ನಲೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿ, ಜಿಲ್ಲಾಧಿಕಾರಿ ನಿರ್ದೇಶನದಂತೆ ನಮೂನೆ-12 ಅರ್ಜಿಯನ್ನು ನೀಡಿದ ಚುನಾವಣಾ ಕರ್ತವ್ಯ ನಿರತ ಸಿಬ್ಬಂದಿ ಮತಚಲಾಯಿಸಲು ಅನುಕೂಲವಾಗುವಂತೆ ಅಂಚೆಮತ ಪತ್ರ ಸೌಲಭ್ಯ ಕೇಂದ್ರವನ್ನು ಚಿತ್ರದುರ್ಗ, ಹೊಳಲ್ಕೆರೆ ತಾಲ್ಲೂಕು ಕಚೇರಿಗಳಲ್ಲಿನ ಸಹಾಯಕ ಚುನಾವಣಾಧಿಕಾರಿಗಳ ಕಾರ್ಯಾಲಯಗಳಲ್ಲಿ ಸ್ಥಾಪಿಸಲಾಗಿದೆ. ಚುನಾವಣಾ ಕರ್ತವ್ಯ ನಿರತ ಸಿಬ್ಬಂದಿ ಏ. 22 ವರೆಗೆ ಬೆಳಗ್ಗೆ 9.00 ಗಂಟೆಯಿಂದ ಸಂಜೆ 5.00 ಗಂಟೆ ಒಳಗೆ ಮತ ಚಲಾಯಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ರಾಜ್ಯದ ಮಗಳು ನೇಹಾ ಮೃತಪಟ್ಟಿದ್ದಾರೆ, ಯಾಕೆ ನೀವು ಧ್ವನಿ ಎತ್ತುತ್ತಿಲ್ಲ

• ಉದಯವಾಹಿನಿ, ಹುಬ್ಬಳ್ಳಿ

ರಾಜ್ಯದ ಮಗಳು ನೇಹಾ ಮೃತಪಟ್ಟಿದ್ದಾಳೆ. ಹೀಗಿದ್ದೂ ಬೇರೆ ಸಂದರ್ಭದಲ್ಲಿ ಧ್ವನಿ ಎತ್ತುತ್ತಿರೋ ನೀವುಗಳು ಯಾಕೆ ರಾಜ್ಯದ ಮನೆ ಮಗಳು ಮೃತಪಟ್ಟಾಗ ಎತ್ತುತ್ತಿಲ್ಲ ಅಂತ ಬಿಗ್ ಬಾಸ್ ಸ್ಪರ್ಧಿ ಪ್ರಥಮ್, ನಟ ಪ್ರಕಾಶ್ ರಾಜ್, ಚೇತನ್ ಪ್ರಶ್ನಿಸಿದ್ದಾರೆ. ಭಾನುವಾರ ಹುಬ್ಬಳ್ಳಿಯಲ್ಲಿನ ನೇಹಾ ಅವರ ಮನೆಗೆ ಭೇಟಿ ನೀಡಿ, ಅವರ ಕುಟುಂಬಕ್ಕೆ ಸಾಂತ್ವಾನ ಹೇಳಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದಂತ ಅವರು, ನೇಹಾ ಅವರ ಹತ್ಯೆಯ ಆರೋಪಿಗೆ ಕಠಿಣ ಶಿಕ್ಷೆ ಆಗಬೇಕು ಎಂದು ಆಗ್ರಹಿಸಿದರು. ಜಸ್ಟಿಸ್ ಫಾರ್ ಲವ್ ಅಂದ್ರೆ ಏನು.? ಅವರಿಗೆ ಭಾರತ ರತ್ನ ಕೊಡಬೇಕಾ ಎಂಬುದಾಗಿ ಗರಂ ಆದಂತ ಅವರು, ಎಲ್ಲಾ ದಕ್ಕೂ ಪ್ರಧಾನಿ ಮೋದಿ ಪ್ರಶ್ನೆ ಮಾಡ್ತೀರ. ಆದ್ರೇ ಇಲ್ಲಿ ರಾಜ್ಯದ ಮಗಳು ನೇಹಾ ಮೃತಪಟ್ಟಿದ್ದಾಳೆ. ಯಾಕೆ ನೀವು ಧ್ವನಿ ಎತ್ತುತ್ತಾ ಇಲ್ಲ ಅಂತ ಪ್ರಕಾಶ್ ರಾಜ್, ಚೇತನ್ ಗೆ ಪ್ರಶ್ನಿಸಿದರು.

## ನೇಹಾ ಹತ್ಯೆಯ ಥರ ನಾಳೆ ಕಲಬುರಗಿಯಲ್ಲೂ ಆಗಬಹುದು

• ಉದಯವಾಹಿನಿ, ಕಲಬುರಗಿ

ಚುನಾವಣಾ ಪ್ರಚಾರದ ವೇಳೆ ನಾಲಿಗೆ ಹರಿಬಿಟ್ಟ ಬಿಜೆಪಿ ಶಾಸಕ ಯತ್ನಾಳ್ ಹುಬ್ಬಳ್ಳಿಯಲ್ಲಿ ನ್ಯಾಯ ಹಿರೇಮಠ ಹತ್ತೆಯ ಆಗಿದೆ ಅಂತ ಸುಮ್ಮನಾದರೆ ನಾಳೆ ಕಲಬುರ್ಗಿಯಲ್ಲೂ ಆಗಬಹುದು ನಿಮ್ಮ ಮನೆಯಲ್ಲಿ ಆಗಬಹುದು ಎಂದು ಚುನಾವಣೆ ಪ್ರಚಾರದ ವೇಳೆ ವಿವಾದಾತ್ಮಕ ಹೇಳಿಕೆ ನೀಡಿದರು. ಕಲ್ಬುರ್ಗಿಯ ಗಂಜ್ ಪ್ರದೇಶದಲ್ಲಿ ಚುನಾವಣಾ ಪ್ರಚಾರದ ವೇಳೆ ಮಾತನಾಡಿದ ಅವರು, ನೇಹ ಹಿರೇಮಠ ಕೊಲೆ ಹುಬ್ಬಳ್ಳಿಯಲ್ಲಿ ಆಗಿದೆ ಅಂತ ಸುಮ್ಮನಾದರೆ ನಾಳೆ ಕಲಬುರ್ಗಿ ಯಲ್ಲೂ ಆಗಬಹುದು ನಿಮ್ಮ ಮನೆಯಲ್ಲಿಯೂ ಆಗಬಹುದು ಎಂದು ಕಲ್ಬುರ್ಗಿಲಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಹೇಳಿಕೆ ನೀಡಿದರು. ಗಾಡಿ ತಗೊಂಡು ಕೊರಳಲ್ಲಿ ಚೈನ್ ಹಾಕಿ ನಿಮ್ಮ ಕಾಲೋನಿಗೂ ಬರುತ್ತಾರೆ ರೂ.50 ಹಾಕಿಕೊಂಡು ಬರುತ್ತಾರೆ ಸೂಮಕ್ಕಳು. ಅವರು ಬಂದಾಗ ಮನೆಯ ಮೇಲೆ ಕಲ್ಲು ಸಂಗ್ರಹ ಮಾಡಿಕೊಂಡು ಇರಿ ಎಂದು ಶಾಸಕ ಹೇಳಿದರು.ನೇಹಾ ಕೊಲೆ ಪ್ರಕರಣದಂತಹ ಘಟನೆ ನಡೆಯಬಾರದು ಅಂದರೆ ಜಾಗೃತರಾಗಿ ಮತ ಹಾಕಿ ಆಶೀರ್ವಾದ ಮಾಡಿ. ನಾವು ನೀವು ಸುರಕ್ಷತೆಯಿಂದ ಇರುತ್ತೇವೆ ಎಂದು ಕಲ್ಬುರ್ಗಿ ಗಂಜ್ ಪ್ರದೇಶದಲ್ಲಿ ನಡೆದ ಪ್ರಚಾರದ ವೇಳೆ ಯತ್ನಾಳ ಭಾಷಣದಲ್ಲಿ ವಿವಾದಾತ್ಮಕ ಹೇಳಿಕೆ ನೀಡಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಗರ್ಭಿಣಿಯರಿಗೆ ಉತ್ತಮ ದಿನವಲ್ಲ, ನೀವು ನಡೆಯುವಾಗ ಹೆಚ್ಚು ಜಾಗರೂಕರಾಗಿರಬೇಕು. ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಇಂದು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು.

**ವೃಷಭ** ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ತಮಾಷೆಯ ಮನಸ್ಥಿತಿಯಲ್ಲಿರುತ್ತೀರಿ. ತಮ್ಮ ಹಣವನ್ನು ಬೆಟ್ಟಿಂಗ್‌ನಲ್ಲಿ ಖರ್ಚು ಮಾಡಿದವರು ಇಂದು ನಷ್ಟ ಅನುಭವಿಸುವ ಸಾಧ್ಯತೆಯಿದೆ.

**ಮಿಥುನ** ಇಂದು ನೀವು ಕೇಂದ್ರಬಿಂದುವಾಗಿರುತ್ತೀರಿ. ನೀವು ಕೆಲವು ಜನರೊಂದಿಗೆ ಬೆರೆಯುವುದು ಸರಿಯಲ್ಲ ಎಂದು ನೀವು ಭಾವಿಸಿದ ಅವರೊಂದಿಗೆ ನಿಮ್ಮ ಸಮಯ ಹಾಳಾಗುತ್ತಿದ್ದರೆ ಅವರ ಜೊತೆಯನ್ನು ನೀವು ಬಿಟ್ಟುಬಿಡಬೇಕು.

**ಕರ್ಕಾಟಕ** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ಕಳೆದ ದಿನಗಳಿಗೆ ಹೋಲಿಸಿದರೆ ಇಂದು ಆರ್ಥಿಕ ಉತ್ತಮವಾಗಲಿದೆ ಮತ್ತು ನೀವು ಹೆಚ್ಚಿನ ಹಣವನ್ನು ಪಡೆಯುತ್ತೀರಿ.

**ಸಿಂಹ** ಇಂದು ನೀವು ಹಲವಾರು ಒತ್ತಡಗಳು ಮತ್ತು ಭಿನ್ನಾಭಿಪ್ರಾಯಗಳನ್ನು ಎದುರಿಸಬೇಕಾಗಬಹುದು ಹಾಗೂ ಇದು ನಿಮಗೆ ಕಿರಿಕಿರಿ ಹಾಗೂ ಆತಂಕದ ಭಾವನೆಗಳನ್ನು ಉಂಟುಮಾಡಬಹುದು.

**ಕನ್ಯಾ** ನೀವು ದೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ಇಂದು ನಿಮ್ಮ ಹಣವನ್ನು ಅನೇಕ ವಿಷಯಗಳಿಗೆ ಖರ್ಚು ಮಾಡಬಹುದು, ನೀವು ಇಂದು ಉತ್ತಮ ಬಜೆಟ್ ಅನ್ನು ಯೋಜಿಸಬೇಕಾಗಿದೆ.

**ತುಲಾ** ಇಂದು ಯಾವುದೇ ವಿರುದ್ಧ ಲಿಂಗದ ಸಹಾಯದಿಂದ ನೀವು ವ್ಯಾಪಾರದಲ್ಲಿ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಇದೆ. ನಿಮ್ಮ ಸಂಗಾತಿಯ ಜೊತೆಗಿನ ಸಂಬಂಧ ನಿಮ್ಮ ಕಚೇರಿ ಕೆಲಸದ ಕಾರಣ ಹಾಳಾಗಬಹುದು.

**ವೃಶ್ಚಿಕ** ನೀವು ಕೆಲವು ಉನ್ನತ ವ್ಯಕ್ತಿಗಳನ್ನು ಭೇಟಿಯಾಗಬಹುದಾದ್ದರಿಂದ ಗಾಬರಿಯಾಗಬೇಡಿ ಮತ್ತು ವಿಶ್ವಾಸ ಕಳೆದುಕೊಳ್ಳದಿರಿ. ಇದು ವ್ಯಾಪಾರಕ್ಕೆ ಬಂಡವಾಳದಂತೆ ಉತ್ತಮ ಆರೋಗ್ಯಕ್ಕೆ ಅಗತ್ಯವಾಗಿದೆ.

**ಧನಸ್ಸು** ಹಾಸ್ಯಪ್ರಜ್ಞೆಯಿರುವ ಸಂಬಂಧಿಕರ ಸಂಗ ನಿಮ್ಮ ಉದ್ವೇಗವನ್ನು ಕಡಿಮೆ ಮಾಡುತ್ತದೆ ಮತ್ತು ನಿಮಗೆ ತುಂಬಾ ಅಗತ್ಯವಾಗಿರುವ ಶಮನವನ್ನು ನೀಡುತ್ತದೆ. ಈ ರೀತಿಯ ಸಂಬಂಧಿಗಳನ್ನು ಹೊಂದಿದ ನೀವೇ ಅದೃಷ್ಟವಂತರು.

**ಮಕರ** ನಿಮ್ಮ ಶೀಘ್ರ ಕ್ರಮ ನಿಮ್ಮ ಸುದೀರ್ಘವಾದ ಸಮಸ್ಯೆಯನ್ನು ಪರಿಹರಿಸುತ್ತದೆ. ಇಂದು ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಕಂಡುಬರುತ್ತಿದೆ.

**ಕುಂಭ** ವಿಶೇಷವಾಗಿ ಹೃದಯ ರೋಗಿಗಳು ಕಾಫಿಯನ್ನು ಬಿಡಬೇಕು. ಇದು ಮತ್ತೊಂದು ಚೈತನ್ಯದಾಯಕ ದಿನವಾಗಿರುತ್ತದೆ ಮತ್ತು ಅನಿರೀಕ್ಷಿತ ಲಾಭಗಳನ್ನು ನಿರೀಕ್ಷಿಸಬಹುದು.

**ಮೀನ** ನಿಮ್ಮ ಸಾಮಾನ್ಯ ಜ್ಞಾನದ ಜೊತೆಗೆ ನಿಮ್ಮ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ. ಅನಿರೀಕ್ಷಿತ ಬಿಲ್‌ಗಳು ಹಣಕಾಸಿನ ಹೊರೆಯನ್ನು ಹೆಚ್ಚಿಸುತ್ತದೆ.

# ರಾಂಪುರ ಪ್ರಾಥಮಿಕ ಶಿಕ್ಷಣಕ್ಕಷ್ಟೇ ಸೀಮಿತ

• ಪ್ರೌಢ, ಪಿಯು ಹಾಗೂ ಪದವಿ ಶಿಕ್ಷಣಕ್ಕೆ ಇಲ್ಲಿನವರು ಖಾಸಗಿ ವಿದ್ಯಾಸಂಸ್ಥೆಗಳನ್ನೇ ಅವಲಂಬಿಸಬೇಕು, ಇಲ್ಲವೇ ಬಳ್ಳಾರಿ ಹೋಗಬೇಕಿದೆ

• ಉದಯವಾಹಿನಿ ಮೊಳಕಾಲ್ಮುರು

ಚಿತ್ರದುರ್ಗ ಜಿಲ್ಲೆಯ ದೊಡ್ಡ ಗ್ರಾಮಗಳಲ್ಲಿ ತಾಲ್ಲೂಕಿನ ರಾಂಪುರ ಕೂಡ ಒಂದು. ಇಲ್ಲಿ ಸರ್ಕಾರಿ ಪ್ರೌಢ ಶಾಲೆ, ಪದವಿಪೂರ್ವ ಹಾಗೂ ಪದವಿ ಕಾಲೇಜುಗಳೇ ಇಲ್ಲ. ಇದರಿಂದ ವಿದ್ಯಾರ್ಥಿಗಳು ತೊಂದರೆ ಅನುಭವಿಸುವಂತಾಗಿದೆ. ದೇವಸಮುದ್ರ, ಹೋಬಳಿ ವ್ಯಾಪ್ತಿಯ 30ಕ್ಕೂ ಹೆಚ್ಚು ಮತ್ತು ಕೂಡ್ಲಿಗಿ ಹಾಗೂ ಸಂಡೂರು ತಾಲ್ಲೂಕಿನ ಹತ್ತಾರು ಗ್ರಾಮಗಳಿಗೆ ರಾಂಪುರವೇ ಕೇಂದ್ರ ಸ್ಥಾನ.

**ಖಾಸಗಿ ಸಂಸ್ಥೆಗಳಿಗೆ ಲಾಭ**

ಇಲ್ಲಿ ಹಿರಿಯ ಪ್ರಾಥಮಿಕ ಹಂತದವರೆಗೆ ಮಾತ್ರ ಸರ್ಕಾರಿ ಶಾಲೆಯಲ್ಲಿ ಕಲಿಯಲು ಅವಕಾಶ ಇದೆ. ಪ್ರೌಢ, ಪಿಯು ಹಾಗೂ ಪದವಿ ಶಿಕ್ಷಣಕ್ಕೆ ಇಲ್ಲಿನವರು ಖಾಸಗಿ ವಿದ್ಯಾಸಂಸ್ಥೆಗಳನ್ನೇ ಅವಲಂಬಿಸಬೇಕು. ಇಲ್ಲವೇ ದೂರದ ಬಳ್ಳಾರಿ, ಚಳ್ಳಕೆರೆಗೆ ಹೋಗಬೇಕಿದೆ.

ರಾಂಪುರದಲ್ಲಿ 12 ಸಾವಿರಕ್ಕೂ ಹೆಚ್ಚು ಜನಸಂಖ್ಯೆಯಿದೆ. ಕೊಂಡಾಪುರ, ಬಸಾಪುರ, ವಿಠಲಾಪುರ, ವೆಂಕಟಾಪುರ, ಕಣಕುಪ್ಪೆ, ಶಿರೇಕೊಳ, ವೀರಾಪುರ, ಮೇಗಲಕಣಿವೆ, ಕೆಳಗಿನಕಣಿವೆ, ಪೆನ್ನಮ್ಮನಹಳ್ಳಿ ಸೇರಿದಂತೆ ಕೂಡ್ಲಿಗಿ ಮತ್ತು ಸಂಡೂರು ತಾಲ್ಲೂಕಿನ ಹಲವು ಗ್ರಾಮಗಳಿಗೂ ರಾಂಪುರವೇ ಕೇಂದ್ರ ಸ್ಥಳ, ಇಲ್ಲಿನ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರ್ಕಾರಿ ಕಾಲೇಜು ಆರಂಭಿಸಬೇಕಿದೆ. ಆದರೆ ಜನಪ್ರತಿನಿಧಿಗಳಿಗೆ ಈ ಕುರಿತು ಆಸಕ್ತಿಯೇ ಇಲ್ಲ. ಅಧಿಕಾರಿಗಳಲ್ಲೂ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುತ್ತಿದೆ. ಇದರಿಂದ ವಿದ್ಯಾರ್ಥಿಗಳು ಪಡಿಪಾಟಲು ಪಡಬೇಕಾಗಿದೆ' ಎಂದು ದಸಂಸ ಜಿಲ್ಲಾ ಸಂಚಾಲಕ ಕೊಂಡಾಪುರ ಪರಮೇಶ್ವರಪ್ಪ ದೂರುತ್ತಾರೆ.

ಸರ್ಕಾರದ ನಿರ್ಲಕ್ಷ್ಯದಿಂದಾಗಿ ಖಾಸಗಿ ಸಂಸ್ಥೆಗಳಿಗೆ ಲಾಭವಾಗುತ್ತಿದೆ. ಈ ಭಾಗವು ಮಳೆಯಾಶ್ರಿತವಾಗಿದ್ದು ಕೂಲಿ ಕಾರ್ಮಿಕರು, ದಿನಗೂಲಿಗಳೇ ಹೆಚ್ಚಾಗಿ ನೆಲೆಸಿದ್ದಾರೆ. ಖಾಸಗಿ ಕಾಲೇಜುಗಳಲ್ಲಿ ದುಬಾರಿ ಶುಲ್ಕ ಪಾವತಿಸಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಶಕ್ತಿ ಅವರಿಗಿಲ್ಲ. ಸರ್ಕಾರಿ ಶಾಲೆ ಅಥವಾ ಕಾಲೇಜು ಸ್ಥಾಪನೆಯಾದರೆ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಸಿಗುತ್ತದೆ. ಜೊತೆಗೆ ಸರ್ಕಾರದ ಇತರೆ ಸೌಲಭ್ಯಗಳು ಅವರಿಗೆ ಲಭಿಸುತ್ತವೆ' ಎಂದು ಹೇಳುತ್ತಾರೆ. ರಾಂಪುರದಲ್ಲಿ ಕೆಪಿಎಸ್‌ಸಿ ಶಾಲೆ ಆರಂಭಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ.

ಕಾಟನಾಯಕನಹಳ್ಳಿ ಹಾಗೂ ರಾಂಪುರದಲ್ಲಿ ಶಾಲೆ ಆರಂಭವಾಗುವ ಸಾಧ್ಯತೆಯಿದೆ. ಚುನಾವಣೆ ನಂತರ ಈ ಬಗ್ಗೆ ವಿವರ ಪಡೆಯುತ್ತೇವೆ –ತಿಪ್ಪೇಶ್ ಗ್ರಾ.ಪಂ. ಸದಸ್ಯ, ರಾಂಪುರ ಪ್ರತಿಭಟನೆ ಮಾಡಿದಾಗ ಮಾತ್ರ, ಒಂದೆರೆಡು ದಿನ ಬಸ್‌ಗಳು ಗ್ರಾಮದ ಒಳಗಡೆ ಬಂದು ಹೋದವು. ನಂತರ ಸಮಸ್ಯೆ ಮುಂದುವರಿದಿದೆ. ಸಹಾಯವಾಣಿ ಆರಂಭಿಸಿದ್ದರೂ ಮಾಹಿತಿ ಕೊರತೆಯಿಂದ ಸೌಲಭ್ಯ ಸಿಗುತ್ತಿಲ್ಲ.


ಉದಯವಾಹಿನಿ ಚಿತ್ರ

**ಜನಪ್ರತಿನಿಧಿಗಳು ತಮ್ಮ ಮನೋಧೋರಣೆ ಬದಲಿಸಲಿ**

ಗ್ರಾಮದ ಗಡ್ಡೆ ವೀರಭದ್ರಪ್ಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಳಿ ವಿಶಾಲ ಜಾಗವಿದೆ. ಇಲ್ಲಿಯೇ ಪ್ರೌಢ, ಪದವಿ ಕಾಲೇಜು ಆರಂಭಿಸಬಹುದು. ಆದರೆ ಇದಕ್ಕೆ ಜನಪ್ರತಿನಿಧಿಗಳ ಇಚ್ಛಾಶಕ್ತಿ ಅಗತ್ಯ, ಪ್ರೌಢಶಾಲೆ, ಪದವಿಪೂರ್ವ ಹಾಗೂ ಪದವಿ ಕಾಲೇಜು ಒದಗಿಸುವಂತೆ ಹಲವು ಬಾರಿ ಪ್ರತಿಭಟನೆ ನಡೆಸಿದರೂ ಸಂಬಂಧಪಟ್ಟವರು ಯಾವ ಕ್ರಮವನ್ನೂ ಕೈಗೊಂಡಿಲ್ಲ. ಇನ್ನಾದರೂ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ತಮ್ಮ ಮನೋಧೋರಣೆ ಬದಲಿಸಲಿ. ಈ ಶೈಕ್ಷಣಿಕ ವರ್ಷದಲ್ಲೇ ಶಾಲೆ, ಕಾಲೇಜು ಆರಂಭಕ್ಕೆ ಕ್ರಮ ಕೈಗೊಳ್ಳಲಿ' ಎಂದು ಕೊಂಡಾಪುರದ ಪರಮೇಶ್ವರಪ್ಪ ಮನವಿ ಮಾಡಿದರು.

> ಪಿಯು, ಪದವಿ, ಐಟಿಐ ಕಲಿಕೆಗಾಗಿ ಹೆಚ್ಚಿನ ವಿದ್ಯಾರ್ಥಿಗಳು ಬಳ್ಳಾರಿಗೆ ಹೋಗಬೇಕಾಗಿದೆ. ಹೀಗೆ ಪ್ರಯಾಣ ಕೈಗೊಳ್ಳುವವರು ಪ್ರತಿದಿನ ಬೆಳಿಗ್ಗೆ 6 ಇಲ್ಲವೇ 7 ಗಂಟೆ ವೇಳೆಗೇ ಬಸ್‌ಗಾಗಿ ಕಾದು ನಿಲ್ಲುತ್ತಾರೆ. ಇದು ಸಮಸ್ಯೆಯ ತೀವ್ರತೆಗೆ ಹಿಡಿದ ಕನ್ನಡಿಯಂತಿದೆ. ಸಮಯಕ್ಕೆ ಸರಿಯಾಗಿ ಬಸ್ ಬರುವುದಿಲ್ಲ. ಬಹುಪಾಲು ಬಸ್‌ಗಳು ಹೆದ್ದಾರಿಯ ಬೈಪಾಸ್ ಮೂಲಕವೇ ಹೋಗುವ ಕಾರಣ ವಿದ್ಯಾರ್ಥಿಗಳು ಪರಿತಪಿಸುವಂತಾಗಿದೆ. ಈ ಬಗ್ಗೆ ಸಾರಿಗೆ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ
> –ತಿಪ್ಪೇಶ್, ಗ್ರಾಮ ಪಂಚಾಯಿತಿ ಸದಸ್ಯ

## 18 ಅಭ್ಯರ್ಥಿಗಳ 26 ನಾಮಪತ್ರ ಕ್ರಮಬದ್ಧ, 5 ಜನರ ನಾಮಪತ್ರ ತಿರಸ್ಕೃತ

• ಉದಯವಾಹಿನಿ ಕಲಬುರಗಿ

ಗುಲಬರ್ಗಾ ಲೋಕಸಭಾ (ಪ.ಜಾ. ಮೀಸಲು) ಕ್ಷೇತ್ರಕ್ಕೆ 2024ರ ಮೇ 7ರಂದು ನಡೆಯಲಿರುವ ಚುನಾವಣೆಗೆ ಶನಿವಾರ ನಾಮಪತ್ರ ಪರಿಶೀಲನಾ ಕಾರ್ಯ ನಡೆದಿದ್ದು, 18 ಅಭ್ಯರ್ಥಿಗಳ 26 ನಾಮಪತ್ರಗಳು ಕ್ರಮಬದ್ಧವಾಗಿವೆ. ಉಳಿದಂತೆ 5 ಅಭ್ಯರ್ಥಿಗಳು ಒಳಗೊಂಡಂತೆ ಒಟ್ಟಾರೆ 10 ನಾಮಪತ್ರಗಳು ತಿರಸ್ಕೃತವಾಗಿವೆ ಎಂದು ಕಲಬುರಗಿ ಜಿಲ್ಲಾ ಚುನಾವಣಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ತಿಳಿಸಿದ್ದಾರೆ.

**ನಾಮಪತ್ರ ಪುರಸ್ಕೃತಗೊಂಡ ಅಭ್ಯರ್ಥಿಗಳ ವಿವರ:** ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ರಾಧಾಕೃಷ್ಣ ದೊಡ್ಡಮನಿ, ಭಾರತೀಯ ಜನತಾ ಪಾರ್ಟಿಯ ಅಭ್ಯರ್ಥಿ ಉಮೇಶ ಗೋಪಾಲದೇವ, ಭಾರತೀಯ ಜನ ಸಾಮ್ರಾಟ್ ಪಾರ್ಟಿ ಅಭ್ಯರ್ಥಿ ತಾರಾಬಾಯಿ ವಿಶ್ವೇಶ್ವರಯ್ಯ ಬೋವಿ, ಸೋಷಾಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಅಭ್ಯರ್ಥಿ ಶರಣಬಸಪ್ಪ ಮಲ್ಲಿಕಾಜಪ್ಪ, ಪ್ರಹಾರ್ ಜನಶಕ್ತಿ ಪಾರ್ಟಿ ಅಭ್ಯರ್ಥಿ ವಿಜಯಕುಮಾರ ಭೀಮಶಾ, ಉತ್ತಮ ಪ್ರಜಾಕೀಯ ಪಾರ್ಟಿ ಅಭ್ಯರ್ಥಿ ನಾಗೇಂದ್ರ ಎಚ್, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಭ್ಯರ್ಥಿ ವಿಜಯ ಗೋವಿಂದ ಜಾಧವ, ಭಾರತೀಯ ಬಹುಜನ ಕ್ರಾಂತಿ ದಳ ಅಭ್ಯರ್ಥಿ ರಾಜಕುಮಾರ ಗೋಪಿನಾಥ, ಬಹುಜನ್ ಸಮಾಜ ಪಾರ್ಟಿ ಅಭ್ಯರ್ಥಿ ಹುಚ್ಚಪ್ಪ ಬಸಪ್ಪ, ಸ್ವತಂತ್ರ ಅಭ್ಯರ್ಥಿಗಳಾದ ರಮೇಶ ಭೀಮಸಿಂಗ್, ವಿಲಾಸ ಎಂ. ಕಣಮಸ್ಕರ್, ಕಾಶಿನಾಥ ಸಾಯಬಣ್ಣ ಪಾಪಿ, ಆನಂದ ಸಿದ್ದಣ್ಣ, ಶರಣಬಸಪ್ಪ ಪೀರಪ್ಪ, ಶರಣಪ್ಪ ಮರಲಿಂಗಪ್ಪ, ವೆಂಕಟೇಶ್ವರರಾವ್ ಅಮೃತರಾವ್, ಜ್ಯೋತಿ ರಮೇಶ ಹಾಗೂ ಸುಂದರ ಮೇಘು ಅವರ ನಾಮಪತ್ರಗಳು ಪುರಸ್ಕೃತಗೊಂಡಿವೆ.

ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದ್ದ ಏಪ್ರಿಲ್ 19 ರವರೆಗೆ ಒಟ್ಟಾರೆ 23 ಅಭ್ಯರ್ಥಿಗಳಿಂದ 36 ನಾಮಪತ್ರಗಳು ಸಲ್ಲಿಕೆಯಾಗಿದ್ದವು. ನಾಮಪತ್ರಗಳನ್ನು ಹಿಂದಕ್ಕೆ ಪಡೆಯಲು ಏಪ್ರಿಲ್ 22 ಕೊನೆಯ ದಿನವಾಗಿದೆ.

**ತಿರಸ್ಕೃತ ಅಭ್ಯರ್ಥಿಗಳ ವಿವರ**

ಭಾರತೀಯ ಪೀಪಲ್ಸ್ ಪಾರ್ಟಿ ಅಭ್ಯರ್ಥಿ ಶಂಕರ ಲಿಂಬಾಜಿ ಜಾಧವ, ರಾಷ್ಟ್ರೀಯ ಸಮಾಜ ಪಕ್ಷ ಅಭ್ಯರ್ಥಿ ಶಿವಪುತ್ರ ಮರೆಪ್ಪ, ಸ್ವತಂತ್ರ ಅಭ್ಯರ್ಥಿಗಳಾದ ಶಶಿಧರ ಬಸವರಾಜ, ರವೀಂದ್ರ ಕಲ್ಲಯ್ಯ ಸ್ವಾಮಿ ಹಾಗೂ ಹುಸೇನಪ್ಪ ಬಂದೆಪ್ಪ ಅವರ ನಾಮಪತ್ರಗಳು ತಿರಸ್ಕೃತಗೊಂಡಿವೆ.

## ನೇಹಾ ಕೊಲೆ ಆರೋಪಿ ಪರ ವಕಾಲತು ವಹಿಸದಂತೆ ಮುಸ್ಲಿಂ ವಕೀಲರಿಗೆ ಅಂಜುಮನ್ ಸಂಸ್ಥೆ ಮನವಿ

• ಉದಯವಾಹಿನಿ ಹುಬ್ಬಳ್ಳಿ

ವಿದ್ಯಾರ್ಥಿನಿ ನೇಹಾ ಹಿರೇಮಠ್ ಕೊಲೆ ಪ್ರಕರಣಕ್ಕೆ ಅಂಜುಮನ್ ಸಂಸ್ಥೆಯ ಮುಖ್ಯಸ್ಥ ಎ.ಎಂ. ಹಿಂಡಸಗೇರಿ ನೇಹಾ ಕುಟುಂಬಸ್ಥರಲ್ಲಿ ಕ್ಷಮೆ ಯಾಚಿಸಿದ್ದಾರೆ. ಭಾನುವಾರ ನೇಹಾ ಪೋಷಕರನ್ನು ಭೇಟಿಯಾಗಿ ಸಾಂತ್ವನ ಹೇಳಿದ ಬಳಿಕ ಯಾವುದೇ ಮುಸ್ಲಿಂ ವಕೀಲರು ಕೊಲೆ ಆರೋಪಿಯ ಪರ ವಕಾಲತು ವಹಿಸಬಾರದು ಎಂದು ಮನವಿ ಮಾಡಿದರು.

ಮುಸ್ಲಿಂ ಸಮುದಾಯ ನೇಹಾ ಕುಟುಂಬದೊಡನೆ ನಿಲ್ಲಲಿದೆ. ಪ್ರಕರಣದ ಹಿಂದೆ ಯಾರಿದ್ದಾರೆಂದು ತನಿಖೆ ನಡೆಯಬೇಕು. ಆರೋಪಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಎ.ಎಂ. ಹಿಂಡಸಗೇರಿ ಹೇಳಿದರು.

ಜೊತೆಗೆ, ಲವ್ ಜಿಹಾದ್ ಎಂಬ ಪದವನ್ನು ಬಳಸಬಾರದು.

ಈ ಪ್ರಕರಣದಲ್ಲಿ ಯಾರೂ ರಾಜಕೀಯ ಮಾಡಬಾರದು ಎಂದು ಅಂಜುಮನ್ ಸಂಸ್ಥೆ ಮನವಿ ಮಾಡಿಕೊಂಡಿದೆ.


ಉದಯವಾಹಿನಿ ಚಿತ್ರ

## ರಾಜ್ಯದಲ್ಲಿ ಮಹಿಳೆಯರಿಗೆ ಸುರಕ್ಷತೆ ಇಲ್ಲ

• ಉದಯವಾಹಿನಿ ಚಿಕ್ಕೋಡಿ

ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆ ಪ್ರಕರಣದಿಂದ ರಾಜ್ಯದಲ್ಲಿ ಮಹಿಳೆಯರಿಗೆ ಸುರಕ್ಷತೆ ಇಲ್ಲ ಎಂಬ ಭಾವನೆ ಮೂಡುತ್ತಿದೆ. ಇಂಥ ಘಟನೆ ನಡೆಯುತ್ತಲೇ ಇದ್ದರೂ, ಕಾಂಗ್ರೆಸ್ ಸರ್ಕಾರ ಯಾವುದೇ ಕ್ರಮ ಜರುಗಿಸಿಲ್ಲ' ಎಂದು ಶಾಸಕಿ ಶಶಿಕಲಾ ಜೊಲ್ಲೆ ಆರೋಪಿಸಿದರು.

ಇಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಗೃಹ ಸಚಿವರ ಹೊಣೆಗಾರಿಕೆಯಾಗಿದೆ. ಹೀಗಿರುವಾಗ, ಇದೊಂದು ಆಕಸ್ಮಿಕ ಘಟನೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಬೇಜವಾಬ್ದಾರಿ ಹೇಳಿಕೆ ನೀಡಿದ್ದಾರೆ. ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿದರು. ರಾಜ್ಯದಲ್ಲಿ ಭೀಕರ ಬರ ಆವರಿಸಿದ್ದು, ಜನರಿಗೆ ಕುಡಿಯುವ ನೀರು ಸಿಗುತ್ತದೆ ಎಂಬ ಗ್ಯಾರಂಟಿ ಇಲ್ಲ. ರೈತರ ಬದುಕಿಗೆ ಗ್ಯಾರಂಟಿ ಇಲ್ಲ. ಹೆಣ್ಣು ಮಕ್ಕಳ ರಕ್ಷಣೆಗೂ ಗ್ಯಾರಂಟಿ ಇಲ್ಲ ಎಂದು ಆಪಾದಿಸಿದರು.

**ಪ್ರತಿಭಟನೆ ಇಂದು:** ನೇಹಾ ಕೊಲೆ ಪ್ರಕರಣ ಖಂಡಿಸಿ ಏ.22ರಂದು ಬೆಳಿಗ್ಗೆ 10ಕ್ಕೆ ಚಿಕ್ಕೋಡಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ. ಗಾಂಧಿ ಕಟ್ಟೆಯಿಂದ ಬಸವ ವೃತ್ತದವರೆಗೆ ಮೆರವಣಿಗೆ ನಡೆಯಲಿದ್ದು, 10 ಸಾವಿರಕ್ಕೂ ಹೆಚ್ಚು ಜನರು ಸೇರಲಿದ್ದಾರೆ' ಎಂದು ಹೇಳಿದರು.


ಉದಯವಾಹಿನಿ ಚಿತ್ರ

## ಅಕ್ರಮ 8.640 ಲೀಟರ್ ಮದ್ಯ ಜಪ್ತಿ

• ಉದಯವಾಹಿನಿ ಯಾದಗಿರಿ


ಭಾರತ ಚುನಾವಣಾ ಆಯೋಗವು ಸಾರ್ವತ್ರಿಕ ಲೋಕಸಭಾ ಚುನಾವಣೆ–2024 ಘೋಷಿಸಿ, 2024ರ ಮಾರ್ಚ್ 16 ರಿಂದ ನೀತಿ ಸಂಹಿತೆ ಜಾರಿಯಾದ ಹಿನ್ನೆಲೆಯಲ್ಲಿ ಚುನಾವಣೆ ಶಾಂತಿಯುತವಾಗಿ ನಿಷ್ಪಕ್ಷಪಾತವಾಗಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಕ್ರಮವಹಿಸಲು ಜಿಲ್ಲೆಯ ವ್ಯಾಪ್ತಿಯಲ್ಲಿ ನಕಲಿ ಮದ್ಯ, ಅಕ್ರಮ ಮದ್ಯ, ಕಲಬೆರಕೆ ಸೆಂದಿ, ಕಳ್ಳಭಟ್ಟಿ ಸಾರಾಯಿ ಹಾಗೂ ಇತರೆ ಅಬಕಾರಿ ಅಕ್ರಮ ಪದಾರ್ಥಗಳ ತಯಾರಿಕೆ ಸಾಗಾಣಿಕೆ ಸಂಗ್ರಹಣೆ ಹಾಗೂ ಮಾರಾಟಗಳಂತಹ ಅಕ್ರಮ ಚಟುವಟಿಕೆಗಳು ನಡೆಯದಂತೆ ಚುನಾವಣಾ ಆಯೋಗದ ನಿರ್ದೇಶನದಂತೆ ಕ್ರಮ ಕೈಗೊಂಡಿರುವ ಮಾಹಿತಿ ಸಲ್ಲಿಸಲಾಗಿದೆ ಎಂದು ಯಾದಗಿರಿ ಅಬಕಾರಿ ಉಪ ಆಯುಕ್ತೆ ಶಾರದಾ ಸಿ.ಕೋಲಕಾರ ಅವರು ತಿಳಿಸಿದ್ದಾರೆ. ಪ್ರಕರಣ ಸಂ.01, 2024ರ ಏಪ್ರಿಲ್ 19 ರಂದು ಮಾನ್ಯ ಅಬಕಾರಿ ಜಂಟಿ ಆಯುಕ್ತರು ಕಲಬುರಗಿ ವಿಭಾಗ, ಕಲಬುರಗಿ ಹಾಗೂ ಮಾನ್ಯ ಅಬಕಾರಿ ಉಪ ಆಯುಕ್ತರು, ಯಾದಗಿರಿ ಅವರು ನಿರ್ದೇಶನದ ಮೇರೆಗೆ ಶ್ರೀ ಆನಂದ ಉಕ್ಕಲಿ ಅಬಕಾರಿ ಉಪ ಅಧೀಕ್ಷಕರು ಉಪ ವಿಭಾಗ ಶಹಾಪೂರ ಅವರು ಮಾರ್ಗದರ್ಶನದಲ್ಲಿ ಖಚಿತ ಭಾತ್ಮಿಯ ಮೇರೆಗೆ ಶ್ರೀ ಸುರೇಶ ಕುಮಾರ ಮಳೇಕರ್ ಅಬಕಾರಿ ಉಪ ನಿರೀಕ್ಷಕರು, ಉಪ ವಿಭಾಗ ಶಹಾಪುರ, ಅಬಕಾರಿ ಮುಖ್ಯ ಪೇದೆಯಾದ ಶ್ರೀ ಮಡಿವಾಳಪ್ಪ, ವಾಹನ ಚಾಲಕರಾದ ಶ್ರೀ ವೆಂಕಟೇಶ ಹಾಗೂ ಗೃಹ ರಕ್ಷಕ ಸಿಬ್ಬಂದಿಯಾದ ಶ್ರೀ ದೇವೇಂದ್ರ ಚಾಕ್ರಿ, ಶ್ರೀ ಅಮಲಪ್ಪ ಮತ್ತು ಶ್ರೀ ಅಮಲಪ್ಪ ರೆಡ್ಡಿ, ಶ್ರೀ ರಾಮುಲು ರವರು ಕೂಡಿಕೊಂಡು ಶಹಾಪೂರ ಪಟ್ಟಣದ ಹಯ್ಯಾಳ ಗ್ರಾಮದಲ್ಲಿ ರಸ್ತೆಯಲ್ಲಿ ರಸ್ತೆಗಾವಲು ಮಾಡುತ್ತಿದ್ದಾಗ ದ್ವಿ ಚಕ್ರ ವಾಹನ ಸಂಖ್ಯೆ. ಕೆಎ–33 ಯು–3441 ನೇದ್ದರಲ್ಲಿ ಅಕ್ರಮವಾಗಿ 8.640 ಲೀಟರ್ ಮದ್ಯವನ್ನು ಮಾರಾಟದ ಉದ್ದೇಶದಿಂದ ಸಾಗಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ.

ಶ್ರೀ ಸುರೇಶ ಕುಮಾರ ಮಳೇಕರ್ ಅಬಕಾರಿ ಉಪ ನಿರೀಕ್ಷಕರು, ಉಪ ವಿಭಾಗ ಶಹಾಪುರ ಅವರು ಸದರಿ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಸರ್ಕಾರಿ ತರ್ಫೆ ಪಿರ್ಯದಿಯಾಗಿ ಗುನ್ನೆ ದಾಖಲಿಸಿಕೊಂಡ ಪ್ರಯುಕ್ತ ಈ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

## ಜಿಲ್ಲೆಯಾದ್ಯಂತ ಮದ್ಯ ಮಾರಾಟ ನಿಷೇಧ

• ಉದಯವಾಹಿನಿ ಚಿತ್ರದುರ್ಗ



ಚಿತ್ರದುರ್ಗ ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಏಪ್ರಿಲ್ 26ರಂದು ಮತದಾನ ನಡೆಯಲಿದೆ. ಮತದಾನ ದಿನ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಏಪ್ರಿಲ್ 24ರ ಸಂಜೆ 6 ಗಂಟೆಯಿಂದ ಏಪ್ರಿಲ್ 26 ಮಧ್ಯರಾತ್ರಿ 12 ಗಂಟೆಯವರೆಗೆ ಜಿಲ್ಲೆಯಾದ್ಯಂತ ಮದ್ಯ ಮಾರಾಟ ಮಾಡುವುದನ್ನು ನಿಷೇಧಿಸಿ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ, ಜಿಲ್ಲಾ ದಂಡಾಧಿಕಾರಿ ಟಿ.ವೆಂಕಟೇಶ್ ಆದೇಶಿಸಿದ್ದಾರೆ. ಎಲ್ಲಾ ಮದ್ಯದ ಅಂಗಡಿಗಳನ್ನು ಮುಚ್ಚಬೇಕು. ಯಾವುದೇ ತರಹದ ಬಾರ್ ಅಂಡ್ ರೆಸ್ಟೋರೆಂಟ್, ಕ್ಲಬ್ ಮತ್ತು ಹೋಟೆಲ್, ಡಾಬಾಗಳಲ್ಲಿ ಮದ್ಯ ಸಾಗಾಣಿಕೆ, ಶೇಖರಣೆ ಮತ್ತು ಮದ್ಯ ಮಾರಾಟ ಮಾಡುವಂತಿಲ್ಲ. ಆದೇಶ ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಎಚ್ಚರಿಸಿದ್ದಾರೆ.

## ನನ್ನ ಜೊತೆ ಮಾತಾಡಲ್ಲ ಅಂದಿದ್ದಕ್ಕೇ ಕೊಲೆ ಮಾಡಿದೆ: ನೇಹಾ ಹಂತಕ ಜೈಲಿನಲ್ಲಿ ಹೇಳಿಕೆ

• ಉದಯವಾಹಿನಿ ಹುಬ್ಬಳ್ಳಿ


ಉದಯವಾಹಿನಿ ಚಿತ್ರ

ತನ್ನೊಡನೆ ಮಾತನಾಡಲು ನಿರಾಕರಿಸಿದ ಕಾರಣಕ್ಕೆ ನೇಹಾಳನ್ನು ಚಾಕುವಿನಿಂದ ಚುಚ್ಚಿ ಕೊಲೆಗೈದಿರುವುದಾಗಿ ನೇಹಾ ಹಿರೇಮಠ್ ಹಂತಕ ಫಯಾಜ್ ಜೈಲಿನಲ್ಲಿ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾನೆ. ಏ. 18ರಂದು ಕಾಲೇಜು ಆವರಣದಲ್ಲಿಯೇ ನೇಹಾಳನ್ನು ಒಂಬತ್ತು ಬಾರಿ ಇರಿದು ಫಯಾಜ್ ಹತ್ಯೆಗೈದಿದ್ದ. ಘಟನೆ ನಡೆಯುವುದಕ್ಕೂ ಮುನ್ನ ಕಾಲೇಜು ಬಿಟ್ಟಿದ್ದ. ಒಂದು ವಾರದ ಹಿಂದೆ ಕಾಲೇಜಿನ ಬಳಿ ಹೋಗಿ ನೇಹಾಳ ಜೊತೆ ಮಾತನಾಡಿಸಲು ಯತ್ನಿಸಿದಾಗ ಅವಳು ನಿನ್ನ ಜೊತೆ ಮಾತನಾಡಲು ಇಷ್ಟವಿಲ್ಲ ಎಂದು ಅವಾಯ್ಡ್ ಮಾಡಿ ಹೊರಟು ಹೋಗಿದ್ದಳು. ಏ. 18 ರಂದು ಅವಳು ಪರೀಕ್ಷೆ ಬರೆಯಲು ಬಂದಿದ್ದಾಗ ಹೋಗಿ ಹತ್ತು ಬಾರಿ ಅವಳಿಗೆ ಚಾಕುವಿನಿಂದ ಚುಚ್ಚಿದೆ ಎಂದು ಫಯಾಜ್ ಹೇಳಿದ್ದಾನೆ.ಅವಳಿಗೆ ಚುಚ್ಚುವಾಗ ನನಗೂ ಸಹ ಕೈಬೆರಳುಗಳಿಗೆ ಗಾಯವಾಗಿದೆ ಎಂದು ಫಯಾಜ್ ಹೇಳಿಕೊಂಡಿದ್ದಾನೆ.

## ನೇಹಾ ಕೊಲೆ ಪ್ರಕರಣ ನಾಳೆ ಬೃಹತ್ ಪ್ರತಿಭಟನೆ: ಶಾಸಕ ಅಭಯ ಪಾಟೀಲ

• ಉದಯವಾಹಿನಿ ಬೆಳಗಾವಿ

ಮೊಘಲರ ಆಡಳಿತದಲ್ಲಿ ಹಿಂದೂ ಸಮುದಾಯದ ಹೆಣ್ಣು ಮಕ್ಕಳಿಗೆ ರಕ್ಷಣೆ ಇರಲಿಲ್ಲ. ಈಗ ಕಾಂಗ್ರೆಸ್ ಸರ್ಕಾರದಲ್ಲಿ ಆ ಪರಿಸ್ಥಿತಿ ತಲೆದೋರಿದೆ. ನೇಹಾ ಕೊಲೆ ಘಟನೆ ಖಂಡಿಸಿ, ನಗರದಲ್ಲಿ ಏಪ್ರಿಲ್ 22ರಂದು ಬೃಹತ್ ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದೇವೆ' ಎಂದು ಶಾಸಕ ಅಭಯ ಪಾಟೀಲ ಹೇಳಿದರು.

ಇಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಘಟನೆ ಬಗ್ಗೆ ಮುಕ್ತವಾಗಿ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಬೇಕಿತ್ತು. ಆದರೆ, ವೈಯಕ್ತಿಕ ಕಾರಣಕ್ಕೆ ನಡೆದಿದೆ ಎಂದು ಹೇಳಿಕೆ ನೀಡಿ ತಮ್ಮ ಜವಾಬ್ದಾರಿಯಿಂದ ಜಾರಿಕೊಳ್ಳುತ್ತಿರುವುದು ತಪ್ಪು? ಇನ್ನೂ ಈ ಘಟನೆಯನ್ನು ಕಾಂಗ್ರೆಸ್‌ನ ನಾಯಕರು ಖಂಡಿಸದಿರುವುದು ಸರಿಯಲ್ಲ' ಎಂದು ದೂರಿದರು.

ಬಿಜೆಪಿ ವಕ್ತಾರ ಎಂ.ಬಿ. ಝಿರಲಿ, ಹುಬ್ಬಳ್ಳಿಯಲ್ಲಿ ನಡೆದ ವಿದ್ಯಾರ್ಥಿನಿ ಕೊಲೆಯಿಂದ ರಾಜ್ಯದ ಎಲ್ಲಾ ಪಾಲಕರು ಆತಂಕಕ್ಕೆ ಒಳಗಾಗಿದ್ದಾರೆ. ನಮ್ಮ ಮಕ್ಕಳ ಸುರಕ್ಷತೆ ಹೇಗೆಂಬ ಪ್ರಶ್ನೆ ಅವರನ್ನು ಕಾಡುತ್ತಿದೆ. ಈ ಘಟನೆ ಬಗ್ಗೆ ಮುಕ್ತವಾಗಿ ತನಿಖೆ ಕೈಗೊಂಡು, ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಬೇಕು' ಎಂದು ಆಗ್ರಹಿಸಿದರು.


ಉದಯವಾಹಿನಿ ಚಿತ್ರ

**ಸಮಾಜಘಾತುಕ ಶಕ್ತಿಗಳ ಅಟ್ಟಹಾಸ**

ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರ ಹಿಡಿದ ನಂತರ, ಇಂಥ ಘಟನೆ ಹೆಚ್ಚುತ್ತಿವೆ. ವಿಧಾನಸಭೆಯಲ್ಲೇ ಪಾಕಿಸ್ತಾನ್ ಜಿಂದಾಬಾದ್ ಎನ್ನುವ ಘೋಷಣೆ ಮೊಳಗುತ್ತಿವೆ. ಡಿ.ಕೆ.ಸುರೇಶ ಅವರ ಪ್ರಚಾರ ರ್‍ಯಾಲಿಯಲ್ಲೂ ಪಾಕಿಸ್ತಾನ್ ಜಿಂದಾಬಾದ್ ಎಂಬ ಘೋಷಣೆ ಕೇಳಿಬಂದಿದೆ. ಹುಬ್ಬಳ್ಳಿಯ ಘಟನೆಯೊಂದೇ ಅಲ್ಲ. ರಾಜ್ಯದಲ್ಲಿ ಸಮಾಜಘಾತುಕ ಶಕ್ತಿಗಳು ಅಟ್ಟಹಾಸ ಮೆರೆದಾಗಲೆಲ್ಲ ನಾವು ವಿರೋಧಿಸಿದ್ದೇವೆ. ಪಕ್ಷದ ನಾಯಕರೆಲ್ಲ ಒತ್ತಡ ತಂದು, ಆರೋಪಿಗಳಿಗೆ ಶಿಕ್ಷೆ ಕೊಡಿಸಿದ್ದೇವೆ ಎಂದರು.

## ಜೇವರ್ಗಿಯಲ್ಲಿ ಜೆಡಿಎಸ್ ಪಕ್ಷ ಸ್ವಾಭಿಮಾನಿ ಸಮಾವೇಶ

• ಉದಯವಾಹಿನಿ ಜೇವರ್ಗಿ

ಜೆಡಿಎಸ್ ಪಕ್ಷದ ಕಾರ್ಯಕರ್ತರು ಪೇಮೆಂಟ್ ಕಾರ್ಯಕರ್ತರಲ್ಲ ಪರಮೆಂಟ್ ಕಾರ್ಯಕರ್ತರು ಅವರ ಸ್ವಾಭಿಮಾನ ನನಗೆ ದೊಡ್ಡ ಶಕ್ತಿ ಎಂದು ಮಾಜಿ ಶಾಸಕರು ಹಾಗೂ ಜೆಡಿಎಸ್ ಪಕ್ಷದ ಕಾರ್ಯಾಧ್ಯಕ್ಷರು ದೊಡ್ಡಪ್ಪಗೌಡ ಪಾಟೀಲ ನರಿಬೋಳ ಬಸವೇಶ್ವರ ಕಂಕರ್ ಮಿಷನ್ ಆವರಣದಲ್ಲಿ ಸ್ವಾಭಿಮಾನಿ ಸಮಾವೇಶ ಉದ್ದೇಶಿಸಿ ಮಾತನಾಡಿದರು.

ರಾಜ್ಯದಲ್ಲಿ ಜೆಡಿಎಸ್ ಪಕ್ಷದ ವರಿಷ್ಠರು ಎನ್‌ಡಿಎ ಮೈತ್ರಿಕೂಟ ಒಪ್ಪಂದ ಮಾಡಿಕೊಂಡಿದ್ದು ಆ ಒಪ್ಪಂದದ ಪ್ರಕಾರ ಎನ್ ಡಿ ಎ ಕಲ್ಬುರ್ಗಿ ಲೋಕಸಭಾ ಅಭ್ಯರ್ಥಿ ಡಾಕ್ಟರ್ ಉಮೇಶ್ ಜಾದವ್ ಅವರನ್ನು ಬೆಂಬಲಿಸಿ ಮೋದಿಗೆ ಪ್ರಧಾನಮಂತ್ರಿ ಮಾಡೋಣ ಎಂದು ಹೇಳಿದರು. ಎಂಎಲ್‌ಸಿಗಳಾದ ರಘುನಾಥ್ ಮಲ್ಕಾಪುರೆ ಮಾತನಾಡಿ ನಮ್ಮ ಪಕ್ಷದವರ ತಪ್ಪಿನಿಂದ ತೊಂದರೆ ಆಗಿದೆ ದೊಡ್ಡಪ್ಪ ಗೌಡರಿಗೆ ಆದರೆ ಇನ್ನು ಮುಂದೆ ಯಾವುದೇ ತೊಂದರೆಯಾಗದಂತೆ ನಾವು ನೋಡಿಕೊಳ್ಳುತ್ತೇವೆ.

ಹಿಂದೆ ಹಾಕಿದ ಕಣ್ಣೀರು ಮುಂದೆ ಯಾವತ್ತೂ ಹಾಕಬಾರದು ಇದು ಮತದಾರರ ಕೈಯಲ್ಲಿದೆ ಎಂದು ಹೇಳಿದರು. ಎಲ್ಲರೂ ಕೂಡಿ ಎಲ್ ಡಿ ಎ ಅಭ್ಯರ್ಥಿ ಡಾಕ್ಟರ್ ಉಮೇಶ್ ಜಾಧವವರನ್ನು ಹೆಚ್ಚಿನ ಅಂತರದಿಂದ ಲೋಕಸಭೆಗೆ ಆರಿಸಿ ಕಳಿಸೋಣ ಎಂದು ಹೇಳಿದರು.


ಉದಯವಾಹಿನಿ ಚಿತ್ರ

## ನೇಹಾ ಕೊಲೆ ಪ್ರಕರಣದಲ್ಲಿ ಆರೋಪಿ ಮುಸ್ಲಿಂ ಆಗಿರುವುದರಿಂದಲೇ ವಿವಾದ: ಲಾಡ್

• ಉದಯವಾಹಿನಿ ಬಿಜಾಪುರ

ಹುಬ್ಬಳ್ಳಿಯಲ್ಲಿ ನಡೆದ ನೇಹಾ ಹಿರೇಮಠ ಕೊಲೆ ಪ್ರಕರಣದಲ್ಲಿ ಆರೋಪಿ ಮುಸ್ಲಿಮನಾಗಿರುವುದರಿಂದಲೇ ಈ ಘಟನೆ ದೇಶಾದ್ಯಂತ ಚರ್ಚೆಗೊಳಗಾಗಿದೆ ಎಂದು ಸಚಿವ ಸಂತೋಷ್ ಲಾಡ್ ಹೇಳಿದ್ದಾರೆ. ಬಿಜಾಪುರದಲ್ಲಿ ಇಂದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು ಈ ಹಿಂದೆ ಇಂಥಾ ಪ್ರಕರಣಗಳು ಎಷ್ಟೋ ನಡೆದಿವೆ ಎಂದರು.



ಬಿಜೆಪಿ ಈ ಪ್ರಕರಣವನ್ನು ತನ್ನ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲು ಯತ್ನಿಸುತ್ತಿದೆ ಎಂದು ಆರೋಪಿಸಿದ ಸಂತೋಷ್ ಲಾಡ್, ಕೊಲೆಯಾದ ಹೆಣ್ಣು ಮಗಳ ಬಗ್ಗೆ ಬಿಜೆಪಿಗೆ ಕಿಂಚಿತ್ತೂ ಕಾಳಜಿಯಿಲ್ಲ ಎಂದು ಟೀಕಿಸಿದರು.

ನೇಹಾ ಕೊಲೆ ಪ್ರಕರಣ ಇಂದು ದೇಶಾದ್ಯಂತ ಚರ್ಚೆಗೊಳಗಾಗುತ್ತಿದೆ. ಬೇರೆ ಎಲ್ಲೂ ಹತ್ಯೆ ಪ್ರಕರಣಗಳು ನಡೆದೇ ಇಲ್ಲವೇ ಎಂದು ಪ್ರಶ್ನಿಸಿರುವ ಸಂತೋಷ್ ಲಾಡ್, ಇದೇ ಸುದ್ದಿ ದೇಶಾದ್ಯಂತ ಹೈಪ್ ಆಗಲು ಹಿಂದೂ ಹೆಣ್ಣು ಮಕ್ಕಳ ಪರ ಬಿಜೆಪಿಯವರ ಸಿಂಪಥಿ ಕಾರಣವಲ್ಲ. ಹಿಂದೂಗಳಿಗೆ ಏನಾದರೂ ಬಿಜೆಪಿ ಸುಮ್ಮನೇ ಇರುತ್ತೆ. ಮುಸ್ಲಿಂ ಹುಡುಗ ಹತ್ಯೆ ಮಾಡಿದ್ದಾನೆಂಬುದೇ ಬಿಜೆಪಿ ಪ್ರತಿಭಟನೆಗೆ ಕಾರಣ ಎಂದರು.

# ರಾಜ್ಯ ಸರ್ಕಾರದ ವಿರುದ್ಧ ಚಿಪ್ಪು ಚಳವಳಿ: ಎನ್.ರವಿಕುಮಾರ್

ಕಾಂಗ್ರೆಸ್ ಸರ್ಕಾರ ನೀಡಿರುವ ಚೊಂಬು ಜಾಹೀರಾತನ್ನು ವಿರೋಧಿಸಿ ಬಿಜೆಪಿಯು ತೆಂಗಿನಕಾಯಿ ಚಿಪ್ಪು ಪ್ರದರ್ಶಿಸಿ ಪ್ರತಿಭಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ದಾವಣಗೆರೆ

ಕಾಂಗ್ರೆಸ್ ಸರ್ಕಾರ ನೀಡಿರುವ ಚೊಂಬು ಜಾಹೀರಾತನ್ನು ವಿರೋಧಿಸಿ ಬಿಜೆಪಿಯು ತೆಂಗಿನಕಾಯಿ ಚಿಪ್ಪು ಪ್ರದರ್ಶಿಸಿ ಏ.22ರಂದು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಹೇಳಿದರು.

**ಏ.22ರಂದು ರಾಜ್ಯದಾದ್ಯಂತ ಪ್ರತಿಭಟನೆ**

ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ, ಬರಗಾಲದ ಸಂದರ್ಭ ಪರಿಹಾರ ನೀಡಿಲ್ಲ, ಕಿಸಾನ್ ಸಮ್ಮಾನ್ ಯೋಜನೆಯಡಿ ಕೇಂದ್ರ ಸರ್ಕಾರದ 6000ಗಳನ್ನು ಬಿಟ್ಟರೆ ಬಿಜೆಪಿ ಸರ್ಕಾರವಿದ್ದಾಗ ನೀಡುತ್ತಿದ್ದ 4000ಗಳನ್ನು ರದ್ದು ಮಾಡಿ, ರೈತರಿಗೆ ಚಿಪ್ಪು ನೀಡಿದೆ. ವಿದ್ಯಾರ್ಥಿವೇತನ ರದ್ದು ಮಾಡುವ ಮೂಲಕ ವಿದ್ಯಾರ್ಥಿಗಳಿಗೆ, ಹಾಲಿನ ಪ್ರೋತ್ಸಾಹ ಧನ ರದ್ದು ಮಾಡಿ ಹಾಲು ಉತ್ಪಾದಕರಿಗೆ, ಪರಿಶಿಷ್ಟರಿಗೆ ಮೀಸಲಿಟ್ಟಿದ್ದ 11,146 ಕೋಟಿಯನ್ನು ಬೇರೆ ಯೋಜನೆಗಳಿಗೆ ವರ್ಗಾಯಿಸುವ ಮೂಲಕ ಪರಿಶಿಷ್ಟರಿಗೆ, ವೃದ್ಧಾಪ್ಯ ವೇತನ ನೀಡದೇ ವೃದ್ಧರ ಕೈಗೂ ಈ ಸರ್ಕಾರ ಚಿಪ್ಪು ನೀಡಿದೆ. ಇದನ್ನು ಖಂಡಿಸಿ ದಾವಣಗೆರೆಯಲ್ಲಿ ಬೃಹತ್ ಚಳವಳಿ ಹಮ್ಮಿಕೊಳ್ಳಲಾಗುವುದು ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬಿಜೆಪಿ ರೈತರು, ಮಹಿಳೆಯರು ಹಾಗೂ ದಲಿತರಿಗೆ ಅಕ್ಷಯ ಪಾತ್ರೆಯನ್ನು ನೀಡಿದರೆ, ಜನರ ಕೈಗೆ ಚಿಪ್ಪು ನೀಡಿದರೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಜನರು ಕಾಂಗ್ರೆಸ್‌ಗೆ ಚಿಪ್ಪು ಕೊಡುತ್ತಾರೆ ಎಂದು ವ್ಯಂಗ್ಯವಾಡಿದರು.

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹಳಿ ತಪ್ಪಿದ್ದು, ಯುವತಿಯರು, ಮಹಿಳೆಯರಿಗೆ ರಕ್ಷಣೆ ಇಲ್ಲದಂತಾಗಿದೆ. ಇದಕ್ಕೆ ಹುಬ್ಬಳ್ಳಿಯಲ್ಲಿ ನಡೆದ ನೇಹಾ ಹಿರೇಮಠ್ ಹತ್ಯೆಯೇ ಸಾಕ್ಷಿ . ಪ್ರೀತಿಸಲು ಒಪ್ಪಲಿಲ್ಲ ಎಂಬ ಕಾರಣಕ್ಕೆ ಅಲ್ಪಸಂಖ್ಯಾತ ಸಮುದಾಯದ ಫಯಾಜ್ ಎಂಬಾತ ಹಾಡುಹಗಲೇ 9 ಬಾರಿ ಚುಚ್ಚಿ ಸಾಯಿಸಿದ್ದಾನೆ. ಆದರೆ ರಾಜ್ಯ ಗೃಹ ಸಚಿವರು ಇದು ವೈಯಕ್ತಿಕ ವಿಷಯ ಎಂದು ತೇಪೆ ಹಚ್ಚಲು ಮುಂದಾಗಿದ್ದಾರೆ. ಉಗ್ರಗಾಮಿಗಳಿಗೆ, ಭಯೋತ್ಪಾದಕರಿಗೆ 'ಮೈ ಬ್ರದರ್'' ನೀತಿ ಅನುಸರಣೆ ಮಾಡುತ್ತಿರುವುದರಿಂದ ದುಷ್ಕೃತ್ಯಗಳು ಜಾಸ್ತಿಯಾಗಿವೆ ಎಂದು ದೂರಿದರು.

ಜಿಲ್ಲಾ ಘಟಕದ ಅಧ್ಯಕ್ಷ ಎನ್. ರಾಜಶೇಖರ್ ನಾಗಪ್ಪ, ಪ್ರಧಾನ ಕಾರ್ಯದರ್ಶಿಗಳಾದ ಧನಂಜಯ ಕಡ್ಲೇಬಾಳು, ಅನಿಲ್ ಕುಮಾರ್ ನಾಯ್ಕ, ಮಾಜಿ ಮೇಯರ್ ಎಸ್.ಟಿ. ವೀರೇಶ್, ವಕ್ತಾರ ಬಿ.ಎಂ. ಸತೀಶ್, ಮಹಾನಗರ ವಿರೋಧ ಪಕ್ಷದ ನಾಯಕ ಕೆ. ಪ್ರಸನ್ನ ಕುಮಾರ್, ಎಚ್.ಪಿ. ವಿಶ್ವಾಸ್ ಸುದ್ದಿಗೋಷ್ಠಿಯಲ್ಲಿದ್ದರು.

**ರಾಜಕೀಯದಿಂದಲೇ ನಿವೃತ್ತಿ**

ನಾನು ಭ್ರಷ್ಟಾಚಾರ ಮಾಡಿದ್ದೇನೆ ಎಂದು ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದ್ದಾರೆ. ನಾನು ಭ್ರಷ್ಟಾಚಾರ ಮಾಡಿದ್ದಾರೆ ಎಂದು ಸಾಬೀತುಪಡಿಸಿದರೆ ನಾನು ರಾಜಕೀಯದಿಂದಲೇ ನಿವೃತ್ತಿ ಆಗುತ್ತೇನೆ. ಜಿಲ್ಲಾ ಉಸ್ತುವಾರಿ ಸಚಿವರು ಗ್ರಾಮ ಪಂಚಾಯತಿ ಸದಸ್ಯರಾಗಲೂ ಲಾಯಕ್ಕಿಲ್ಲ ಎಂದು ವಾಗ್ದಾಳಿ ನಡೆಸಿದರು.


> ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವರಾದ ಹತ್ತು ತಿಂಗಳಲ್ಲಿ ಏನು ಕೊಡುಗೆ ನೀಡಿದ್ದಾರೆ ಎಂಬುದನ್ನು ಪ್ರಶ್ನಿಸ ಬೇಕಾಗುತ್ತದೆ. ಅರ್ಧಂಬರ್ಧ ಕುಂದುವಾಡ ಕೆರೆ ಮಾಡಿ ಮಲ್ಲಿಕಾರ್ಜುನ ಸಾಗರ ಎಂದು ಹೆಸರಿಟ್ಟಿದ್ದರು. ಸ್ಮಾರ್ಟ್ ಸಿಟಿ ಯೋಜನೆಯಡಿ ಅದನ್ನು ಅಭಿವೃದ್ಧಿಪಡಿಸಿದೆವು ಎಂದು ಹೇಳಿದರು. –ಜಿ.ಎಂ. ಸಿದ್ದೇಶ್ವರ

> ಎಸ್.ಎಸ್. ಮಲ್ಲಿಕಾರ್ಜುನ್ ಅವರು ಸಚಿವರಾದ ಮೇಲೆ ಜಿಲ್ಲೆಗೆ ಏನು ಕೊಡುಗೆ ನೀಡಿದ್ದಾರೆ ಎಂಬುದನ್ನು ತಿಳಿಸಲಿ. ಸಂಸದರು ದಾವಣಗೆರೆಗೆ ಸರ್ಕಾರಿ ವೈದ್ಯಕೀಯ ಕಾಲೇಜುಗೆ ಯತ್ನಿಸಿದರೆ ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಕಾಲೇಜಿಗೆ ಅಡ್ಡಿ ಆಗುತ್ತದೆ ಎಂದು ತಡೆಯುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ದೂರಿದರು.
> –ಎನ್. ರವಿಕುಮಾರ್

# ಐಎನ್‌ಡಿಐಎ ಮೈತ್ರಿಕೂಟ ರಚಿಸಿದ್ದೇ ನಾನು: ಕೈಗೆ ಮಮತಾ ಟಾಂಗ್

## ಕಾಂಗ್ರೇಸ್ ವಿರುದ್ಧ ಮಮತಾ ಬ್ಯಾನರ್ಜಿ ವಾಗ್ದಾಳಿ, ಕಾಂಗ್ರೇಸ್, ಸಿಪಿಎಂ ಎರಡೂ ಪಕ್ಷಗಳನ್ನು ರಾಜ್ಯದಲ್ಲಿ ನಾನು ನಂಬುವುದಿಲ್ಲ

100 ದಿನಗಳ ಕೆಲಸ



**ಕೋಲ್ಕತಾ:** ಐಎನ್‌ಡಿಐಎ ಮೈತ್ರಿಕೂಟವನ್ನು ನಾನು ರಚಿಸಿದ್ದೇ ಹೊರತು ಬೇರಾರೂ ಅಲ್ಲ. ಮೈತ್ರಿ ಕೂಟ ಗೆಲುವು ಸಾಧಿಸಿದರೆ ನಾವು ಅದನ್ನು ಮತ್ತೆ ಪುನಶ್ಚೇತನಗೊಳಿಸುತ್ತೇವೆ. ಆದರೆ ಬಂಗಾಳದಲ್ಲಿ ಅಲ್ಲ. ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷವು ಬಿಜೆಪಿ ವಿರುದ್ಧ ಏಕಾಂಗಿಯಾಗಿ ಹೋರಾಡುತ್ತಿದೆ ಎಂದು ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಬಂಗಾಳ ಕಾಂಗ್ರೆಸ್, ಸಿಪಿಎಂ ಎರಡಕ್ಕೂ ಮಮತಾ ಬ್ಯಾನರ್ಜಿ ಕಂಡರೆ ಅಲರ್ಜಿ ಎಂದು ಟೀಕಿಸಿರುವ ದೀದಿ, ಈ ಎರಡೂ ಪಕ್ಷಗಳನ್ನು ರಾಜ್ಯದಲ್ಲಿ ನಂಬುವುದಿಲ್ಲ ಎಂದಿದ್ದಾರೆ.

ಅವರು ಬಿಜೆಪಿ ಯೋಜನೆಯ ಭಾಗವಾಗಿದ್ದಾರೆ. ತಾನು ಸ್ಪರ್ಧಿಸುತ್ತಿರುವ ಕ್ಷೇತ್ರಗಳಲ್ಲಿ ಕಾಂಗ್ರೇಸ್ ಉತ್ತಮ ಹೋರಾಟ ನೀಡಬೇಕು. ನಾನು ಅದಕ್ಕೆ ಸಂಪೂರ್ಣ ಬೆಂಬಲ ನೀಡುತ್ತೇನೆ. ಆದರೆ ಅದು ಬಂಗಾಳಕ್ಕೆ ಬಂದು ಟಿಎಂಸಿಯ ಮತಗಳನ್ನು ತಿನ್ನಬಾರದು ಮಮತಾ ಆಗ್ರಹಿಸಿದರು. ಕಾಂಗ್ರೇಸ್ ಮತ್ತು ಸಿಪಿ ಎಂ ಪಕ್ಷಗಳು ಯಾವ ಪ್ರಭಾವವನ್ನೂ ಬೀರಲಾರವು. ಅವು ಪರಸ್ವರ ಮಾತ್ರ ಮುಖ್ಯವಾಗಿದೆಯೇ ವಿನಾ ಬೇರಾರಿಗೂ ಅಲ್ಲ ಎಂದು ಮಾಲ್ದಾದಲ್ಲಿ ನಡೆದ ರಾಲಿಯಲ್ಲಿ ಅವರು ಟೀಕಿಸಿದರು. ಕಳೆದ ಮೂರು ವರ್ಷಗಳಿಂದ 100 ದಿನಗಳ ಕೆಲಸ, ಆವಾಸ್ ಯೋಜನೆಗಳ ನಮ್ಮ ಪಾಲಿನ ಬಾಕಿ ಹಣವನ್ನು ಬಿಡುಗಡೆ ಮಾಡುವುದನ್ನು ಬಿಜೆಪಿ ಸರ್ಕಾರ ನಿಲ್ಲಿಸಿದೆ. ಚುನಾಯಿತ ಕಾಂಗ್ರೇಸ್ ನಾಯಕರು ಈ ಬಗ್ಗೆ ತಮ್ಮ ಧ್ವನಿ ಎತ್ತಿದ್ದರೇ ಸಿಪಿಎಂ ಎಂದಾದರೂ ತನ್ನ ಬಾಯಿ ಬಿಟ್ಟಿದೆಯೇ ಅವರು ಟಿಎಂಸಿ ಗೆಲ್ಲುವುದನ್ನು ಬಯಸಿಲ್ಲ. ಏಕೆಂದರೆ ಟಿಎಂಸಿ ಗೆದ್ದರೆ, ಅದು ಬಿ ಜೆ ಪಿ ಪ್ರಧಾನ ವಿರೋಧ ಪಕ್ಷವಾಗುತ್ತದೆ. ಎನ್‌ಆರ್‌ಸಿ ಘೋಷಣೆ ಮಾಡಿದಾಗ ಇತರೆ ಪಕ್ಷಗಳು ಎಲ್ಲಿದ್ದವು? ನಾವು ರಸ್ತೆಗೆ ಇಳಿದಿದ್ದೆವು. ಅಸ್ಸಾಂಗೆ ಹೋದವರು ನಾವು. ನಮ್ಮ ಸಂಸದರು ಈ ಬಗ್ಗೆ ಹೋರಾಟ ನಡೆಸಿದ್ದರು ಎಂದು ಐಎನ್‌ಡಿಐಎ ಮೈತ್ರಿಕೂಟದ ಪಾಲುದಾರ ಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದರು. ಟಿಎಂಸಿ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಮಾತನಾಡಿ, 2019ರಲ್ಲಿ ಕಾಂಗ್ರೇಸ್ ಮತ್ತು ಸಿಪಿಎಂ ಪಕ್ಷಗಳು ಜನರನ್ನು ತಪ್ಪುದಾರಿಗೆ ಎಳೆದಿದ್ದವು. ಹೀಗಾಗಿ ರಾಯಗಂಜ್ ಕ್ಷೇತ್ರ ಬಿಜೆಪಿ ಪಾಲಾಯಿತು. ರಾಯಗಂಜ್‌ನಲ್ಲಿ ಟಿಎಂಸಿ ಗೆಲ್ಲುತ್ತಿತ್ತು. ಆದರೆ ಸಿಪಿಎಂ ಇಲ್ಲಿಂದ 1.8 ಲಕ್ಷ ಮತಗಳನ್ನು ಕಬಳಿಸಿದರೆ, ಕಾಂಗ್ರೇಸ್ 83 ಸಾವಿರ ಮತಗಳನ್ನು ಎಳೆದುಕೊಂಡಿತು. ಒಟ್ಟಾಗಿ ಅವರು 2.7 ಲಕ್ಷ ಮತಗಳನ್ನು ದೋಚಿದರು. ಇದರಿಂದ ನಮಗೆ ಸೀಟು ನಷ್ಟವಾಯಿತು ಎಂದು ಆರೋಪಿಸಿದರು.

**ಕಡ್ಡಿ ಮುರಿದಂತೆ ಹೇಳಿಕೆ**

**ಪಶ್ಚಿಮ ಬಂಗಾಳದಲ್ಲಿ ಕಾಂಗ್ರೇಸ್, ಸಿಪಿಎಂ ಜತೆ ಒಂದೇ ಒಂದು ಸೀಟಿನಲ್ಲಿ ಕೂಡ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ ಎಂದು ಕಡ್ಡಿ ಮುರಿದಂತೆ ಹೇಳಿ, ಏಕಾಂಗಿಯಾಗಿ ಕಣಕ್ಕಿಳಿದಿರುವ ಸಿಎಂ ಮಮತಾ ಬ್ಯಾನರ್ಜಿ, ಐಎನ್‌ಡಿಐಎ ಮೈತ್ರಿಕೂಟದ ಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಅಲ್ಲದೆ, ಈ ಮೈತ್ರಿಕೂಟವನ್ನು ರಚಿಸಿದ್ದೇ ತಾವು ಎಂದು ಹೇಳಿಕೊಂಡಿದ್ದಾರೆ.**

# ಬಹುಕೋಟಿ ಮದ್ಯ ಹಗರಣದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಅರೆಸ್ಟ



**ರಾಯ್‌ಪುರ:** ಸುಮಾರು 2,000 ಕೋಟಿ ರೂಪಾಯಿ ಮದ್ಯದ ಹಗರಣ ಸಂಬಂಧ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಛತ್ತೀಸ್‌ಗಢದ ನಿವೃತ್ತ ಐಎಎಸ್ ಅಧಿಕಾರಿ ಅನಿಲ್ ತುತೇಜಾ ಅವರನ್ನು ಬಂಧಿಸಿದೆ . 2003 ರ ಬ್ಯಾಚ್ ಅಧಿಕಾರಿಯನ್ನು ಆರ್ಥಿಕ ಅಪರಾಧಗಳ ವಿಭಾಗ (ಇಒಡಬ್ಲ್ಯು)/ಭ್ರಷ್ಟಾಚಾರ ವಿರೋಧಿ ಬ್ಯೂರೋ (ಎಸಿಬಿ) ರಾಯ್‌ಪುರದ ಕಚೇರಿಯಿಂದ ಬಂಧಿಸಿದೆ.

ಅನಿಲ್ ತುತೇಜಾ ಮತ್ತು ಅವರ ಮಗ ಯಶ್ ತುತೇಜಾ ತಮ್ಮ ಹೇಳಿಕೆಗಳನ್ನು ದಾಖಲಿಸಿಕೊಂಡ ನಂತರ ಅವರನ್ನು ಬಂಧಿಸಲಾಗಿದೆ. ನಿವೃತ್ತ ಐಎಎಸ್ ಅಧಿಕಾರಿಯನ್ನು ವಿಚಾರಣೆಗೊಳಪಡಿಸಲಾಯಿತು ಮತ್ತು ನಂತರ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ವಿಚಾರಣೆ ಬಳಿಕ ಯಶ್ ತುತೇಜಾಗೆ ತೆರಳಲು ಅವಕಾಶ ನೀಡಲಾಯಿತು.

ಅನಿಲ್ ತುತೇಜಾ ಅವರನ್ನು ನಗರದ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸುವ ನಿರೀಕ್ಷೆಯಿದೆ, ಕಸ್ಟಡಿಗೆ ಕೋರುತ್ತದೆ ಎಂದು ಮೂಲಗಳು ತಿಳಿಸಿವೆ. ಅಧಿಕಾರಿ ಕಳೆದ ವರ್ಷ ಸೇವೆಯಿಂದ ನಿವೃತ್ತರಾಗಿದ್ದರು. ಅವರನ್ನು ಕೊನೆಯದಾಗಿ ಛತ್ತೀಸ್‌ಗಢದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಜಂಟಿ ಕಾರ್ಯದರ್ಶಿಯಾಗಿ ನೇಮಿಸಲಾಗಿತ್ತು.

ಆದಾಯ ತೆರಿಗೆ ಇಲಾಖೆಯ ದೂರಿನ ಆಧಾರದ ಮೇಲೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ತನ್ನ ಹಿಂದಿನ ಎಫ್‌ಐಆರ್ ಅನ್ನು ರದ್ದುಗೊಳಿಸಿದ ನಂತರ ಇಡಿ ಆಪಾದಿತ ಮದ್ಯ ಹಗರಣ ಪ್ರಕರಣದಲ್ಲಿ ಹೊಸ ಹಣ ವರ್ಗಾವಣೆ ಪ್ರಕರಣವನ್ನು ದಾಖಲಿಸಿದೆ. ಯಾವುದೇ ನಿಗದಿತ ಅಪರಾಧವಿಲ್ಲ ಮತ್ತು ಆದ್ದರಿಂದ ಮನಿ ಲಾಂಡರಿಂಗ್ ಪ್ರಕರಣವು ನಿಲ್ಲುವುದಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

**2,161 ಕೋಟಿ ರೂ. ಆದಾಯ**

**ಈ ಪ್ರಕರಣದಲ್ಲಿ 2,161 ಕೋಟಿ ರೂ.ಗಳಷ್ಟು ಅಪರಾಧದ ಆದಾಯ ಇದೆ ಎಂದು ಇಡಿ ಅಂದಾಜಿಸಿದೆ. ಛತ್ತೀಸ್‌ಗಢದಲ್ಲಿ ಮಾರಾಟವಾದ ಪ್ರತಿ ಮದ್ಯದ ಬಾಟಲಿಯಿಂದ ಕಾನೂನುಬಾಹಿರವಾಗಿ ಹಣವನ್ನು ಸಂಗ್ರಹಿಸಲಾಗಿದೆ ಮತ್ತು ರಾಯ್‌ಪುರ ಮೇಯರ್ ಮತ್ತು ಕಾಂಗ್ರೇಸ್ ನಾಯಕ ಐಜಾಜ್ ಅವರ ಹಿರಿಯ ಸಹೋದರ ಅನ್ವರ್ ಧೇಬರ್ ನೇತೃತ್ವದ ಮದ್ಯದ ಸಿಂಡಿಕೇಟ್‌ನಿಂದ ಭ್ರಷ್ಟಾಚಾರ ಮತ್ತು 2,000 ಕೋಟಿ ರೂ. ಧೇಬಾರ್ ಪತ್ತೆಯಾಗಿದೆ ಎಂದು ಇಡಿ ಆರೋಪಿಸಿತ್ತು.**

# ಕಾರು ಮತ್ತು ಟ್ರಕ್ ನಡುವೆ ಅಪಘಾತ, 9 ಮಂದಿ ಸಾವು




**ಜಲಾವರ್:** ಕಾರು ಮತ್ತು ಟ್ರಕ್ ನಡುವೆ ಡಿಕ್ಕಿ ಸಂಭವಿಸಿದ ಭೀಕರ ಅಪಘಾತದಲ್ಲಿ 9 ಜನರು ಸಾವನ್ನಪ್ಪಿರುವ ಘಟನೆ ರಾಜಸ್ಥಾನದ ಜಲಾವರ್ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 52ರ ಅಕ್ಲೇರಾ ಬಳಿ ತಡರಾತ್ರಿ ನಡೆದಿದೆ.

ಮೃತರೆಲ್ಲರೂ ಕಾರಿನಲ್ಲಿದ್ದರು, ಮಧ್ಯಪ್ರದೇಶಕ್ಕೆ ಮದುವೆಗೆ ತೆರಳಿ ರಾತ್ರಿ ಹಿಂದಿರುಗುತ್ತಿದ್ದಾಗ ಅಕ್ಲೇರಾ ಸಮೀಪದ ಪಂಚೋಲಾ ಗ್ರಾಮದ ಬಳಿ ಈ ದುರ್ಘಟನೆ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳದಲ್ಲೇ ಮೂವರು ಹಾಗು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೆ 6 ಯುವಕರು ಸಾವನ್ನಪ್ಪಿದ್ದಾರೆ. ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಹಾರ ಕಾರ್ಯದಲ್ಲಿ ತೊಡಗಿದರು ಪ್ರಸ್ತುತ ತನಿಖೆ ಮುಂದುವರಿದಿದೆ. ಪ್ರಾಥಮಿಕ ಮಾಹಿತಿ ಪ್ರಕಾರ ಮೃತಪಟ್ಟ ಯುವಕರು ಬಗ್ರಿ ಸಮುದಾಯದವರು ಎನ್ನಲಾಗಿದೆ. ಅತಿವೇಗದ ಚಾಲನೆಯಿಂದಾಗಿ ಈ ಅಪಘಾತ ಸಂಭವಿಸಿದೆ. ಅತಿಯಾದ ವೇಗದಲ್ಲಿ ಬರುತ್ತಿದ್ದ ಟ್ರಕ್ ನಿಯಂತ್ರಣ ತಪ್ಪಿ ಎದುರಿನಿಂದ ಬರುತ್ತಿದ್ದ ಕಾರಿಗೆಗೆ ಡಿಕ್ಕಿ ಹೊಡೆದಿದೆ.

ಅಪಘಾತದ ನಂತರ ಟ್ರಕ್ ಚಾಲಕ ಪರಾರಿಯಾಗಿದ್ದು ಲಾರಿ ಹರ್ಯಾಣ ಮೂಲದ್ದಾಗಿದೆ. ಮೃತರನ್ನು ಗುರುತಿಸುವ ಪ್ರಯತ್ನ ಮುಂದುವರೆದಿದೆ. ಅಪಘಾತದ ಹಿಂದಿನ ಕಾರಣಗಳು ಇನ್ನೂ ತಿಳಿದು ಬಂದಿಲ್ಲ. ಅಪಘಾತದ ಸುದ್ದಿ ತಿಳಿದ ನಂತರ ವಧು-ವರರ ಮನೆಯಲ್ಲಿ ಗದ್ದಲ ಉಂಟಾಗಿದೆ ಮದುವೆಗೆ ಬಂದವರೆಲ್ಲರೂ ತಮ್ಮ ಕೆಲಸ ಬಿಟ್ಟು ಘಟನಾ ಸ್ಥಳದ ಕಡೆಗೆ ಬಂದಿದ್ದಾರೆ . ಈ ಅವಘಡದಿಂದ ಎರಡೂ ಮನೆಗಳಲ್ಲಿ ಶೋಕ ಮಡುಗಟ್ಟಿದೆ.

# ಮಿನಿ ನ್ಯೂಸ್

## ಜಪಾನ್ ಸೇನಾ ಕಾಪ್ಟರ್‌ಗಳ ಅಪಘಾತ, ಓರ್ವ ಸಾವು, 7 ಮಂದಿ ನಾಪತ್ತೆ

**ಟೋಕಿಯೋ:** ಜಪಾನ್ ಸೇನಾ ಕಾಪ್ಟರ್ ಗಳು ತರಬೇತಿ ಫೆಸಿಫಿಕ್ ಮಹಾಸಾಗರದಲ್ಲಿ ಪತನವಾಗಿದ್ದು, ಕಾಪ್ಟರ್ ಗಳಲ್ಲಿದ್ದವರ ಪೈಕಿ ಓರ್ವ ಸಾವನ್ನಪ್ಪಿದ್ದರೆ, 7 ಮಂದಿ ನಾಪತ್ತೆಯಾಗಿದ್ದಾರೆ.

ಫೆಸಿಫಿಕ್ ಮಹಾಸಾಗರದಲ್ಲಿ ನಡೆಯುತ್ತಿದ್ದ ಸೇನಾ ತರ ಬೇತಿ ವೇಳೆ ಈ ಅಪಘಾತ ಸಂಭವಿಸಿದ್ದು, ಜಪಾನಿನ ಎರಡು ಸಮುದ್ರಯಾನ ಸ್ವ-ರಕ್ಷಣಾ ಪಡೆ ಹೆಲಿಕಾಪ್ಟರ್‌ಗಳು ಪರಸ್ಪರ ಢಿಕ್ಕಿಯಾಗಿ ಪತನಗೊಂಡಿದೆ. ಈ ಘಟನೆಯಲ್ಲಿ ಓರ್ವ ಸಿಬ್ಬಂದಿ ಸಾವನ್ನಪ್ಪಿದ್ದು, ಏಳು ಮಂದಿ ನಾಪತ್ತೆಯಾಗಿದ್ದಾರೆ ಎಂದು ದೇಶದ ರಕ್ಷಣಾ ಸಚಿವರನ್ನು ಉಲ್ಲೇಖಿಸಿ ಕ್ಯೋಡೋ ನ್ಯೂಸ್ ವರದಿ ಮಾಡಿದೆ. ಫೆಸಿಫಿಕ್ ಮಹಾಸಾಗರದಲ್ಲಿ ರಾತ್ರಿ ಜಲಾಂತರ್ಗಾಮಿ ವಿರೋಧಿ ಡ್ರಿಲ್‌ನಲ್ಲಿ ಇಜು ದ್ವೀಪ ಸಮೂಹದಲ್ಲಿ ತೋರಿಶಿಮಾ ದ್ವೀಪದಿಂದ ಪೂರ್ವಕ್ಕೆ 270 ಕಿಲೋಮೀಟರ್ ದೂರದಲ್ಲಿ ಈ ಅಪಘಾತ ಸಂಭವಿಸಿದೆ. ಅಪಘಾತ ಸಂಭವಿಸಿದ ಇಜು ದ್ವೀಪ ಸರಪಳಿಯು ಟೋಕಿಯೊದ ದಕ್ಷಿಣದಲ್ಲಿದೆ. ಹೆಲಿಕಾಪ್ಟರ್‌ಗಳು ಪರಸ್ಪರ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ ಎಂದು ಜಪಾನ್‌ನ ರಕ್ಷಣಾ ಸಚಿವ ಮಿನೋರು ಕಿಹರಾ ಮಾಧ್ಯಮಗಳಿಗೆ ತಿಳಿಸಿದ್ದಾರೆ.

## ನೆಲಬಾಂಬ್ ಸಿಡಿದು ಇಬ್ಬರು ಸಾವು

**ಪೇಶಾವರ:** ಪಾಕಿಸ್ತಾನದ ಖೈಬರ್ ಪುಂಖ್ವಾ ಪ್ರಾಂತ್ಯದಲ್ಲಿ ನೆಲಬಾಂಬ್ ಸಿಡಿದು ಇಬ್ಬರು ಬಾಲಕರು ಮೃತಪಟ್ಟಿದ್ದು. ಮತ್ತೊಬ್ಬ ಬಾಲಕ ಗಾಯಗೊಂಡಿದ್ದಾನೆ. ತಿರಾಜ್ ಕಣಿವೆ ಪ್ರದೇಶದಲ್ಲಿ ಬಾಲಕರು ಹಣಬೆಯ ಹುಡುಕಾಟದಲ್ಲಿ ತೊಡಗಿದ್ದರು. ಬಾಲಕನೊಬ್ಬ ಹುದುಗಿಸಿಟ್ಟಿದ್ದ ನೆಲಬಾಂಬ್ ಅನ್ನು ಆಕಸ್ಮಿಕವಾಗಿ ತುಳಿದಾಗ ಸಿಡಿದಿದೆ. ತೀವ್ರ ಗಾಯಗೊಂಡ ಒಬ್ಬ ಬಾಲಕ ಸ್ಥಳದಲ್ಲಿ ಹಾಗೂ ಮತ್ತೊಬ್ಬ ಆಸ್ಪತ್ರೆಯಲ್ಲಿ ಮೃತಪಟ್ಟನು ಎಂದು ಪೊಲೀಸರು ತಿಳಿಸಿದ್ದಾರೆ.

## ಕಾರ್ ರೇಸ್ ವೇಳೆ ಅಪಘಾತ: ಏಳು ಮಂದಿ ಸಾವು, 23 ಜನರಿಗೆ ಗಾಯ

**ಕೊಲೊಂಬೊ:** ಮೋಟಾರ್ ಕಾರ್ ರೇಸಿಂಗ್ ವೇಳೆ ಅಪಘಾತ ಸಂಭವಿಸಿ ಮಗು ಸೇರಿ ಏಳು ಮಂದಿ ಮೃತಪಟ್ಟಿದ್ದು, 23 ಜನ ಗಾಯಗೊಂಡ ಘಟನೆ ಶ್ರೀಲಂಕಾದ ಉವಾ ಪ್ರಾಂತ್ಯದಲ್ಲಿ ನಡೆದಿದೆ ಎಂದು ಪೊಲಿಸರು ತಿಳಿಸಿದ್ದಾರೆ. 8 ವರ್ಷದ ಬಾಲಕ ಹಾಗೂ ನಾಲ್ವರು ಟ್ರ್ಯಾಕ್ ಸಹಾಯಕರು ಸೇರಿ 7 ಮಂದಿ ಮೃತಪಟ್ಟಿದ್ದಾರೆ.

ದೀಯತಲಾವದ ಸೆಂಟ್ರಲ್ ಹಿಲ್ ರೆಸಾರ್ಟ್‌ನಲ್ಲಿ ನಡೆದ ರೇಸ್‌ನಲ್ಲಿ ಕಾರೊಂದು ಟ್ರ್ಯಾಕ್‌ನಿಂದ ಪಲ್ಟಿಯಾಗಿ ಪ್ರೇಕ್ಷಕರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ 23 ಜನ ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದೂ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

## ಆಸ್ಟ್ರೇಲಿಯಾ: ಚಾಕು ಇರಿತಕ್ಕೆ 6 ಸಾವು

**ಸಿಡ್ನಿ:** ಇಲ್ಲಿನ ಜನನಿಬಿಡ ಶಾಪಿಂಗ್ ಮಾಲ್‌ವೊಂದರಲ್ಲಿ ಶಂಕಿತ ದಾಳಿಕೋರನೊಬ್ಬ ಚಾಕುವಿನಿಂದ ಇರಿದು ಆರು ಜನರನ್ನು ಹತ್ಯೆ ಮಾಡಿದ ಭೀಕರ ಘಟನೆ ನಡೆದಿದೆ. ಇರಿತದಿಂದ ಮಗು ಸೇರಿ ಹಲವರು ಗಾಯಗೊಂಡಿದ್ದಾರೆ. ಪೊಲೀಸ್ ಗುಂಡೇಟಿಗೆ ದಾಳಿಕೋರ ಬಲಿಯಾಗಿದ್ದಾನೆ.

ಸಿಡ್ನಿಯ ಪೂರ್ವ ಉಪನಗರದ ಬಾಂಡಿ ಜಂಕ್ಷನ್‌ನಲ್ಲಿರುವ ವೆಸ್ಟ್ ಫೀಲ್ಡ್ ಶಾಪಿಂಗ್ ಸೆಂಟರ್‌ನಲ್ಲಿ ಈ ಘಟನೆ ನಡೆದಿದೆ. ಹಂತಕ, ಮಗು ಸೇರಿ ಒಂಬತ್ತು ಜನರಿಗೆ ಚಾಕುವಿನಿಂದ ಇರಿದಿದ್ದಾನೆ. ಹಂತಕ ಚಾಕು ಕೈಬಿಡದಿದ್ದಾಗ ಆತನ ಮೇಲೆ ಮಹಿಳಾ ಪೊಲೀಸ್ ಇನ್ಸ್ಪೆಕ್ಟರ್ ವೊಬ್ಬರು ಗುಂಡು ಹಾರಿಸಿ. ದಾಳಿಗೆ ಒಳಗಾಗಲಿದ್ದ ಜನರನ್ನು ರಕ್ಷಿಸಿದ್ದಾರೆ. ಹಂತಕ ಸ್ಥಳದಲ್ಲೇ ಹತನಾಗಿದ್ದಾನೆ ಎಂದು ನ್ಯೂ ಸೌತ್ ವೇಲ್ಸ್‌ನ ಎಸಿಪಿ ಅಂಥೋನಿ ಕುಕ್ ಸುದ್ದಿಗಾರರಿಗೆ ತಿಳಿಸಿದ್ದಾರೆ. 'ಶಂಕಿತ ವ್ಯಕ್ತಿ ಒಬ್ಬನೇ ಈ ಕೃತ್ಯ ಎಸಗಿದ್ದಾನೆ.

ಆತ ಯಾರೆಂಬುದು ಇನ್ನೂ ಗೊತ್ತಾಗಿಲ್ಲ. ತನಿಖೆ ಈಗಷ್ಟೇ ಶುರುವಾಗಿದೆ. ಇದು ಬಹಳ ಸಮಯ ತೆಗೆದುಕೊಳ್ಳಬಹುದು' ಎಂದು ಕುಕ್ ಹೇಳಿದ್ದಾರೆ. ಇದು ಭಯೋತ್ಪಾದಕ ಕೃತ್ಯ ಎನ್ನುವುದನ್ನು ತಳ್ಳಿಹಾಕಲಾಗುತ್ತಿದೆಯೇ ಎಂದು ಕೇಳಲಾದ ಪ್ರಶ್ನೆಗೆ, ನಾವು ಯಾವುದನ್ನೂ ಅಲ್ಲಗಳೆದಿಲ್ಲ. ದಾಳಿ ನಡೆಸುತ್ತಿದ್ದ ಶಂಕಿತನನ್ನು ಮಹಿಳಾ ಪೊಲೀಸ್ ಅಧಿಕಾರಿ ಒಬ್ಬರೇ ಎದುರಿಸಿದ್ದು, ಹಲವು ಜೀವಗಳನ್ನು ಉಳಿಸಿದ್ದಾರೆ' ಎಂದು ಕುಕ್ ಪ್ರತಿಕ್ರಿಯಿಸಿದ್ದಾರೆ. ಘಟನಾ ಸ್ಥಳದಲ್ಲಿ ಜನರು ದಿಕ್ಕಾಪಾಲಾಗಿ ಓಡುತ್ತಿರುವ, ವೈದ್ಯರು ಗಾಯಾಳುಗಳಿಗೆ ಚಿಕಿತ್ಸೆ ನೀಡುತ್ತಿರುವ, ಶಾಪಿಂಗ್ ಸೆಂಟರ್‌ನ ಸುತ್ತಲೂ ಅನೇಕ ಅಂಬುಲೆನ್ಸ್‌ಗಳು ಮತ್ತು ಪೊಲೀಸ್ ವಾಹನಗಳು ಜಮಾಯಿಸಿದ್ದ ದೃಶ್ಯಗಳ ವಿಡಿಯೊಗಳು ಎಲ್ಲೆಡೆ ಹರಿದಾಡಿವೆ.

# 11 ಮತಗಟ್ಟೆಗಳಲ್ಲಿ ಇಂದು ಮರು ಮತದಾನ





**ಇಂಫಾಲ:** ಮಣಿಪುರದ ಇನ್ನರ್ ಮಣಿಪುರ ಲೋಕಸಭಾ ಕ್ಷೇತ್ರದ 11 ಮತಗಟ್ಟೆಗಳಲ್ಲಿ ಮರು ಮತದಾನ ನಡೆಯಲಿದೆ. ಏಪ್ರಿಲ್ 19ರಂದು ಲೋಕಸಭೆ ಚುನಾವಣೆಯ ಮೊದಲ ಹಂತದ ಮತದಾನದ ವೇಳೆ ಈ ಬೂತ್‌ಗಳಲ್ಲಿ ಬೆಂಕಿ, ಹಿಂಸಾಚಾರ ಮತ್ತು ವಿಧ್ವಂಸಕ ಕೃತ್ಯಗಳು ನಡೆದಿರುವ ಹಿನ್ನಲೆಯಲ್ಲಿ ಚುನಾವಣಾ ಆಯೋಗ ಮರು ಮತದಾನಕ್ಕೆ ಆದೇಶಿಸಿದೆ. ನೂತನ ಮತದಾನವನ್ನು ನಿಗದಿಪಡಿಸಲು ಚುನಾವಣಾ ಆಯೋಗದ ನಿರ್ದೇಶನವನ್ನು ಅನುಸರಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಖುರೈ ಕ್ಷೇತ್ರದ ಮೊಯಿರಂಗ್ಯಾಂಪು ಸಾಜೆಬ್ ಮತ್ತು ತೊಂಗಮ್ ಲೈಕೈ, ಕ್ಷೇತ್ರಗಾವೊದಲ್ಲಿ 4, ಇಂಫಾಲ್ ಪೂರ್ವ ಜಿಲ್ಲೆಯ ತೊಂಗ್ಜುನಲ್ಲಿ 1 ಮತ್ತು ಉರಿಪೋಕ್‌ನಲ್ಲಿ 3 ಮತ್ತು ಇಂಫಾಲ್ ಪಶ್ಚಿಮ ಜಿಲ್ಲೆಯ ಕೊಂತೌಜಮ್‌ನಲ್ಲಿ 1 ಮತಗಟ್ಟೆಗಳು ಬಾತವಾಗಿವೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಮತದಾನದ ದಿನ ಕೆಲವು ಮತಗಟ್ಟೆಗಳಲ್ಲಿ ಗುಂಡಿನ ದಾಳಿ, ಬೆದರಿಕೆ, ಇವಿಎಂಗಳನ್ನು ನಾಶಪಡಿಸಿದ ಘಟನೆಗಳು ನಡೆದವು. ಬೂತ್ ವಶಪಡಿಸಿಕೊಂಡ ಆರೋಪಗಳು ಸಂಘರ್ಷ ಪೀಡಿತ ಮಣಿಪುರದಲ್ಲಿ ವರದಿಯಾಗಿತ್ತು. ಇದಕ್ಕೂ ಮುನ್ನ 47 ಮತಗಟ್ಟೆಗಳಲ್ಲಿ ಬೂತ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಕಾಂಗ್ರೇಸ್ ಮರುಮತದಾನಕ್ಕೆ ಒತ್ತಾಯಿಸಿತ್ತು.

ಮಣಿಪುರದ ಒಳ ಕ್ಷೇತ್ರದ 36 ಮತ್ತು ಹೊರ ಮಣಿಪುರ ಕ್ಷೇತ್ರದ 11 ಮತಗಟ್ಟೆಗಳಲ್ಲಿ ಮರುಮತದಾನಕ್ಕೆ ಒತ್ತಾಯಿಸಿ ಮುಖ್ಯ ಚುನಾವಣಾಧಿಕಾರಿಗೆ ಪಕ್ಷವು ದೂರು ನೀಡಿದೆ ಎಂದು ಮಣಿಪುರ ಕಾಂಗ್ರೇಸ್ ಅಧ್ಯಕ್ಷ ಕೆ.ಮೇಘಚಂದ್ರ ತಿಳಿಸಿದ್ದಾರೆ. ಮಣಿಪುರದಲ್ಲಿ ಬಿಜೆಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಇಲ್ಲಿ ಬಿಜೆಪಿ ರಾಜ್ಯದ ನ್ಯಾಷನಲ್ ಪೀಪಲ್ಸ್ ಪಾರ್ಟಿ ಮತ್ತು ನಾಗಾ ಪೀಪಲ್ಸ್ ಫ್ರಂಟ್ ಜೊತೆ ಮೈತ್ರಿ ಮಾಡಿಕೊಂಡಿದೆ. ಆದರೆ, ಬಿಜೆಪಿ ಇನ್ನರ್ ಮಣಿಪುರದಿಂದ ಮಾತ್ರ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಆದರೆ, ಮಣಿಪುರದ ಹೊರಭಾಗದಲ್ಲಿ ಬಿಜೆಪಿ ನಾಗಾ ಪೀಪಲ್ಸ್ ಫ್ರಂಟ್‌ಗೆ ಬೆಂಬಲ ನೀಡುತ್ತಿದೆ.

# ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ಎಚ್ಚರಿಕೆಯ ಹೆಜ್ಜೆ



**ವಾಷಿಂಗ್ಟನ್:** ಇಸ್ರೇಲ್ ಮತ್ತು ಇರಾನ್ ಮಧ್ಯೆ ನಡೆಯುತ್ತಿರುವ ತಿಕ್ಕಾಟ ಮತ್ತು ಸಣ್ಣ ಪ್ರಮಾಣದ ಸಂಘರ್ಷ ಅತಿರೇಕಕ್ಕೆ ಹೋಗದಂತೆ ಎರಡೂ ದೇಶಗಳು ಎಚ್ಚರಿಕೆಯ ಹೆಜ್ಜೆಗಳನ್ನಿಡುತ್ತಿರುವಂತಿದೆ.

ಮೊದಲಿಗೆ ಇರಾನೀ ರಾಯಭಾರಿ ಕಚೇರಿ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ ಆಗಿತ್ತು. ಅದಕ್ಕೆ ಪ್ರತೀಕಾರವಾಗಿ ಇಸ್ರೇಲ್ ಮೇಲೆ ಇರಾನ್‌ನಿಂದ ನೂರಾರು ಡ್ರೋನ್ ಮತ್ತು ಕ್ಷಿಪಣಿಗಳ ಮಳೆ ಸುರಿದವು. ಇಸ್ರೇಲ್‌ನ ರಕ್ಷಣಾ ಕವಚ ಈ ಕ್ಷಿಪಣಿಗಳನ್ನು ಬಹಳ ದೂರದಲ್ಲೇ ನಾಶ ಮಾಡಿದವು. ಅದಾದ ಬಳಿಕ ಇಸ್ರೇಲ್‌ನಿಂದ ಇರಾನ್ ಮೇಲೆ ಪ್ರತಿದಾಳಿ ಆಗಿದೆ. ಈ ಘಟನೆ ಮಧ್ಯಪ್ರಾಚ್ಯದಲ್ಲಿ ದೊಡ್ಡ ಸಂಘರ್ಷಕ್ಕೆ ಎಡೆ ಮಾಡಿಕೊಡುವ ಸಾಧ್ಯತೆ ಇತ್ತು. ಆದರೆ, ಅಂಥದ್ದೇನೂ ಸದ್ಯಕ್ಕೆ ಆಗಿಲ್ಲ.

ಡ್ರೋನ್ ಮತ್ತು ಕ್ಷಿಪಣಿ ದಾಳಿ ಬಳಿಕ ತನ್ನ ಉದ್ದೇಶ ನೆರವೇರಿತು ಎಂದು ಹೇಳಿದ್ದ ಇರಾನ್, ಇಸ್ರೇಲ್‌ನಿಂದ ಮರುದಾಳಿಯಾದರೆ ಹೊಸ ಅನಾಹುತಗಳನ್ನು ಸೃಷ್ಟಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿತ್ತು. ಆದರೂ ಇಸ್ರೇಲ್‌ನಿಂದ ಕ್ಷಿಪಣಿ ದಾಳಿಯಾಯಿತು ಎನ್ನಲಾಗಿದೆ. ಇಸ್ರೇಲ್‌ನಿಂದ ಪ್ರತಿದಾಳಿ ಆಗಿರುವುದನ್ನು ಇರಾನ್ ನಿರಾಕರಿಸುವ ಮೂಲಕ ಸಂಘರ್ಷ ಮುಂದುವರಿಸುವ ಉದ್ದೇಶ ತನ್ನನ್ನಿಲ್ಲ ಎಂಬುದನ್ನು ವೇದ್ಯಪಡಿಸಿದೆ.

ಇಸ್ರೇಲ್ ಕೂಡ ಈ ಪ್ರತಿದಾಳಿ ಬಗ್ಗೆ ಅತಿರೇಕವಾಗಿ ಎಲ್ಲಿಯೂ ಹೇಳಿಕೊಂಡಿಲ್ಲ. ಇದರಿಂದ ಯುದ್ಧ ಸೂಕ್ಷ್ಮ ಪರಿಸ್ಥಿತಿ ಸದ್ಯಕ್ಕೆ ತಿಳಿಗೊಂಡಿದೆ.

ಇರಾನ್‌ಗೆ ಅಪಾಯಕಾರಿಯಾಗುವಂತಹ ಯಾವುದೇ ಸಾಹಸಕ್ಕೆ ಇಸ್ರೇಲ್ ಕೈಹಾಕದೇ ಇದ್ದರೆ ನಾವೇನೂ ಸ್ಪಂದಿಸುವುದಿಲ್ಲ, ಎಂದು ಇರಾನ್ ವಿದೇಶಾಂಗ ಸಚಿವ ಹೊಸೇನ್ ಆಮಿರ್ ಅಬ್ದೊಲ್ಲಾಹಿಯನ್ ಹೇಳಿದ್ದರು.


**ಇಸ್ರೇಲ್ ರಕ್ಷಣಾ ವ್ಯವಸ್ಥೆಗೆ ಅಮೆರಿಕ ಇನ್ನಷ್ಟು ನೆರವು**

**ಇಸ್ರೇಲ್‌ನ ಐರನ್ ಡೋಮ್ ಏರ್ ಡಿಫೆನ್ಸ್ ಸಿಸ್ಟಂ ಸೇರಿದಂತೆ ರಕ್ಷಣಾ ವ್ಯವಸ್ಥೆ ಬಲಪಡಿಸಲು ಅಮೆರಿಕ ಹೊಸ ಧನಸಹಾಯಕ್ಕೆ ಸಮ್ಮತಿಸಿದೆ. 13 ಬಿಲಿಯನ್ ಡಾಲರ್ ನಷ್ಟು ಹಣದ ನೆರವನ್ನು ಅಮೆರಿಕ ನೀಡಲಿದೆ. ಈ ಸಂಬಂಧ ಮಸೂದೆಗೆ ಅಮೆರಿಕದ ಸಂಸತ್ತು ಅನುಮೋದಿಸಿದೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತಾನ್ಯಹು ಈ ಬೆಳವಣಿಗೆಯನ್ನು ಸ್ವಾಗತಿಸಿದ್ದಾರೆ.**

# ಕಳೆದ ಬಾರಿಗಿಂತ ಈ ಬಾರಿ ಬಿಜೆಪಿ ಹೆಚ್ಚು ಸ್ಥಾನ ಗೆಲ್ಲುತ್ತೆ : ಸುರ್ಜಿತ್ ಭಲ್ಲಾ

**ವಿರೋಧ ಪಕ್ಷಗಳ ದೌರ್ಬಲ್ಯವೇ ಮೋದಿ ಗೆಲುವಿನ ಪ್ರಮುಖ ಶಕ್ತಿ.**

**ವಿರೋಧ ಪಕ್ಷಗಳ ದೌರ್ಬಲ್ಯವೇ ಮೋದಿ ಗೆಲುವಿನ ಪ್ರಮುಖ ಶಕ್ತಿ. ಮೋದಿ ಅವರ ನಾಯಕತ್ವಕ್ಕೆ ಸರಿಸಾಟಿಯಾಗುವ ಪ್ರಬಲ ನಾಯಕತ್ವ ಇಂಡಿಯಾ ಮೈತ್ರಿಕೂಟ ಇಲ್ಲವೇ ತೃತೀಯ ಬಣದಲ್ಲೂ ಇಲ್ಲ. ಇದು ಬಿಜೆಪಿ ಗೆಲುವಿಗೆ ಮೊದಲ ಹೆಜ್ಜೆ ಆಗಲಿದೆ ಎಂದಿದ್ದಾರೆ. ಕಳೆದ ಎರಡು ಅವಧಿಯಲ್ಲಿ ಮೋದಿಯವರು ದೊಡ್ಡ ಮಟ್ಟದಲ್ಲಿ ಸುಧಾರಣೆ ಮಾಡಿಲ್ಲವಾದರೂ ಕೆಲವು ಕಾರ್ಯಕ್ರಮಗಳು ಜನರಿಗೆ ಮನಸೋತಿದ್ದಾರೆ. ನೆಹರು, ಇಂದಿರಾಗಾಂಧಿ ನಂತರ ಪ್ರಾಯಶಃ ದೇಶದ ಜನ ಮಾನಸದಲ್ಲಿ ಇಷ್ಟು ಆಳವಾಗಿ ಬೇರೂರಿದ ಹೆಸರು ಎಂದರೆ ಅದು ನರೇಂದ್ರಮೋದಿ. ಹೀಗಾಗಿ ಗೆಲುವಿಗೆ ದಾರಿ ಸುಲಭವಾಗಲಿದೆ ಎಂದಿದ್ದಾರೆ.**



**ನವದೆಹಲಿ:** 2019ರ ಲೋಕಸಭೆ ಚುನಾವಣೆಯಲ್ಲಿ ಸಾಧಿಸಿದ್ದಕ್ಕಿಂತ ಈ ಬಾರಿ ಬಿಜೆಪಿ ಉತ್ತಮ ಪ್ರದರ್ಶನ ನೀಡಿ 330ರಿಂದ 350 ಕ್ಷೇತ್ರಗಳನ್ನು ಗೆಲ್ಲುವ ಸಾಧ್ಯತೆಯಿದೆ ಎಂದು ಹಿರಿಯ ಆರ್ಥಿಕ ತಜ್ಞ ಮತ್ತು ಪೋಪಾಲಜಿಸ್ಟ್ ಸುರ್ಜಿತ್ ಭಲ್ಲಾ ತಿಳಿಸಿದ್ದಾರೆ. ಖಾಸಗಿ ಸುದ್ದಿವಾಹಿನಿ ನೀಡಿರುವ ಸಂದರ್ಶದನಲ್ಲಿ ಮಾತನಾಡಿರುವ ಅವರು, ಈ ಬಾರಿ ಬಿಜೆಪಿ ಒಂದೇ 330 ರಿಂದ 350 ಸ್ಥಾನಗಳನ್ನು ಗೆದ್ದು ಅಧಿಕಾರ ಹಿಡಿಯಲಿದೆ. ಮೈತ್ರಿ ಪಕ್ಷಗಳು ಜೊತೆಗಿರುವುದರಿಂದ ಅದರ ಸ್ಥಾನಗಳು ಇನ್ನಷ್ಟು ಏರಿಕೆಯಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಬಾರಿಯ ಚುನಾವಣೆಯನ್ನು ಪ್ರಧಾನಿ ನರೇಂದ್ರಮೋದಿ ಅವರು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ. ಹೀಗಾಗಿ ದೇಶದೆಲ್ಲೆಡೆ ಅವರು ತಮ್ಮ ಸರ್ಕಾರದ ಸಾಧನೆಗಳನ್ನು ಜನರಿಗೆ ಮನವರಿಕೆ ಮಾಡಿಕೊಡುತ್ತಿದ್ದಾರೆ. ನನ್ನ ಅಂದಾಜಿನ ಪ್ರಕಾರ 2019ರ ಫಲಿತಾಂಶಕ್ಕೆ ಹೋಲಿಸಿದರೆ ಮತಗಳಿಕೆಯಲ್ಲಿ ಬಿಜೆಪಿ 5ರಿಂದ 7ರಷ್ಟು ಹೆಚ್ಚಳ ಮಾಡಿಕೊಳ್ಳುವ ಸಂಭವವಿದೆ. ಇದನ್ನು ಅಂಕಿ ಅಂಶಗಳಿಗೆ ಪರಿವರ್ತಿಸಿದರೆ 330 ರಿಂದ 350 ಆಗಬಹುದು ಎಂದು ಅಂದಾಜಿಸಿದ್ದಾರೆ. ಕಳೆದ ನಾಲ್ಕು ದಶಕಗಳಿಂದ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಯನ್ನು ತುಂಬ ಅರ್ಥಗರ್ಭಿತವಾಗಿ ವಸ್ತುನಿಷ್ಠ ಆಧಾರದ ಮೇಲೆ ವಿಶ್ಲೇಷಣೆ ಮಾಡುವ ಸುರ್ಜಿತ್ ಭಲ್ಲಾ ಅವರು, ದೇಶದಲ್ಲಿ ಮತ್ತೆ ಮೂರನೇ ಬಾರಿಗೆ ಬಿಜೆಪಿ ನೇತೃತ್ವದ ಎನ್‌ಡಿಎ ಯಾವ ಕಾರಣದಿಂದ ಅಧಿಕಾರಕ್ಕೆ ಬರಲಿದೆ ಎಂಬುದಕ್ಕೆ ತಮ್ಮದೇ ಆದ ಉದಾಹರಣೆಗಳನ್ನು ನೀಡಿದ್ದಾರೆ. ನಿರುದ್ಯೋಗ, ಬೆಲೆ ಏರಿಕೆ, ಆರ್ಥಿಕ ಕುಸಿತ, ಜಿಡಿಪಿ ಇವುಗಳು ಒಂದಿಷ್ಟು ಪ್ರಮಾಣದಲ್ಲಿ ಮತದಾರರ ಮೇಲೆ ಪರಿಣಾಮ ಬೀರಬಹುದು. ಆದರೆ ಇದನ್ನು ಹೇಗೆ ವಿಷಯಾಂತರ ಮಾಡಬಹುದು ಎಂಬುದನ್ನು ಮೋದಿ ಕಳೆದ ಚುನಾವಣೆಯಲ್ಲೇ ಸಾಧಿಸಿ ತೋರಿಸಿದ್ದಾರೆ. ಮೋದಿ ಅಬ್ಬರದ ಪ್ರಚಾರದ ಮುಂದೆ ವಿರೋಧ ಪಕ್ಷಗಳ ಪ್ರಚಾರ ತೀರಾ ಪೇಲವ ಎನಿಸುತ್ತಿದೆ. ಈ ಎಲ್ಲಾ ಅಂಶಗಳು ಬಿಜೆಪಿಗೆ ಪೂರಕವಾಗಲಿದೆ ಎಂದು ಹೇಳಿದ್ದಾರೆ. ಪ್ರತಿಪಕ್ಷ ಕಾಂಗ್ರೇಸ್ 44 ಸ್ಥಾನಗಳನ್ನು ಪಡೆಯಬಹುದು ಅಥವಾ 2014ರ ಚುನಾವಣೆಯಲ್ಲಿ ಗಳಿಸಿದ್ದಕ್ಕಿಂತಲೂ ಕಡಿಮೆ ಸ್ಥಾನಗಳನ್ನು ಪಡೆಯಬಹುದು. ಬಿಜೆಪಿ ಸಾಂಪ್ರದಾಯಿಕವಾಗಿ ದುರ್ಬಲ ಪಕ್ಷವಾಗಿರುವ ತಮಿಳುನಾಡಿನಲ್ಲಿ ಬಿಜೆಪಿ ಕನಿಷ್ಠ ಐದು ಸ್ಥಾನಗಳನ್ನು ಗೆಲ್ಲುವ ಸಾಧ್ಯತೆಯಿದೆ.

ಕೇರಳದಲ್ಲಿ, ಬಹುಶಃ ಒಂದು ಅಥವಾ ಎರಡು ಸ್ಥಾನ ಗೆಲ್ಲಬಹುದು ಎಂದು ಭಲ್ಲಾ ಹೇಳಿದ್ದಾರೆ. ಜನರ ಜೀವನದಲ್ಲಿ ಎಷ್ಟು ಸುಧಾರಣೆಯಾಗಿದೆ ಎಂಬುದರ ಆಧಾರದ ಮೇಲೆ ಭಾರತವು ಮತ ಚಲಾಯಿಸುತ್ತದೆ. ಅದು ಮೂಲ ಆಧಾರವಾಗಿದೆ. ಇದು ಜಾತಿ ಅಲ್ಲ, ಲಿಂಗವಲ್ಲ, ಜನರು ಆರೋಪಿಸುವ ವಿವಿಧ ಅಂಶಗಳಲ್ಲ ಎಂದು ಅಮೆರಿಕದ ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರು ನೀಡಿದ್ದ ಹೇಳಿಕೆಯನ್ನು ಉಲ್ಲೇಖಿಸಿದ್ದಾರೆ.

# ಗಂಟಲು ಸೀಳಿ ಇಬ್ಬರ ಕೊಲೆ

**ನವದೆಹಲಿ:** ಅಕ್ರಮ ಸಂಬಂಧ ಹೊಂದಿದ್ದಾರೆ ಎಂಬ ಶಂಕೆ ಮೇರೆಗೆ ಯುವತಿ ಮತ್ತು ಆಕೆಯ ದೂರದ ಸಂಬಂಧಿಯೊಬ್ಬನ ಕತ್ತು ಸೀಳಿ ಕೊಲೆ ಮಾಡಿರುವ ಘಟನೆ ದೆಹಲಿಯಲ್ಲಿ ನಡೆದಿದೆ. ಅವಿವಾಹಿತರಾಗಿದ್ದ ಶೈನಾ(22) ಹಾಗೂ ಡ್ಯಾನಿಶ್(35) ಕೊಲೆಯಾಗಿರುವವರು.


ಶೈನಾಳ ತಂದೆ ಮೊಹಮ್ಮದ್ ಶಹೀದ್ (46) ಮತ್ತು ಈತನ ಪುತ್ರ ಕುದುಶ್(20) ಕೊಲೆ ಮಾಡಿರುವ ಆರೋಪಿಗಳು. ಮೊಹಮ್ಮದ್ ಶಹೀದ್ ಕುಟುಂಬ ಹಣ್ಣು ವ್ಯಾಪಾರಿಗಳಾಗಿದ್ದು, ಕೊಲೆಯಾದ ಡ್ಯಾನಿಶ್, ಶಹೀದ್‌ನ ಸೋದರ ಸಂಬಂಧಿಯಾಗಿದ್ದಾನೆ.

**ಘಟನೆ ವಿವರ:** ಭಜನಪುರ ಪ್ರದೇಶದಲ್ಲಿ ಶೈನಾ ಮತ್ತು ಡ್ಯಾನಿಶ್ ಇಬ್ಬರು ಹೆಣವಾಗಿ ಪತ್ತೆಯಾಗಿದ್ದರು. ಶೈನಾ ಕುತ್ತಿಗೆಯಲ್ಲಿ ಆಳವಾದ ಕೊಯ್ದಿರುವ ಗಾಯಗಳಾಗಿರುವುದು ಕಂಡುಬಂದಿದೆ. ಆಕೆಯ ಕೈ ಕಾಲುಗಳನ್ನು ದುಪ್ಪಟ್ಟಾ ಮತ್ತು ಲುಂಗಿಯಿಂದ ಕಟ್ಟಿ ಕೊಲೆ ಮಾಡಲಾಗಿತ್ತು. ಡ್ಯಾನಿಶ್‌ನ ಗಂಟಲನ್ನು ಹಣ್ಣು ಕತ್ತರಿಸುವ ದೊಡ್ಡ ಚಾಕುವಿನಿಂದ ಸೀಳಲಾಗಿತ್ತು. ಈ ಸಂಬಂಧ ಸ್ಥಳೀಯ ಪೊಲೀಸ್ ಠಾಣೆಗೆ ಕರೆ ಬಂದಿದ್ದು, ತನ್ನ ಸಹೋದರಿ ಹಾಗೂ ಚಿಕ್ಕಪ್ಪನನ್ನು ಕೊಲೆ ಮಾಡಿರುವುದಾಗಿ ಖುದ್ದು ಕುದೂಶ್‌ನೇ ಪೊಲೀಸರಿಗೆ ಕರೆ ಮಾಡಿ ತಿಳಿಸಿದ್ದ. ಕೊಲೆಯಾಗಿರುವ ಡ್ಯಾನೀಶ್ ಕೂಡ ಹಣ್ಣು ವ್ಯಾಪಾರಿಯಾಗಿದ್ದು, ಈತ ಶೈನಾಳೊಂದಿಗೆ ಸಂಬಂಧವಿಟ್ಟುಕೊಂಡಿದ್ದಾನೆ ಎಂದು ಶಹೀದ್ ಮತ್ತು ಮಗ ಕುದೂಶ್ ಅನುಮಾನ ಹೊಂದಿದ್ದರು. ಶಂಕೆ ಮೇರೆಗೆ ಅವರಿಬ್ಬರನ್ನು ಕತ್ತು ಸೀಳಿ ಕೊಲೆ ಮಾಡಿದ್ದಾರೆ ಎಂದು ಉಪಪೊಲೀಸ್ ಆಯುಕ್ತ (ಈಶಾನ್ಯ) ಜಾಯ್ ಟಿರ್ಕಿ ತಿಳಿಸಿದ್ದಾರೆ.

ಕೂಡಲೇ ಉತ್ತರ ಘೋಂಡಾದ ರಾಮ್ ಗಲಿಯಲ್ಲಿರುವ ಸ್ಥಳಕ್ಕೆ ತಕ್ಷಣವೇ ಪೊಲೀಸ್ ತಂಡವನ್ನು ತೆರಳಿ ಎರಡನೇ ಮಹಡಿಯಲ್ಲಿರುವ ಮನೆಯನ್ನು ಪರಿಶೀಲನೆ ನಡೆಸಿ ಆರೋಪಿಗಳಾದ ತಂದೆ ಮತ್ತು ಮಗನನ್ನು ಬಂಧಿಸಿದ್ದಾರೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಅವರು ಹೇಳಿದ್ದಾರೆ.

# ರಾಫಾ ಮೇಲೆ ಇಸ್ರೇಲ್ ದಾಳಿ: 13 ಮಂದಿ ಸಾವು

## • ಸ್ಥಳೀಯ ಆರೋಗ್ಯ ಅಧಿಕಾರಿಗಳ ಪ್ರಕಾರ, ಗಾಜಾದ ಎರಡು ದೊಡ್ಡ ನಗರಗಳು ಧ್ವಂಸ



ಆಕ್ರಮಣ ವಿಸ್ತರಿಸಲು ಪ್ರತಿಜ್ಞೆ

**ರಾಫಾ:** ಅಮೆರಿಕ ತನ್ನ ನಿಕಟ ಮಿತ್ರರಾಷ್ಟ್ರಕ್ಕೆ ಶತಕೋಟಿ ಡಾಲರ್ ಹೆಚ್ಚುವರಿ ಮಿಲಿಟರಿ ಸಹಾಯವನ್ನು ನೀಡುತ್ತಿರುವ ಹೊತ್ತಿನಲ್ಲಿ ದಕ್ಷಿಣ ಗಾಜಾದ ರಾಫಾ ನಗರದ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಒಂಬತ್ತು ಮಂದಿ ಮಕ್ಕಳು ಸೇರಿದಂತೆ 13 ಜನರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಇಸ್ರೇಲ್ ರಾಫಾದಲ್ಲಿ ಪ್ರತಿದಿನ ವಾಯುದಾಳಿಗಳನ್ನು ನಡೆಸಿದೆ, ಅಲ್ಲಿ ಗಾಜಾದ 2.3 ಮಿಲಿಯನ್ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಜನರು ಆಶ್ರಯ ಪಡೆದಿದ್ದಾರೆ. ಅಮೆರಿಕ ಸೇರಿದಂತೆ ಅಂತಾರಾಷ್ಟ್ರೀಯ ಸಂಯಮದ ಕರೆಗಳ ಹೊರತಾಗಿಯೂ ಈಜಿಪ್ಟ್ ಗಡಿಯಲ್ಲಿರುವ ನಗರಕ್ಕೆ ತನ್ನ ಆಕ್ರಮಣವನ್ನು ವಿಸ್ತರಿಸಲು ಪ್ರತಿಜ್ಞೆ ಮಾಡಿದೆ.

ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್ ಶನಿವಾರ 26 ಶತ ಕೋಟಿ ಡಾಲರ್ ನೆರವು ಪ್ಯಾಕೇಜ್‌ಗೆ ಅನುಮೋದನೆ ನೀಡಿದೆ, ಇದು ಗಾಜಾಕ್ಕೆ ಸುಮಾರು 9 ಶತಕೋಟಿ ಡಾಲರ್ ಮಾನವೀಯ ಸಹಾಯವನ್ನು ಒಳಗೊಂಡಿದೆ. ಈಗ ಏಳನೇ ತಿಂಗಳಾಗಿರುವ ಈ ಸಂಘರ್ಷವು ಇರಾನ್ ಮತ್ತು ಮಧ್ಯಪ್ರಾಚ್ಯದಾದ್ಯಂತ ಮಿತ್ರ ಉಗ್ರಗಾಮಿ ಗುಂಪುಗಳ ವಿರುದ್ಧ ಇಸ್ರೇಲ್ ಮತ್ತು ಯುಎಸ್‌ನ್ನು ಪ್ರಚೋದಿಸುವ ಪ್ರಾದೇಶಿಕ ಅಶಾಂತಿಯನ್ನು ಹುಟ್ಟುಹಾಕಿದೆ. ಇಸ್ರೇಲ್ ಆಕ್ರಮಿತ ಪಶ್ಚಿಮ ದಂಡೆಯಲ್ಲಿಯೂ ಉದ್ವಿಗ್ನತೆ ಹೆಚ್ಚಿದೆ.

ಇಂದು ಮುಂಜಾನೆ ದಕ್ಷಿಣ ಪಶ್ಚಿಮ ದಂಡೆ ಪಟ್ಟಣದ ಹೆಬ್ರಾನ್ ಬಳಿ ಚೆಕ್ ಪಾಯಿಂಟ್‌ನಲ್ಲಿ ಚಾಕು ಮತ್ತು ಬಂದೂಕಿನಿಂದ ದಾಳಿ ಮಾಡಿದ ಇಬ್ಬರು ಪ್ಯಾಲೆಸ್ತೀನಿಯರನ್ನು ಪಡೆಗಳು ತಟಸ್ಥಗೊಳಿಸಿದವು ಎಂದು ಇಸ್ರೇಲಿ ಮಿಲಿಟರಿ ಹೇಳಿದೆ.

ಅವರನ್ನು ಹತ್ಯೆ ಮಾಡಲಾಗಿದೆಯೇ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ. ಯಾವುದೇ ಇಸ್ರೇಲಿ ಪಡೆಗಳು ಗಾಯಗೊಂಡಿಲ್ಲ. ಪ್ಯಾಲೆಸ್ತೀನ್ ಆರೋಗ್ಯ ಸಚಿವಾಲಯದ ಪ್ರಕಾರ, ಗಾಜಾದಲ್ಲಿ ಯುದ್ಧ ಪ್ರಾರಂಭವಾದಾಗಿನಿಂದ ಇಸ್ರೇಲಿ ಸೈನಿಕರು ಮತ್ತು ಪಶ್ಚಿಮ ದಂಡೆಯಲ್ಲಿ ನೆಲೆಸಿದವರಿಂದ ಕನಿಷ್ಠ 469 ಪ್ಯಾಲೆಸ್ತೀನಿಯರು ಮೃತಪಟ್ಟಿದ್ದಾರೆ. ಗಾಜಾದಲ್ಲಿ ಯುದ್ಧವು ಕಳೆದ ವರ್ಷದ ಅಕ್ಟೋಬರ್ 7 ರಂದು ದಕ್ಷಿಣ ಇಸ್ರೇಲ್‌ನಲ್ಲಿ ಅಭೂತಪೂರ್ವ ದಾಳಿಯಿಂದ ಹುಟ್ಟಿಕೊಂಡಿತು, ಇದರಲ್ಲಿ ಹಮಾಸ್ ಮತ್ತು ಇತರ ಉಗ್ರಗಾಮಿಗಳು ಸುಮಾರು 1,200 ಜನರು ಕೊಲ್ಲಲ್ಪಟ್ಟರು. ಹೆಚ್ಚಾಗಿ ನಾಗರಿಕರು ಮತ್ತು ಸುಮಾರು 250 ಒತ್ತೆಯಾಳುಗಳನ್ನು ಅಪಹರಿಸಿದರು.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಸ್ಥಾನಕ್ಕೆ ಹೊಸ ಚುನಾವಣೆಗಳು ಮತ್ತು ಒತ್ತೆಯಾಳುಗಳನ್ನು ಬಿಡುಗಡೆ ಮಾಡಲು ಹಮಾಸ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸಾವಿರಾರು ಇಸ್ರೇಲಿಗಳು ಬೀದಿಗಿಳಿದಿದ್ದಾರೆ.

**34,000 ಪ್ಯಾಲೆಸ್ತೀನಿಯರ ಬಲಿ**

**ಇಸ್ರೇಲ್-ಹಮಾಸ್ ಯುದ್ಧವು 34,000 ಇದುವರೆಗೆ ಪ್ಯಾಲೆಸ್ತೀನಿಯರನ್ನು ಬಲಿ ತೆಗೆದುಕೊಂಡಿದೆ, ಸ್ಥಳೀಯ ಆರೋಗ್ಯ ಅಧಿಕಾರಿಗಳ ಪ್ರಕಾರ, ಗಾಜಾದ ಎರಡು ದೊಡ್ಡ ನಗರಗಳನ್ನು ಧ್ವಂಸಗೊಳಿಸಿದ್ದು, ಭೂಪ್ರದೇಶದಾದ್ಯಂತ ವಿನಾಶಕ್ಕೆ ಕಾರಣವಾಗಿದೆ. ಸುಮಾರು ಶೇಕಡಾ 80ರಷ್ಟು ಜನರು ತಮ್ಮ ಮನೆಗಳನ್ನು ಮುತ್ತಿಗೆ ಹಾಕಿದ ಕರಾವಳಿ ಭಾಗಗಳಿಗೆ ಪಲಾಯನ ಮಾಡಿದ್ದಾರೆ, ಇದು ಬರಗಾಲದ ಅಂಚಿನಲ್ಲಿದೆ ಎಂದು ತಜ್ಞರು ಹೇಳುತ್ತಾರೆ.**

**ನೆತನ್ಯಾಹು ಪ್ರತಿಜ್ಞೆ**

**ಹಮಾಸ್ ನಾಶವಾಗುವವರೆಗೆ ಎಲ್ಲಾ ಒತ್ತೆಯಾಳುಗಳನ್ನು ಹಿಂದಿರುಗಿಸುವವರೆಗೆ ಯುದ್ಧವನ್ನು ಮುಂದುವರೆಸುವುದಾಗಿ ನೆತನ್ಯಾಹು ಪ್ರತಿಜ್ಞೆ ಮಾಡಿದ್ದಾರೆ. ಗಾಜಾ ಆರೋಗ್ಯ ಸಚಿವಾಲಯದ ಪ್ರಕಾರ, ಯುದ್ಧವು ಕನಿಷ್ಠ 34,049 ಪ್ಯಾಲೆಸ್ತೀನಿಯರನ್ನು ಕೊಂದುಹಾಕಿದ್ದು, 76,901 ಮಂದಿ ಗಾಯಗೊಂಡಿದ್ದಾರೆ. ಇಸ್ರೇಲ್ ನಾಗರಿಕ ಸಾವುನೋವುಗಳಿಗೆ ಹಮಾಸ್‌ನ್ನು ದೂಷಿಸುತ್ತದೆ. 13,000 ಹಮಾಸ್ ಹೋರಾಟಗಾರರನ್ನು ಯಾವುದೇ ಪುರಾವೆಗಳನ್ನು ನೀಡದೆ ಕೊಂದಿರುವುದಾಗಿ ಮಿಲಿಟರಿ ಹೇಳಿಕೊಂಡಿದೆ.**

# ಕೇಜ್ರಿವಾಲ್‌ಗೆ ಜೈಲಲ್ಲಿ ಇನ್ಸುಲಿನ್ ಕೊಡ್ತಿಲ್ಲ




- **ನನ್ನ ಪತಿ ಅರವಿಂದ ಕೇಜ್ರಿವಾಲ್ ಅವರನ್ನು ಕೊಲ್ಲಬೇಕೆಂದು ಬಿಜೆಪಿ ಬಯಸಿದೆ**
- **ಅವರ ಆಹಾರ ತಯಾರಿಕೆಯನ್ನೂ ಕೂಡ ಕ್ಯಾಮೆರಾದಲ್ಲಿ ಚಿತ್ರೀಕರಿಸಲಾಗುತ್ತಿದೆ**
- **ಕೇಜ್ರಿವಾಲ್ ಅವರಿಗೆ ನಿತ್ಯ 50 ಯೂನಿಟ್ ಇನ್ಸುಲಿನ್ ಬೇಕಾಗಿದೆ: ಸುನೀತಾ**

**ರಾಂಚಿ:** ದಿಲ್ಲಿ ಸಿಎಂ ಅರವಿಂದ ಕೇಜ್ರಿವಾಲ್ ಅವರನ್ನು ಕೊಲ್ಲುವ ಉದ್ದೇಶದಿಂದ ಅವರಿಗೆ ಜೈಲಿನಲ್ಲಿ ಇನ್ಸುಲಿನ್ ನೀಡಲು ನಿರಾಕರಿಸಲಾಗುತ್ತಿದೆ' ಎಂದು ಕೇಜ್ರಿವಾಲ್ ಅವರ ಪತ್ನಿ ಸುನೀತಾ ಕೇಜ್ರಿವಾಲ್ ಆರೋಪಿಸಿದ್ದಾರೆ. ಜಾರ್ಖಂಡ್ ರಾಜ್ಯದ ರಾಂಚಿ ನಗರದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಇಂಡಿಯಾ ಮೈತ್ರಿ ಕೂಟದ ನ್ಯಾಯ್ ಚುನಾವಣಾ ಸಮಾವೇಶದಲ್ಲಿ ಅವರು ಈ ಆರೋಪ ಮಾಡಿದ್ದಾರೆ.

'ನನ್ನ ಪತಿ ಅರವಿಂದ ಕೇಜ್ರಿವಾಲ್ ಅವರನ್ನು ಕೊಲ್ಲಬೇಕೆಂದು ಬಿಜೆಪಿ ಬಯಸಿದೆ. ಅವರ ಆಹಾರ ತಯಾರಿಕೆಯನ್ನೂ ಕೂಡ ಕ್ಯಾಮೆರಾದಲ್ಲಿ ಚಿತ್ರೀಕರಿಸಲಾಗುತ್ತಿದೆ. ಇನ್ಸುಲಿನ್ ನಿರಾಕರಿಸಲಾಗುತ್ತಿದೆ. ನನ್ನ ಪತಿ ಮಧುಮೇಹ ಪೀಡಿತರಾಗಿದ್ದು, 12 ವರ್ಷಗಳಿಂದ ಇನ್ಸುಲಿನ್ ತೆಗೆದುಕೊಳ್ಳುತ್ತಿದ್ದಾರೆ. ಅವರಿಗೆ ನಿತ್ಯ 50 ಯೂನಿಟ್ ಇನ್ಸುಲಿನ್ ಬೇಕಾಗಿದೆ ಎಂದು ಸುನೀತಾ ವಿವರಿಸಿದರು.

'ಜನರ ಪರವಾಗಿ ಸೇವೆ ಮಾಡಿದ್ದಕ್ಕಾಗಿ ನನ್ನ ಪತಿಯನ್ನು ಜೈಲಿಗೆ ಹಾಕಲಾಗಿದೆ. ಅವರ ವಿರುದ್ಧ ಯಾವುದೇ ಆರೋಪಗಳು ಸಾಬೀತಾಗಿಲ್ಲ ಎಂದು ಹೇಳಿದ ಸುನೀತಾ ಕೇಜ್ರಿವಾಲ್, ಬಿಜೆಪಿಯ ಏಕಚಕ್ರಾಧಿಪತ್ಯದ ವಿರುದ್ಧ ಹೋರಾಡಿ ನಾವು ಗೆಲುವು ಸಾಧಿಸಲಿದ್ದೇವೆ. ಅರವಿಂದ ಕೇಜ್ರಿವಾಲ್ ಹಾಗೂ ಹೇಮಂತ್ ಸೊರೇನ್ ಜೈಲಿನಿಂದ ಹೊರಬರಲಿದ್ದಾರೆ' ಎಂದು ನ್ಯಾಯಾಲಯದ ಮೇಲೆ ತಮಗಿರುವ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಈ ಸಮಾವೇಶದಲ್ಲಿ ಸದ್ಯ ಜೈಲು ಪಾಲಾಗಿರುವ ದಿಲ್ಲಿ ಸಿಎಂ ಅರವಿಂದ ಕೇಜ್ರಿವಾಲ್ ಹಾಗೂ ಜಾರ್ಖಂಡ್ ಮಾಜಿ ಸಿಎಂ ಹೇಮಂತ್ ಸೊರೇನ್ ಅವರಿಗೂ ಸಮಾವೇಶದ ವೇದಿಕೆಯಲ್ಲಿ ಕುರ್ಚಿ ಕಾಯ್ದಿರಿಸಲಾಗಿದ್ದು ವಿಶೇಷವಾಗಿ ಗಮನ ಸೆಳೆಯಿತು.



# ಕೆಕೆಆರ್ ವಿರುದ್ಧ ಆರ್‌ಸಿಬಿ ವೀರೋಚಿತ 1 ರನ್ ಸೋಲು

## ■ ಫಾಫ್ ಬಳಗಕ್ಕೆ ಏಳನೇ ಮುಖಭಂಗ ■ ಕೊನೇ ಓವರ್‌ನಲ್ಲಿ 6,6,6; ಹೋರಾಡಿ ಸೋತ ಆರ್‌ಸಿಬಿ

ಕೋಲ್ಕೊತಾ: ಮತ್ತೊಂದು ಬಾರಿ ಎಲ್ಲಾ ಹಂತದಲ್ಲೂ ಕಳಪೆ ಪ್ರದರ್ಶನ ನೀಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಐಪಿಎಲ್ 17ನೇ ಆವೃತ್ತಿಯ 36ನೇ ಪಂದ್ಯದಲ್ಲಿ ಕೋಲ್ಕೊತಾ ನೈಟ್ ರೈಡರ್ಸ್ ವಿರುದ್ಧ ವೀರೋಚಿತ 1 ರನ್ ಸೋಲಿಗೆ ಒಳಗಾಗಿದೆ. ಒಂದು ಹಂತದಲ್ಲಿ ಗೆಲುವಿನ ಕಡೆಗೆ ಮುನ್ನುಗ್ಗುತ್ತಿದ್ದ ಆರ್‌ಸಿಬಿ ತಂಡ ತನ್ನ ಬ್ಯಾಟರ್‌ಗಳ ಉಡಾಳತನದಿಂದಾಗಿ ಕೆಕೆಆರ್ ತಂಡಕ್ಕೆ ತಲೆ ಬಾಗಿತು. ಇದು ಹಾಲಿ ಆವೃತ್ತಿಯಲ್ಲಿ ಆರ್‌ಸಿಬಿ ತಂಡಕ್ಕೆ ಏಳನೇ ಸೋಲಾಗಿದೆ. ತನ್ನ ಕಳಪೆ ಪ್ರದರ್ಶನವನ್ನು ಮತ್ತೊಂದು ಬಾರಿ ಮುಂದುವರಿಸಿ ಅಪಾರ ಅಭಿಮಾನಿಗಳಿಗೆ ಬೇಸರ ಉಂಟು ಮಾಡಿತು.

ಐತಿಹಾಸಿ ಈಡನ್ ಗಾರ್ಡನ್ಸ್ ಸ್ಟೇಡಿಯಮ್‌ನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಆರ್‌ಸಿಬಿ ಬಗಳ ಮೊದಲು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅಂತೆಯೇ ಮೊದಲು ಬ್ಯಾಟ್ ಮಾಡಿದ ಕೆಕೆಆರ್ ತಂಡ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 222 ರನ್ ಬಾರಿಸಿತು. ದೊಡ್ಡ ಗುರಿಯನ್ನು ಬೆನ್ನಟ್ಟಲು ಆರಂಭಿಸಿದ ಆರ್‌ಸಿಬಿ ತಂಡ ತನ್ನೆಲ್ಲ ಓವರ್‌ಗಳು ಮುಕ್ತಾಯಗೊಂಡಾಗ 221 ರನ್‌ಗೆ ಆಲ್‌ಔಟ್ ಆಗಿ ಸೋಲೊಪ್ಪಿಕೊಂಡಿತು.


### ರೋಚಕ ಕೊನೇ ಓವರ್

ಕೊನೇ ಓವರ್‌ನಲ್ಲಿ ಆರ್‌ಸಿಬಿಗೆ ಹೀಗಾಗಿ ಆರ್‌ಸಿಬಿ ಸೋಲು ಖಚಿತವಾಗಿತ್ತು. ಆದರೆ ಎಡಗೈ ಬ್ಯಾಟರ್ ಕರಣ್ ಶರ್ಮಾ ಸ್ಟಾರ್ಕ್ ಓವರ್‌ನ 1, 3 ಮತ್ತು 4ನೇ ಎಸೆತಕ್ಕೆ ಸಿಕ್ಸರ್ ಬಾರಿಸಿದರು. ಈ ವೇಲೆ 3 ಎಸೆತಕ್ಕೆ 3 ರನ್‌ಗಳು ಗೆಲುವಿಗೆ ಬೇಕಾಯಿತು. ಆರ್‌ಸಿಬಿ ಗೆಲ್ಲುವುದೆಂದರೆ ಅಭಿಮಾನಿಗಳು ನಿರೀಕ್ಷಿಸಿದರು. ಐದನೇ ಎಸೆತದಲ್ಲಿ ಕರಣ್ ರಿಟರ್ನ್ ಕ್ಯಾಚ್ ನೀಡಿ ಔಟಾದರು. ಅಲ್ಲದೇ ಆರನೇ ಎಸೆತದಲ್ಲಿ ಒಂದೇ ಒಂದು ರನ್ ಬಾರಿಸಲು ಮಾತ್ರ ಫರ್ಗ್ಯೂಸನ್‌ಗೆ ಸಾಧ್ಯವಾಯಿತು. ಹೀಗಾಗಿ ಆರ್‌ಸಿಬಿ ಒಂದು ರನ್ ನಿಂದ ಸೋತಿತು.




ಇದರೊಂದಿಗೆ ಕೆಕೆಆರ್ ತಂಡ ಗೆಲುವಿನ ಹಳಿಗೆ ಮರಳಿತು. ಕೆಕೆಆರ್ ಉತ್ತಮ ಮೊತ್ತ : ಅದಕ್ಕಿಂತ ಮೊದಲು ಬ್ಯಾಟ್ ಮಾಡಿದ ಕೆಕೆಆರ್ ತಂಡ ಮತ್ತೊಂದು ಬಾರಿ ಆರ್‌ಸಿಬಿ ಬೌಲರ್‌ಗಳನ್ನು ದಂಡಿಸಿದರು. ಆರಂಭಿಕ ಬ್ಯಾಟರ್ ಫಿಲ್ ಸಾಲ್ಟ್ 18 ಎಸೆತಕ್ಕೆ 48 ರನ್ ಬಾರಿಸಿದರೆ ಸುನೀಲ್ ನರೈನ್ 10 ರನ್‌ಗೆ ಔಟಾದರು. ಅಂಗ್ ಕ್ರಿಶ್ ರಘುವಂಶಿ 3 ರನ್‌ಗೆ ಸೀಮಿತಗೊಂಡರೆ ವೆಂಕಟೇಶ್ ಅಯ್ಯರ್ 16 ರನ್ ಬಾರಿಸಿದರು. ಆದರೆ ಶ್ರೇಯಸ್ ಅಯ್ಯರ್ ಅರ್ಧ ಶತಕ ಬಾರಿಸಿ ತಂಡವನ್ನು ಮೇಲಕ್ಕೆತ್ತಿದರು. ರಿಂಕು ಸಿಂಗ್ 24 ರನ್, ರಸೆಲ್ 27 ರನ್ ಕೊನೆಯಲ್ಲಿ ರಮಣ್‌ದೀಪ್ ಸಿಂಗ್ 9 ಎಸೆತಕ್ಕೆ 24 ರನ್ ಬಾರಿಸಿ ದೊಡ್ಡ ಮೊತ್ತ ಪೇರಿಸಲು ನೆರವಾದರು.

### ಮತ್ತೆ ಬ್ಯಾಟಿಂಗ್ ವೈಫಲ್ಯ




ಬ್ಯಾಟಿಂಗ್ ಆರಂಭಿಸಿದ ಆರ್‌ಸಿಬಿ ತಂಡದ ಆರಂಭ ಕಳಪೆಯಾಗಿತ್ತು. ವಿರಾಟ್ ಕೊಹ್ಲಿ 18 ರನ್ ಬಾರಿಸಿ ವಿವಾದಾತ್ಮಕವಾಗಿ ಔಟಾದರೆ, ಫಾಫ್ ಡು ಪ್ಲೆಸಿಸ್ 7 ಎಸೆತಕ್ಕೆ 7 ರನ್ ಮಾಡಿ ಸುಲಭ ಕ್ಯಾಚ್ ನೀಡಿ ಔಟಾದರು. ಆ ಬಳಿಕ ವಿಲ್ ಜ್ಯಾಕ್ಸ್ 32 ಎಸೆತಕ್ಕೆ 55 ರನ್ ಬಾರಿಸಿದರೆ ರಜತ್ ಪಾಟೀದಾರ್ 23 ಎಸೆತಕ್ಕೆ 52 ರನ್ ತಂದುಕೊಟ್ಟರು. ಈ ಜೋಡಿ ಮೂರನೇ ವಿಕೆಟ್‌ಗೆ 103 ರನ್‌ಗಳ ಜತೆಯಾಟವಾಡುವ ಮೂಲಕ ಆರ್‌ಸಿಬಿಗೆ ಚೈತನ್ಯ ದೊರಕಿತು. ಜಾಕ್ಸ್ ಔಟಾದ ಬಳಿಕ ಆರ್‌ಸಿಬಿಯ ಪೇಚಾಟ ಶುರುವಾಯಿತು. 12ನೇ ಓವರ್ ಎಸೆದ ಆಯಂಡ್ರೆ ರಸೆಲ್ ಹಾಗೂ 13ನೇ ಓವರ್ ಎಸೆದ ಸುನೀಲ್ ನರೈನ್‌ಗೆ ವಿಲ್ ಜಾಕ್ಸ್, ರಜತ್ ಪಾಟೀದಾರ್, ಮಹಿಪಾಲ್ ಲಾಮ್ರೋರ್ (4) ಹಾಗೂ ಕ್ಯಾಮೆರಾನ್ ಗ್ರೀನ್ (6) ವಿಕೆಟ್ ಒಪ್ಪಿಸಿದರು. ಎರಡು ಓವರ್‌ಗಳ ಒಳಗೆ ನಾಲ್ಕು ವಿಕೆಟ್ ಬಿದ್ದದ್ದು ಆರ್‌ಸಿಬಿಗೆ ಹೊರೆಯಾಯಿತು. ಇಂಪ್ಯಾಕ್ಟ್ ಪ್ಲೇಯರ್ ಆಗಿ ಆಡಲು ಬಂದ ಸುಯಾಶ್ ಪ್ರಭ್‌ದೇಸಾಯಿ ಕಷ್ಟಪಟ್ಟು 24 ರನ್ ಬಾರಿಸಿದರು. ಈ ವೇಳೆ ದಿನೇಶ್ ಕಾರ್ತಿಕ್ ಆಡಲು ಇಳಿದು ಫಿನಿಶರ್ ಆಗುವ ಪ್ರಯತ್ನ ಮಾಡಿದರು. ವಿಕೆಟ್‌ಗಳ ಪತನದ ಹಿನ್ನೆಲೆಯಲ್ಲಿ ಒತ್ತಡ ತಂದುಕೊಂಡ ಆರ್‌ಸಿಬಿ 25 ರನ್‌ಗಳಿಗೆ ಔಟಾದರು.

# ಕೌರ್ ಕೋಪಕ್ಕೆ ಗುರಿಯಾಗಿದ್ದ

## ಅಂಪೈರ್ ತನ್ವೀರ್‌ಗೆ ಮುಂಬರುವ ಸರಣಿ ಚಾನ್ಸ್

ಬಾಂಗ್ಲಾದೇಶದ ಸಿಲ್ಹೆಟ್ ಇಂಟರ್‌ನ್ಯಾಷನಲ್ ಕ್ರಿಕೆಟ್ ಸ್ಟೇಡಿಯಂನಲ್ಲಿ ಏಪ್ರಿಲ್ 28 ರಂದು ಪ್ರಾರಂಭವಾಗಲಿರುವ ಭಾರತ ಮಹಿಳಾ ಮತ್ತು ಬಾಂಗ್ಲಾದೇಶ ಮಹಿಳೆಯರ ತಂಡಗಳ ನಡುವಿನ ಮುಂಬರುವ ಟಿ 20 ಐ ಸರಣಿಯ ವೇಳೆ ಅಂಪೈರ್ ಪ್ಯಾನೆಲ್‌ನಲ್ಲಿ ತನ್ವೀರ್ ಅವರನ್ನು ಸೇರಿಸಿಲ್ಲ. ಹಿಂದಿನ ಸರಣಿ ವೇಳೆ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಕೋಪಕ್ಕೆ ತನ್ವೀರ್ ಗುರಿಯಾಗಿದ್ದರು. ಹೀಗಾಗಿ ಸಂಭಾವ್ಯ ವಿವಾದಗಳನ್ನು ತಪ್ಪಿಸಲು, ಅಂಪೈರ್ ತನ್ವೀರ್ ಅಹ್ಮದ್ ಮುಂಬರುವ ಸರಣಿಯಲ್ಲಿ ಅಂಪೈರ್ ಆಗಿ ಕಾರ್ಯನಿರ್ವಹಿಸುವುದಿಲ್ಲ.

ಈ ವರ್ಷದ ಆರಂಭದಲ್ಲಿ ಭಾರತ ಮತ್ತ ಬಾಂಗ್ಲಾ ತಂಡಗಳ ನಡುವಿನ ಏಕದಿನ ಸರಣಿಯ ಸಮಯದಲ್ಲಿ ಅಹ್ಮದ್ ಅನಗತ್ಯ ಘಟನೆಯಲ್ಲಿ ಭಾಗಿಯಾಗಿದ್ದರು. ಇದು ಭಾರತೀಯ ಆಟಗಾರರೊಂದಿಗೆ ಉದ್ವಿಗ್ನತೆಗೆ ಕಾರಣವಾಗಿತ್ತು. ಭಾರತ ಮತ್ತು ಬಾಂಗ್ಲಾದೇಶ ನಡುವಿನ 2023 ರ ಏಕದಿನ ಸರಣಿಯಲ್ಲಿ ಅಹ್ಮದ್ ಮತ್ತು ಭಾರತೀಯ ನಾಯಕಿ ಹರ್ಮನ್ಪ್ರೀತ್ ಕೌರ್ ಅವರಿಗೆ ಅನವಶ್ಯಕ ಔಟ್ ಕೊಟ್ಟಿದ್ದಾರೆ ಎಂದು ಹೇಳಲಾಗಿದೆ.

### ತನ್ವೀರ್ ಹೆಸರಿಲ್ಲ: ಇಫ್ತಿಖರ್ ಅಹ್ಮದ್ ಮಿಥ

ಭಾರತೀಯ ಆಟಗಾರರಿಂದ ಯಾವುದೇ ಸಂಭಾವ್ಯ ವಿವಾದ ಅಥವಾ ಹಿನ್ನಡೆ ತಡೆಗಟ್ಟಲು ಟಿ 20 ಐ ಸರಣಿಗೆ ಅಂಪೈರಿಂಗ್ ಸಮಿತಿಯಿಂದ ಅಹ್ಮದ್ ಅವರನ್ನು ಹೊರಗಿಡಲು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ (ಬಿಸಿಬಿ) ನಿರ್ಧರಿಸಿದೆ.

ಅಂತಿಮ ಏಕದಿನ ಪಂದ್ಯದಲ್ಲಿ, ಕೌರ್ ಅವರನ್ನು ಎಲ್‌ಬಿಡಬ್ಲ್ಯು ಎಂದು ಅಹ್ಮದ್ ಬೆರಳು ಎತ್ತಿದರು. ಇದು ಭಾರತೀಯ ನಾಯಕಿಯ ಹತಾಶೆಗೆ ಕಾರಣವಾಗಿತ್ತು. ಅವರು ಸ್ಟಂಪ್‌ಗಳಿಗೆ ಬ್ಯಾಟ್‌ನಿಂದ ಬಡಿದು ಅಂಪೈರ್ ಜತೆ ತೀವ್ರ ವಾಗ್ವಾದದಲ್ಲಿ ತೊಡಗಿದ್ದರು. ಕೌರ್ ಮಾಡಿರುವ ತಪ್ಪುಗಳಿಗಾಗಿ ನಂತರ ಎರಡು ಪಂದ್ಯಗಳ ನಿಷೇಧವನ್ನು ವಿಧಿಸಲಾಯಿತು. ಅದಕ್ಕಿಂತ ಮೊದಲು ಅವರು ಬಾಂಗ್ಲಾದೇಶದ ಆಟಗಾರರನ್ನು ಗೇಲಿ ಮಾಡುವ ಮೂಲಕ ವಿವಾದಕ್ಕೆ ಕಾರಣರಾಗಿದ್ದರು. ಭಾರತ ಮಹಿಳಾ ತಂಡದ ವಿರುದ್ಧದ ಮುಂಬರುವ ತವರು ಸರಣಿಯಲ್ಲಿ ಅವರನ್ನು ಸೇರಿಸಿದರೆ ಭಾರತೀಯ ಮಹಿಳಾ ಕ್ರಿಕೆಟಿಗರು ಅವರನ್ನು ಗುರಿಯಾಗಿಸಬಹುದು. ಅದು ಸಂಭವಿಸಲು ನಾವು ಬಯಸುವುದಿಲ್ಲ. ಇದರ ಪರಿಣಾಮವಾಗಿ, ಬಾಂಗ್ಲಾದೇಶ ಮತ್ತು ಭಾರತ ಮಹಿಳಾ ತಂಡವನ್ನು ಒಳಗೊಂಡ ಸರಣಿಗೆ ಅವರನ್ನು ಸೇರಿಸದಿರಲು ನಾವು ನಿರ್ಧರಿಸಿದ್ದೇವೆ'' ಎಂದು ಬಿಸಿಬಿ ಅಧಿಕಾರಿಯೊಬ್ಬರು ಕ್ರಿಕ್‌ಬಜ್‌ಗೆ ತಿಳಿಸಿದ್ದಾರೆ. ಬಿಸಿಬಿಯ ಅಂಪೈರ್ ಸಮಿತಿಯ ಅಧ್ಯಕ್ಷ ಇಫ್ತಿಖರ್ ಅಹ್ಮದ್ ಮಿಥು ಈ ನಿರ್ಧಾರವನ್ನು ವಿವರಿಸಿದ್ದಾರೆ. ''ಭಾರತ ಮಹಿಳಾ ತಂಡದ ವಿರುದ್ಧದ ತವರು ಸರಣಿಗೆ ತನ್ವೀರ್ ಅವರನ್ನು ಪಂದ್ಯದ ಅಧಿಕಾರಿಗಳ ಪಟ್ಟಿಯಲ್ಲಿ ಸೇರಿಸಲಾಗಿಲ್ಲ, ಏಕೆಂದರೆ ಅವರು ಜಿಂಬಾಬ್ವೆ ವಿರುದ್ಧದ ತವರು ಸರಣಿಯಲ್ಲಿ ಭಾಗಿಯಾಗಬೇಕೆಂದು ನಾವು ಬಯಸುತ್ತೇವೆ. ಎರಡೂ ಸರಣಿಗಳನ್ನು ಅಕ್ಕಪಕ್ಕದಲ್ಲಿ ಆಡಲಾಗುವುದು'' ಎಂದು ಅವರು ಹೇಳಿದರು.




# ರೋಹಿತ್ ಆಕ್ಷೇಪದ ಬೆನ್ನಲ್ಲೇ ಇಂಪ್ಯಾಕ್ಟ್ ನಿಯಮ ಕೈಬಿಡಲು ಚಿಂತನೆ ನಡೆಸಿದ ಐಪಿಎಲ್ ಮಂಡಳಿ




ಮುಂಬಯಿ: ಕೆಲವು ದಿನಗಳ ಹಿಂದಷ್ಟೇ ಟೀಮ್ ಇಂಡಿಯಾದ ನಾಯಕ ರೋಹಿತ್ ಶರ್ಮಾಅವರು ಐಪಿಎಲ್‌ನಲ್ಲಿ ಜಾರಿಯಲ್ಲಿರುವ ಇಂಪ್ಯಾಕ್ಟ್ ನಿಯಮದಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ಈ ನಿಯಮದಿಂದ ಭಾರತೀಯ ಕ್ರಿಕೆಟ್‌ಗೆ ದೊಡ್ಡ ನಷ್ಟವಾಗುತ್ತಿದೆ ಎಂದು ಹೇಳಿದ್ದರು.

ಇದೀಗ ಈ ವಿಚಾರವನ್ನು ಬಿಸಿಸಿಐಮತ್ತು ಐಪಿಎಲ್ (ಐಪಿಎಲ್ 2024) ಮಂಡಳಿ ಗಂಭೀರವಾಗಿ ಪರಿಗಣಿಸಿದ್ದು ಈ ನಿಯಮದ ಬಗ್ಗೆ ಚರ್ಚಿಸುವ ಅಗತ್ಯವಿದೆ ಎಂದು ಹೇಳಿದೆ. ಇದೇ ವಿಚಾರವಾಗಿ ಪ್ರತಿಕ್ರಿಯೆ ನೀಡಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಅಧ್ಯಕ್ಷ ಅರುಣ್ ಧುಮಾಲ್ ರೋಹಿತ್ ಶರ್ಮಾ ಈ ಹಿಂದೆಯೂ ಇಂಪ್ಯಾಕ್ಟ್ ಪ್ಲೇಯರ್ ನಿಯಮದ ನ್ಯೂನತೆಗಳನ್ನ ತೋರಿಸಿದ್ದರು.

2ನೇ ಬಾರಿಗೆ ಅವರು ಈ ವಿಚಾರದ ಬಗ್ಗೆ ಮಾತನಾಡುತ್ತಾರೆ ಎಂದರೆ ಈ ವಿಚಾರವಾಗಿ ಗಂಭೀರ ಚರ್ಚೆ ನಡೆಸುವ ಅಗತ್ಯವಿದೆ. ಪ್ರತಿಯೊಂದು ನಿಯಮಕ್ಕೂ ಸಾಧಕ ಬಾಧಕಗಳಿವೆ. ಇದನ್ನು ಯಾರಾದರು ಹೇಳಿದರೆ ಆಗ ತಿದ್ದಿಕೊಳ್ಳಬಹುದು.

ಈ ಆವೃತ್ತಿ ಮುಗಿದ ಬಳಿಕ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಈ ನಿಯಮದ ಕುರಿತು ಪರಿಶೀಲಿಸಲಿದೆ ಎಂದು ಧುಮಾಲ್ ಹೇಳಿದರು. ರೋಹಿತ್ ಶರ್ಮಾ ಮಾತ್ರವಲ್ಲದೆ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಮುಖ್ಯ ಕೋಚ್ ರಿಕಿ ಪಾಂಟಿಂಗ್ ಸೇರಿ ಇನ್ನು ಅನೇಕರು ಈ ನಿಯಮದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ಇದೀಗ ಅರುಣ್ ಧುಮಾಲ್ ಹೇಳಿದ ಮಾತುಗಳನ್ನು ಗಮನಿಸುವಾಗ ಮುಂದಿನ ಆವೃತ್ತಿಯಲ್ಲಿ ಈ ನಿಯಮ ಕೈಬಿಡುವ ಸೂಚನೆಯೊಂದು ಲಭಿಸಿದಂತಿದೆ.

### ರೋಹಿತ್ ಹೇಳಿದ್ದೇನು

'ಕ್ರಿಕೆಟ್ 11 ಜನ ಆಡುವ ಆಟ, 12 ಜನರಿಂದಲ್ಲ, ಇಂಪ್ಯಾಕ್ಟ್ ಆಟಗಾರ ನಿಯಮದಿಂದಾಗಿ ನೈಜ ಕ್ರಿಕೆಟ್‌ಗೆ ಹಾನಿಯಾಗಿದೆ. ಇದು ಮನರಂಜನೆ ಒದಗಿಸಬಹುದೇ ಹೊರತು ಕ್ರಿಕೆಟ್ ಬೆಳವಣಿಗೆಗೆ ಅಪಾಯಕಾರಿ. ಈ ನಿಯಮದಿಂದ ಓರ್ವ ಆಟಗಾರನಿಗೆ ತನ್ನ ಸಾಮರ್ಥ್ಯವನ್ನು ತೋರ್ಪಡಿಸುವ ಅವಕಾಶ ಸಿಗುತಿಲ್ಲ. ಉದಾಹರಣೆಗೆ ಶಿವಂ ದುಬೆ, ವಾಷಿಂಗ್ಟನ್ ಸುಂದರ್ ಸೇರಿದಂತೆ ಅನೇಕ ಆಲ್ರೌಂಡರ್‌ಗಳಿಗೆ ಬ್ಯಾಟಿಂಗ್ ಸಿಕ್ಕರೆ ಬೌಲಿಂಗ್ ಸಿಗುತ್ತಿಲ್ಲ. ಬೌಲಿಂಗ್ ಸಿಕ್ಕರೆ ಬ್ಯಾಟಿಂಗ್ ಸಿಗುತ್ತಿಲ್ಲ'' ಎಂದು ರೋಹಿತ್ ಕಳವಳ ವ್ಯಕ್ತಪಡಿಸಿದ್ದರು.



# ಪ್ರೇಮಲು ಚಿತ್ರ ಪ್ರೇಕ್ಷಕರಿಗೆ

## ಗುಡ್ ನ್ಯೂಸ್- ಸೀಕ್ವೆಲ್‌ಗೆ ಸಿದ್ಧತೆ

'ಪ್ರೇಮಲು' ಸಿನಿಮಾದ ಪ್ರೇಮಕಥೆಗೆ ಅಭಿಮಾನಿಗಳು ಫಿದಾ ಆಗಿದ್ದರು. ವಿಭಿನ್ನ ಪ್ರೇಮಕಥೆಯನ್ನು ತೋರಿಸುವ ಮೂಲಕ ಚಿತ್ರತಂಡ ಗೆದ್ದಿದ್ದಾರೆ. ಇದೀಗ ಪ್ರೇಮಲು ಪಾರ್ಟ್ 2ಗೂ ಕೂಡ ಭಿನ್ನ ಕಥೆಯನ್ನೇ ಆಯ್ಕೆ ಮಾಡಿದ್ದಾರೆ. ಸಿನಿಮಾ ಬರುವವರೆಗೂ ಕಾಯಬೇಕಿದೆ. ಇದೀಗ 'ಪ್ರೇಮಲು' ಸಿನಿಮಾವನ್ನು ಮೆಚ್ಚಿ ಕೊಂಡಾಡಿದ್ದ ಫ್ಯಾನ್ಸ್‌ಗೆ ಇದರ ಸೀಕ್ವೆಲ್ ಬಗ್ಗೆ ಅಪ್‌ಡೇಟ್ ನೀಡುವ ಮೂಲಕ ಚಿತ್ರತಂಡ ಗುಡ್ ನ್ಯೂಸ್ ಕೊಟ್ಟಿದ್ದಾರೆ. ಸದ್ಯ ಈ ಸುದ್ದಿ ಕೇಳಿ ಅಭಿಮಾನಿಗಳು ಥ್ರಿಲ್ ಆಗಿದ್ದಾರೆ.

ಮಾಲಿವುಡ್ ಸೂಪರ್ ಹಿಟ್ 'ಪ್ರೇಮಲು' ಚಿತ್ರ ಫೆ.9ರಂದು ರಿಲೀಸ್ ಆಗಿ ಸಕ್ಸಸ್ ಕಂಡಿದೆ. 100 ಕೋಟಿ ರೂ.ಗಿಂತ ಅಧಿಕ ಕಲೆಕ್ಷನ್ ಮಾಡಿದೆ. ಇದೀಗ ಒಟಿಟಿಯಲ್ಲಿ ಬಿಡುಗಡೆಯಾದ್ಮೇಲೆ ಕೂಡ ಪ್ರೇಕ್ಷಕರಿಂದ ಮೆಚ್ಚುಗೆ ಪಡೆದಿತ್ತು. ಪ್ರೇಮಲು ಪಾರ್ಟ್ 2 ಬರುತ್ತಾ ಎಂಬುದಕ್ಕೆ ಚಿತ್ರದ ನಿರ್ದೇಶಕ ಗಿರೀಶ್ ಎ.ಡಿ ಸ್ಪಷ್ಟನೆ ನೀಡಿದ್ದಾರೆ. 'ಪ್ರೇಮಲು' ಸಿನಿಮಾದ ಸೀಕ್ವೆಲ್‌ಗೆ 'ಪ್ರೇಮಲು 2' ಎಂದು ಟೈಟಲ್ ಇಡಲಾಗಿದೆ. ಈ ಬಗ್ಗೆ ನಿರ್ದೇಶಕ ಗಿರಿಶ್ ಎ.ಡಿ ಚಿತ್ರದ ಸಕ್ಸಸ್ ಮೀಟ್‌ನಲ್ಲಿ ಮಾಹಿತಿ ನೀಡಿದ್ದಾರೆ. 'ಪ್ರೇಮಲು ಚಿತ್ರಕ್ಕಿಂತ ಹೆಚ್ಚಿನ ಫನ್ ಹಾಗೂ ಎನರ್ಜಿ' ಸಿಗಲಿದೆ ಎಂದು ನಿರ್ದೇಶಕರು ಹೇಳಿದ್ದಾರೆ. ಈ ಸಿನಿಮಾ 2025ರಲ್ಲಿ ರಿಲೀಸ್ ಆಗಲಿದೆಯಂತೆ. ಈ ಚಿತ್ರದ ಪ್ರಮುಖ ನಿರ್ಮಾಪಕ ಫಹಾದ್ ಫಾಸಿಲ್ ಅವರು ಸೋಶಿಯಲ್ ಮೀಡಿಯಾದಲ್ಲಿ ಈ ವಿಚಾರವನ್ನು ಖಚಿತಪಡಿಸಿದ್ದಾರೆ.

ಚಿತ್ರದಲ್ಲಿ ನಸ್ಲೆನ್ ಮಮಿತಾ ಬೈಜು ಲೀಡ್ ರೋಲ್‌ನಲ್ಲಿ ನಟಿಸಿದ್ದರು.



### 'ಕಲ್ಕಿ 2898 ಎಡಿ' ಬಿಗ್ ಅಪ್‌ಡೇಟ್ – ಅಮಿತಾಭ್ ಬಚ್ಚನ್ ಪೋಸ್ಟರ್ ಔಟ್



ಪ್ರಭಾಸ್, ದೀಪಿಕಾ ಪಡುಕೋಣೆ ನಟನೆಯ 'ಕಲ್ಕಿ 2898 ಎಡಿ' ಸಿನಿಮಾದಲ್ಲಿ ಅಮಿತಾಭ್ ಬಚ್ಚನ್ ಕೂಡ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಚಿತ್ರದಲ್ಲಿ ಬಿಗ್ ಬಿ ಲುಕ್ ಹೇಗಿರಲಿದೆ ಎಂಬುದರ ಝಲಕ್ ಹಂಚಿಕೊಂಡಿದೆ ಚಿತ್ರತಂಡ. ಅಮಿತಾಭ್ ಪಾತ್ರದ ಪೋಸ್ಟರ್ ಇದೀಗ ರಿವೀಲ್ ಆಗಿದೆ. ಸ್ಟಾರ್ ಕಲಾವಿದರ ದಂಡೇ ಇರುವ 'ಕಲ್ಕಿ' ಸಿನಿಮಾದಲ್ಲಿ ಹಿರಿಯ ನಟ ಬಿಗ್ ಬಿ ಪಾತ್ರದ ಪೋಸ್ಟರ್ ರಿವೀಲ್ ಮಾಡುವ ಮೂಲಕ ನಿರೀಕ್ಷೆ ಹುಟ್ಟಿಸಿದ್ದಾರೆ. ದೇವಸ್ಥಾನದ ಎದುರು ಬಿಗ್ ಬಿ ಕುಳಿತಿದ್ದಾರೆ. ಕಣ್ಣಿಗೆ ಸೂರ್ಯ ಕಿರಣ ಬಿದ್ದಿದೆ. ಮೈತುಂಬಾ ಬಟ್ಟೆ ಸುತ್ತಿಕೊಂಡಿದ್ದಾರೆ.

ಕಣ್ಣಿನ ನೋಟ ಖಡಕ್ ಆಗಿದೆ. ಪೋಸ್ಟರ್‌ನಲ್ಲಿ ಈಗ ಸಮಯ ಬಂದಿದೆ ಎಂದು ಅಡಿಬರಹ ನೀಡಿದ್ದಾರೆ. ಅವರ ಕ್ಯಾರೆಕ್ಟರ್ ಕುರಿತು ಇಂದು ಸಂಜೆ (ಏ.21) ಮತ್ತಷ್ಟು ಮಾಹಿತಿ ಸಿಗಲಿದೆ. ನಾಗ್ ಅಶ್ವಿನ್ ನಟನೆಯ ಸಿನಿಮಾದಲ್ಲಿ ಅಮಿತಾಭ್, ಕಮಲ್ ಹಾಸನ್, ದಿಶಾ ಪಟಾನಿ ಸೇರಿದಂತೆ ಹಲವರು ನಟಿಸಿದ್ದಾರೆ. ವೈಜಯಂತಿ ಮೂವೀಸ್ ಚಿತ್ರವನ್ನು ನಿರ್ಮಾಣ ಮಾಡುತ್ತಿದೆ. ಪ್ರಭಾಸ್, ದೀಪಿಕಾ ಪಡುಕೋಣೆ ಮೊದಲ ಬಾರಿಗೆ ನಟಿಸಿರುವ ಈ ಸಿನಿಮಾ ಸದ್ಯದಲ್ಲೇ ಬಹುಭಾಷೆಗಳಲ್ಲಿ ರಿಲೀಸ್ ಆಗಲಿದೆ.



# ರಶ್ಮಿಕಾ ಮಂದಣ್ಣ ಹೊಗಳಿದ ಮಾನುಷಿ ಚಿಲ್ಲರ್

ಬಾಲಿವುಡ್ ಬೆಡಗಿ ಮಾನುಷಿ ಚಿಲ್ಲರ್ ಬಾಲಿವುಡ್‌ನ ಹಲವು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಇದೀಗ 'ಅನಿಮಲ್' ಚಿತ್ರದಲ್ಲಿನ ರಶ್ಮಿಕಾ ಮಂದಣ್ಣ ನಟನೆ ಅದ್ಭುತವಾಗಿದೆ ಎಂದು ಮಾನುಷಿ ಹಾಡಿ ಹೊಗಳಿದ್ದಾರೆ.

ಇತ್ತೀಚಿನ ಸಂದರ್ಶನವೊಂದರಲ್ಲಿ ಸಂದೀಪ್ ರೆಡ್ಡಿ ವಂಗಾ ನಿರ್ದೇಶನದ ಚಿತ್ರದ ಕುರಿತು ನಟಿ ಮಾತನಾಡಿದ್ದಾರೆ. 'ಅನಿಮಲ್' ಚಿತ್ರದಲ್ಲಿ ನಟಿಸಲು ಮೊದಲು ಮಾನುಷಿಗೆ ಆಫರ್ ಬಂದಿತ್ತು ಎಂದು ಸುದ್ದಿಯೊಂದು ಹಬ್ಬಿತ್ತು. ಇದನ್ನೇ ಸಂದರ್ಶನದಲ್ಲಿ ಕೇಳಲಾಯ್ತು. ಈ ಸುದ್ದಿ ಸುಳ್ಳು ಎಂದು ನಟಿ ಸ್ಪಷ್ಟನೆ ನೀಡಿದ್ದರು.

ಒಂದು ವೇಳೆ ಚಿತ್ರದಲ್ಲಿ ನಟಿಸುವ ಅವಕಾಶ ಸಿಕ್ಕಿದ್ದರೆ, ರಶ್ಮಿಕಾ ಮಂದಣ್ಣ, ತೃಪ್ತಿ ದಿಮ್ರಿ ನಟಿಸಿದ ಪಾತ್ರಗಳ ನಡುವೆ ಯಾವ ರೋಲ್‌ಗೆ ಪ್ರಾಮುಖ್ಯತೆ ನೀಡುತ್ತಿದ್ದೀರಿ ಎಂದು ನಿರೂಪಕಿ ಮರು ಪ್ರಶ್ನೆ ಮಾಡಿದ್ದಾರೆ. ಆಗ ಮಾನುಷಿ, ಎರಡು ಪಾತ್ರಗಳು ಅದ್ಭುತವಾಗಿದೆ. ಆದರೆ ರಶ್ಮಿಕಾ ನಟಿಸಿದ ಪಾತ್ರ ತುಂಬಾ ಇಷ್ಟವಾಯಿತು ಎಂದಿದ್ದಾರೆ. ರಶ್ಮಿಕಾ ನಟಿಸಿದ ಪಾತ್ರದಲ್ಲೇ ನಾನು ಕೂಡ ನಟಿಸಲು ಇಷ್ಟಪಡುತ್ತೇನೆ ಎಂದಿದ್ದಾರೆ.

ರಣ್‌ಬೀರ್ ಕಪೂರ್ ಪತ್ನಿಯ ಪಾತ್ರದಲ್ಲಿ ಅದ್ಭುತವಾಗಿ ನಟಿಸಿದ್ದಾರೆ. ಪತ್ನಿಯಾಗಿ ರಣ್‌ಬೀರ್‌ಗೆ ಪ್ರಶ್ನಿಸಿ ನಿಲ್ಲುವ ರೀತಿ ಚೆನ್ನಾಗಿದೆ. ಗೀತಾಂಜಲಿ ಪಾತ್ರ (ರಶ್ಮಿಕಾ ಮಂದಣ್ಣ) ನಟನೆಗೆ ಉತ್ತಮ ಅವಕಾಶ ಕಲ್ಪಿಸಿ ಕೊಟ್ಟಿದ್ದಾರೆ. ಅದನ್ನು ನಟಿ ಚೆನ್ನಾಗಿ ನಿಭಾಯಿಸಿದ್ದಾರೆ ಎಂದು ಮಾನುಷಿ ಮಾತನಾಡಿದ್ದಾರೆ.

2017ರಲ್ಲಿ ಮಾನುಷಿ ಚಿಲ್ಲರ್ ವಿಶ್ವಸುಂದರಿ ಪಟ್ಟ ಅಲಂಕರಿಸಿದ್ದರು. ಬಳಿಕ ಬಾಲಿವುಡ್ ಮತ್ತು ತೆಲುಗು ಸಿನಿಮಾಗಳಲ್ಲಿ ಇದೀಗ ನಟಿ ಆಯಕ್ಟೀವ್ ಆಗಿದ್ದಾರೆ.

# ಕಿಚ್ಚನ ಕುಟುಂಬದ ಜೊತೆ ಊಟ ಸವಿದ ವಿನಯ್ ಗೌಡ

ಕಿಚ್ಚ ಸುದೀಪ್ ಸದ್ಯ 'ಮ್ಯಾಕ್ಸ್' ಸಿನಿಮಾದ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದ್ದಾರೆ. ಚಿತ್ರೀಕರಣಕ್ಕೆ ಬ್ರೇಕ್ ಸಿಗುತ್ತಿದ್ದಂತೆ ವಿನಯ್ ಗೌಡರನ್ನು ಭೇಟಿಯಾಗಿದ್ದಾರೆ. ಕಿಚ್ಚನ ಕುಟುಂಬದ ಜೊತೆಯಿರುವ ಸುಂದರ ಫೋಟೋವನ್ನು ವಿನಯ್ ಶೇರ್ ಮಾಡಿ 'ಹಂಬಲ್ ಫ್ಯಾಮಿಲಿ' ಎಂದು ಬಣ್ಣಿಸಿದ್ದಾರೆ.

ಹಂಬಲ್ ಫ್ಯಾಮಿಲಿ. ಅದ್ಭುತ ಊಟಕ್ಕೆ ಧನ್ಯವಾದ. ಡೆಸರ್ಟ್ ಅತ್ಯುತ್ತಮವಾಗಿತ್ತು ಎಂದು ಬರೆದಿದ್ದಾರೆ ವಿನಯ್. ಈ ಪೋಸ್ಟ್‌ಗೆ ಸಾನ್ವಿ ಅವರು ರಿಪ್ಲೈ ಮಾಡಿದ್ದು, ಹಾರ್ಟ್ ಎಮೋಜಿ ಹಾಕಿದ್ದಾರೆ. ಕಿಚ್ಚನ ಡೌನ್ ಟು ಅರ್ಥ್ ಗುಣ ನೋಡಿ ಅಭಿಮಾನಿಗಳು ಖುಷಿ ಪಟ್ಟಿದ್ದಾರೆ. ಊಟ ಮಾತ್ರವಲ್ಲ ಕಿಚ್ಚನ ಜೊತೆ ವಿನಯ್ ಕೆಲ ಕಾಲ ಕಳೆದಿದ್ದಾರೆ.

ಬಿಗ್ ಬಾಸ್ ಕನ್ನಡ 10 ಫಿನಾಲೆ ಮುಗಿದ ಮೇಲೆ ಸ್ಪರ್ಧಿಗಳನ್ನು ಸುದೀಪ್ ಭೇಟಿಯಾಗಿರಲಿಲ್ಲ. ಬಿಗ್ ಬಾಸ್ ಶೋ ಬಳಿಕ ಒಪ್ಪಿಕೊಂಡಿರುವ ಸಿನಿಮಾದಲ್ಲಿ ಸುದೀಪ್ ಬ್ಯುಸಿಯಾಗಿದ್ದರು. ಮೊನ್ನೆಯಷ್ಟೇ (ಏ.19) ಬಿಗ್ ಬಾಸ್ ವಿನ್ನರ್ ಕಾರ್ತಿಕ್‌ರನ್ನು 'ಮ್ಯಾಕ್ಸ್' ಸಿನಿಮಾ ಸೆಟ್‌ನಲ್ಲಿ ಭೇಟಿಯಾಗಿದ್ದರು. ಈಗ ವಿನಯ್‌ರನ್ನು ಕಿಚ್ಚ ಭೇಟಿಯಾಗಿರೋದು ಅಭಿಮಾನಿಗಳ ಗಮನ ಸೆಳೆದಿದೆ.

# ಜ್ಯೂ.ಎನ್‌ಟಿಆರ್ ಸೊಂಟ ಬಳುಕಿಸಲಿದ್ದಾರೆ ಪೂಜಾ ಹೆಗ್ಡೆ

ಕುಡ್ಲದ ಸುಂದರಿ ಪೂಜಾ ಹೆಗ್ಡೆ ಇತ್ತೀಚೆಗೆ ಬಾಲಿವುಡ್ ನಟ ರೋಹನ್ ಮೆಹ್ರಾ ಜೊತೆಗಿನ ಡೇಟಿಂಗ್ ವಿಚಾರವಾಗಿ ಭಾರೀ ಸುದ್ದಿಯಾಗಿದ್ದರು. ಈ ಬೆನ್ನಲ್ಲೇ, ಮತ್ತೆ ಸಿನಿಮಾದ ವಿಚಾರವಾಗಿ ಪೂಜಾ ಹೆಗ್ಡೆ ಚಾಲ್ತಿಗೆ ಬಂದಿದ್ದಾರೆ. ಜ್ಯೂ.ಎನ್‌ಟಿಆರ್ ನಟನೆಯ ಹೊಸ ಸಿನಿಮಾದಲ್ಲಿ ಐಟಂ ಹಾಡಿಗೆ ಹೆಜ್ಜೆ ಹಾಕಲು ರೆಡಿಯಾಗಿದ್ದಾರೆ.

ಜ್ಯೂ.ಎನ್‌ಟಿಆರ್– ಜಾನ್ವಿ ಕಪೂರ್ ನಟನೆಯ 'ದೇವರ' ಸಿನಿಮಾಗೆ ಪೂಜಾ ಹೆಗ್ಡೆ ಎಂಟ್ರಿ ಕೊಡಲಿದ್ದಾರೆ.

ನಟಿಸಲು ಅಲ್ಲ, ಬದಲಿಗೆ ತಾರಕ್ ಜೊತೆ ಸ್ಪೆಷಲ್ ಸಾಂಗ್‌ವೊಂದಕ್ಕೆ ಹೆಜ್ಜೆ ಹಾಕಲು ಬರುತ್ತಿದ್ದಾರೆ.

ಸೂಪರ್ ಆಗಿರೋ ಐಟಂ ಹಾಡಿಗೆ ನಟಿ ಸೊಂಟ ಬಳುಕಿಸಲಿದ್ದಾರೆ. ಈಗಾಗಲೇ 'ದೇವರ' ಚಿತ್ರತಂಡ ಪೂಜಾಗೆ ಸಂಪರ್ಕಿಸಿದೆ. ಐಟಂ ಸಾಂಗ್ ಬಗ್ಗೆ ಮಾತನಾಡಿ ಆಗಿದೆ. ನಟಿ ಕೂಡ ಓಕೆ ಎಂದಿದ್ದಾರೆ. ನಿರ್ಮಾಣ ಸಂಸ್ಥೆಯಿಂದ ಅಧಿಕೃತ ಮಾಹಿತಿ ಬರುವವರೆಗೂ ಕಾಯಬೇಕಿದೆ.

ಅಂದಹಾಗೆ, 2018ರಲ್ಲಿ 'ಅರವಿಂದ ಸಮೇತ ವೀರ ರಾಘವ' ಸಿನಿಮಾದಲ್ಲಿ ಜ್ಯೂ.ಎನ್‌ಟಿಆರ್‌ಗೆ ನಾಯಕಿಯಾಗಿ ಪೂಜಾ ನಟಿಸಿದ್ದರು. ಇದೀಗ 2ನೇ ಬಾರಿ ಈ ಹಿಟ್ ಕಾಂಬಿನೇಷನ್ ದೇವರ ಚಿತ್ರದ ಮೂಲಕ ಒಂದಾಗುತ್ತಿದೆ.





Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966